prajavani.net prajavani | ಸೋಮವಾರ, ಏಪ್ರಿಲ್ 6, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 95 | ಪುಟ 12 | www.prajavani.net

ಪಡಿಕ್ಕಲ್ ಅರ್ಧಶತಕ

ಆರ್‌ಸಿಬಿ ತಂಡದ ದೇವದತ್ತ ಪಡಿಕ್ಕಲ್ (50 ರನ್;29ಎಸೆತ) ಭಾನುವಾರ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಅರ್ಧಶತಕ ದಾಖಲಿಸಿದರು. ಆರ್‌ಸಿಬಿ 43 ರನ್‌ಗಳಿಂದ ಜಯಿಸಿತು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ವಿಚ್ಛೇದಿತ ಪುತ್ರಿಗೆ ತಂದೆಯಿಂದ 'ಸಂಭ್ರಮ'ದ ಸ್ವಾಗತ 9

ಇಲ್ಲ ಖಾತರಿ ಕೂಲಿ, ಊರು ಖಾಲಿ

ಹೊಸ ಕಾಮಗಾರಿ ಸೃಷ್ಟಿಸದ ನರೇಗಾ, ಅನುಷ್ಠಾನವಾಗದ ವಿಬಿ ಜಿರಾಮ್‌ಜಿ

● ಕಿತ್ತೂರು–ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ತಟ್ಟಿದ ಹೆಚ್ಚಿನ ಬಿಸಿ


ಪ್ರಜಾವಾಣಿ ವಿಶೇಷ

ಹುಬ್ಬಳ್ಳಿ/ಕಲಬುರಗಿ/ಬೆಂಗಳೂರು: ನರೇಗಾ ಬದಲಿಗೆ ವಿಬಿ ಜಿರಾಮ್‌ಜಿ ಅನುಷ್ಠಾನವಾಗದೇ ಇರುವುದರ ಬಿಸಿ ರಾಜ್ಯದಲ್ಲಿ ತೀವ್ರವಾಗಿ ತಟ್ಟಿರುವುದು ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ. ರಾಜ್ಯದ ಈ ಭಾಗದಲ್ಲಿ ಉದ್ಯೋಗ ಖಾತರಿ ಅಡಿ ಕೆಲಸಕ್ಕೆ ಬೇಡಿಕೆ ಇದ್ದರೂ, ಅನುದಾನ ಮತ್ತು ಅನುಮೋದನೆ ಇಲ್ಲದ ಕಾರಣ ಕೆಲಸ ಸೃಜನೆ ಆಗುತ್ತಿಲ್ಲ.

ಪರಿಣಾಮವಾಗಿ ಈ ಭಾಗದ ಜನರು ಕೆಲಸ ಅರಸಿ ಬೇರೆ ಜಿಲ್ಲೆಗಳು ಮತ್ತು ಹೊರ ರಾಜ್ಯಗಳತ್ತ ಗುಳೆ ಹೋಗಲಾರಂಭಿಸಿದ್ದಾರೆ.

2025ರ ಡಿಸೆಂಬರ್‌ನಲ್ಲಿಯೇ ವಿಬಿ ಜಿರಾಮ್‌ಜಿ ಜಾರಿಯಾಗಿದೆ. ಕೇಂದ್ರ ಸರ್ಕಾರವು ನಿಯಮ ಮತ್ತು ಮಾರ್ಗಸೂಚಿ ರಚನೆ ಮಾಡದೇ ಇರುವುದರಿಂದ ನೂತನ ಯೋಜನೆ ಅನುಷ್ಠಾನವಾಗಿಲ್ಲ. ಆದರೆ ನರೇಗಾ ಅಡಿ ಹೊಸ ಕಾಮಗಾರಿ ತೆಗೆದುಕೊಳ್ಳುವುದನ್ನು 2026ರ ಜನವರಿಯಿಂದಲೇ ಸ್ಥಗಿತಗೊಳಿಸಲಾಗಿದೆ. ಬಾಕಿ ಇರುವ ಕಾಮಗಾರಿಗಳನ್ನಷ್ಟೇ ಮುಂದುವರಿಸಲಾಗುತ್ತಿದೆ. ಪರಿಣಾಮವಾಗಿ, ಜನರಿಂದ ಬೇಡಿಕೆ ಇದ್ದರೂ ಕೆಲಸ ಒದಗಿಸಲು ಸಾಧ್ಯವಾಗುತ್ತಿಲ್ಲ. 9

ಜಿಲ್ಲಾವಾರು ಸ್ಥಿತಿ–ಗತಿ



ಗ್ರಾಮ ಪಂಚಾಯಿತಿಗಳಿಂದ ಕ್ರಿಯಾಯೋಜನೆ ಸಿದ್ಧಪಡಿಸಿ ಜಿಲ್ಲಾ ಪಂಚಾಯಿತಿಗೆ ಕಳುಹಿಸಿದ್ದರೂ ಅನುಮೋದನೆ ಸಿಕ್ಕಿಲ್ಲ. ನರೇಗಾ/ವಿಬಿ ಜಿರಾಮ್‌ಜಿ ಲಾಗಿನ್ ಆಗಲು ಜಿಲ್ಲಾ ಪಂಚಾಯಿತಿಗೆ ಅವಕಾಶವೇ ಇಲ್ಲದಂತಾಗಿದೆ

2025ರ ಏಪ್ರಿಲ್‌ನಲ್ಲಿ 1.5 ಲಕ್ಷ ಕಾರ್ಮಿಕರು ನರೇಗಾದಡಿ ಕೈಗೊಂಡ ವಿವಿಧ ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿದ್ದರು. ಆದರೆ, 2026ರ ಏಪ್ರಿಲ್‌ರಂದು ಜಿಲ್ಲೆಯಾದ್ಯಂತ ಕೇವಲ 7,884 ಜನರಿಗೆ ಕೂಲಿ ಸಿಕ್ಕಿದೆ

ಜಿಲ್ಲೆಯಲ್ಲಿ ಹಿಂದಿನ ಆರ್ಥಿಕ ವರ್ಷದ ಕಾಮಗಾರಿಗಳು ಪ್ರಗತಿಯಲ್ಲಿವೆ. 2026–27ನೇ ಸಾಲಿನ ಏಪ್ರಿಲ್‌ನಲ್ಲಿ 1.69 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿ ಗುರಿ ನೀಡಲಾಗಿದೆ. ಆದರೆ ಹಿಂದಿನ ವರ್ಷದ ಬಾಕಿ ಕೂಲಿಯೇ ₹35 ಕೋಟಿಯಷ್ಟಿದೆ

ನರೇಗಾ ಅಡಿಯಲ್ಲಿಯೇ ಬಾಕಿ ಕಾಮಗಾರಿಗಳು ನಡೆಯುತ್ತಿವೆ. ಆದರೆ ಈ ಹಿಂದೆ ಇದ್ದಷ್ಟು ಉದ್ಯೋಗಾವಕಾಶ ಇಲ್ಲ

ಜಿಲ್ಲೆಯಲ್ಲಿ 2.60 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿ ಗುರಿ ನೀಡಿದ್ದರೂ, ಇಡೀ ಜಿಲ್ಲೆಯಲ್ಲಿ ಈಗ 2,450 ಜನರಿಗಷ್ಟೇ ಉದ್ಯೋಗ ಸಿಕ್ಕಿದೆ

ಜಿಲ್ಲೆಯಲ್ಲಿ ನರೇಗಾ ಅಡಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಮಾಡುತ್ತಿದ್ದರು. ಈಗ ಉದ್ಯೋಗವಿಲ್ಲದ ಕಾರಣ ಮಹಿಳೆಯರ ಆರ್ಥಿಕ ಶಕ್ತಿ ಕಸಿದುಕೊಂಡಂತಾಗಿದೆ. ಕೃಷಿಯಾಚೆಗೆ ನರೇಗಾವನ್ನು ಆಧರಿಸಿದ್ದ ಕುಟುಂಬಗಳು ಕೆಲಸ ಅರಸಿ ಗುಳೆ ಹೊರಟಿವೆ

ನರೇಗಾ ಅಡಿ ಬಾಕಿಯಾಗಿದ್ದ ಕಾಮಗಾರಿಗಳನ್ನೇ ಮುಂದುವರಿಸಲಾಗಿದ್ದು, ಬೇಡಿಕೆ ಇದ್ದರೂ ಜನರಿಗೆ ಉದ್ಯೋಗ ನೀಡಲಾಗುತ್ತಿಲ್ಲ. ಜನರು ಉದ್ಯೋಗ ಅರಸಿ ಮಹಾರಾಷ್ಟ್ರ, ತೆಲಂಗಾಣ, ಕೇರಳ ಮತ್ತು ರಾಜ್ಯದ ಮಲೆನಾಡಿನತ್ತ ಗುಳೆ ಹೊರಟಿದ್ದಾರೆ

ಹೊಸದಾಗಿ ಯಾವುದೇ ಕಾಮಗಾರಿ ಕೈಗೊಂಡಿಲ್ಲ. ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತಿದೆ. ಸರ್ಕಾರದಿಂದ ಸ್ಪಷ್ಟ ನಿರ್ದೇಶನಕ್ಕಾಗಿ ಕಾಯಲಾಗುತ್ತಿದೆ

ಬೇಸಿಗೆ ಅವಧಿಯಲ್ಲಿಯೇ ಉದ್ಯೋಗಕ್ಕೆ ಹೆಚ್ಚು ಬೇಡಿಕೆ. ಆದರೆ ಯೋಜನೆ ಅನುಷ್ಠಾನಕ್ಕೆ ಬರದಿರುವ ಕಾರಣ, ಒಂದು ಋತುವಿನ ಕೆಲಸವೇ ನಿಂತುಹೋಗಿದೆ

ಮಾರ್ಗಸೂಚಿ ಇಲ್ಲದೇ ಇರುವ ಕಾರಣಕ್ಕೆ, ಗ್ರಾಮ ಪಂಚಾಯಿತಿ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಕಾಮಗಾರಿ ಕೈಗೊಳ್ಳಲು ಬೇಡಿಕೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ

ನರೇಗಾ ಅಡಿಯಲ್ಲಿಯೇ ಏಪ್ರಿಲ್ ತಿಂಗಳಿನಲ್ಲಿ 9.65 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಯ ಗುರಿ ನೀಡಲಾಗಿದೆ. ಮೇ ತಿಂಗಳಿಗೂ ಇದೇ ಮುಂದುವರಿಯುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ

ನರೇಗಾ ನಂಬ್ಕೊಂಡು ವರ್ಷದಾಗ ₹ 37 ಸಾವಿರ ಗಳಿಸಿ, ನಾಲ್ಕು ಮಕ್ಕಳನ್ನು ಸಾಕಿ ಸಲುಹುತ್ತಿದ್ದೆ. ಈಗ ಅದನ್ನು ಬಂದ್ ಮಾಡಿ ನಮ್ಮನ್ನು ಕಷ್ಟಕ್ಕೆ ನೂಕಿದ್ದಾರೆ. ನಮ್ಮ ಮಂದಿ ಮತ್ತೆ ಗುಳೆ ಹೊರಟಿದ್ದಾರೆ
ರಂಗಮ್ಮ ಕಟ್ಟಿಮನಿ
ಸೈದಾಪುರ, ಯಾದಗಿರಿ ಜಿಲ್ಲೆ

ಮೊದಲೆಲ್ಲಾ ಕೈತುಂಬಾ ಕೆಲಸ ಕೊಟ್ಟು, ಕೂಲಿಯನ್ನೂ ಬೇಗನೆ ಕೊಡುತ್ತಿದ್ದರು. ಈಗ ಕೆಲಸ ಇಲ್ಲದ ಕಾರಣ, ಮಂಗಳೂರು ಅಥವಾ ಗೋವಾಕ್ಕೆ ಕೆಲಸ ಹುಡುಕಿಕೊಂಡು ಹೋಗಬೇಕಾದ ಸ್ಥಿತಿ ಇದೆ
ಮಾರುತಿ ತಳವಾರ
ಅಳವಂಡಿ, ಕೊಪ್ಪಳ

ಉದ್ಯೋಗ ಕೇಳಿಕೊಂಡು ಜನರು ಅರ್ಜಿ ಸಲ್ಲಿಸುತ್ತಲೇ ಇದ್ದಾರೆ. ಆದರೆ ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಗರಿಷ್ಠ 10 ಕಾಮಗಾರಿಯ ಮಿತಿ ಹಾಕಿರುವುದರಿಂದ ಎಲ್ಲರಿಗೂ ಕೆಲಸ ಸಿಗುತ್ತಿಲ್ಲ
ಮಹಾಂತೇಶ ಹೊಸಮನಿ
ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ್) ಮುಖಂಡ

ಈ ಋತುವಿನ ಕೆಲಸವೇ ನಿಂತು ಹೋಗಿದೆ. ಈ ಬಾರಿ ಬಳ್ಳಾರಿಯಲ್ಲಿ ಎರಡನೇ ಬೆಳೆಯೂ ಇಲ್ಲ. ಹೀಗಾಗಿ ಜನ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಮಡಿಕೇರಿ, ಕೇರಳ ಕಡೆಗೆ ವಲಸೆ ಹೋಗಿರುವ ಮಾಹಿತಿ ಲಭ್ಯವಾಗಿವೆ
ಮೊಹಮದ್ ಹ್ಯಾರಿಸ್ ಸುಮೇರ್
ಸಿಇಒ, ಬಳ್ಳಾರಿ ಜಿಲ್ಲಾ ಪಂಚಾಯಿತಿ

ಕೆಲಸ ಕೋರಿ ನಿತ್ಯವೂ ಗ್ರಾಮ ಪಂಚಾಯಿತಿಗೆ ಹೋಗುತ್ತಿದ್ದೇವೆ. ಆದರೆ, 'ಹೊಸ ಯೋಜನೆಯ ಮಾರ್ಗಸೂಚಿ ಬಂದಿಲ್ಲ. ನಾಳೆ ಬನ್ನಿ' ಎಂದು ಸತಾಯಿಸುತ್ತಿದ್ದಾರೆ
ವಿಶ್ವೇಶರಯ್ಯ ಹಿರೇಮಠ
ಬೆಳಗಾವಿ

ಹೊನ್ನಾಟದ ಸಂಭ್ರಮ

ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ



ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಗಂಭ್ಯಾಪೂರ ಗ್ರಾಮದಲ್ಲಿ ದ್ಯಾಮವ್ವದೇವಿ ಜಾತ್ರೆ ಅಂಗವಾಗಿ ಭಾನುವಾರ ನಡೆದ ಹೊನ್ನಾಟದಲ್ಲಿ ಭಕ್ತರು ಸಂಭ್ರಮಿಸಿದರು

ಕೇರಳ ಮಹಿಳೆ ಕೊನೆಗೂ ಪತ್ತೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ತಾಲ್ಲೂಕಿನ ತಡಿಯಂಡಮೋಳ್ ಬೆಟ್ಟದಲ್ಲಿ ಗುರುವಾರ ಚಾರಣಕ್ಕೆ ತೆರಳಿ ನಾಪತ್ತೆಯಾಗಿದ್ದ ಕೇರಳದ ಶರಣ್ಯ (35) ಅವರು ಭಾನುವಾರ ಕಾಡಿನೊಳಗೆ ಸುರಕ್ಷಿತವಾಗಿ ಪತ್ತೆಯಾಗಿದ್ದಾರೆ.

'ಮೂರು ದಿನಗಳಿಂದ ಕಾಡಿನಲ್ಲಿ ಅಲೆದು ಬಂಡೆಯ ಸಮೀಪ ಕುಳಿತಿದ್ದೆ ಎಂದಷ್ಟೇ ಮಹಿಳೆ ಹೇಳಿದ್ದಾರೆ. ಪೊಲೀಸರು ಹೆಚ್ಚಿನ ವಿಚಾರಣೆಯನ್ನು ನಡೆಸಿದ್ದಾರೆ' ಎಂದು ಡಿಸಿಎಫ್ ಅಭಿಷೇಕ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೇರಳದಿಂದ ಒಬ್ಬರೇ ಬಂದಿದ್ದ ಅವರು ಆನ್‌ಲೈನ್ ನೋಂದಣಿ ಮಾಡಿಕೊಂಡು ಚಾರಣಕ್ಕಾಗಿ ಹೊರಟಿದ್ದರು. ತಾವು ತಂಗಿದ್ದ ಹೋಂಸ್ಟೇಯವರನ್ನು ಗುರುವಾರ ಮಧ್ಯಾಹ್ನ ಸಂಪರ್ಕಿಸಿದ್ದ ಅವರು, ದಾರಿ ತಪ್ಪಿರುವುದಾಗಿ ಹೇಳಿದ್ದರು. ಬಳಿಕ ಅವರ ಮೊಬೈಲ್ ಫೋನ್ ಸ್ವಿಚ್ಡ್‌ಆಫ್ ಆಗಿತ್ತು.

ಅವರ ಪತ್ತೆಗಾಗಿ ಅರಣ್ಯ, ಪೊಲೀಸ್, ನಕ್ಸಲ್ ನಿಗ್ರಹ ದಳ ಹಾಗೂ ಸ್ಥಳೀಯರು ಸೇರಿದಂತೆ ಒಟ್ಟು 9 ತಂಡಗಳನ್ನು ನಿಯೋಜಿಸಲಾಗಿತ್ತು. ಥರ್ಮಲ್ ಡ್ರೋನ್ ಕ್ಯಾಮೆರಾ, ಶ್ವಾನದಳದ ನೆರವೂ ಪಡೆಯಲಾಗಿತ್ತು.

ಧೈರ್ಯವಂತೆ: 'ಶರಣ್ಯ ಸಾಹಸಿಗರು. 3 ದಿನವಾದರೂ ಏಕಾಂಗಿಯಾಗಿ ಕಾಡಿನಲ್ಲಿ ಓಡಾಡಿರುವ ಅವರು ಧೈರ್ಯವಂತೆ. ಅಲ್ಲಿ ಮೊಬೈಲ್ ಸಂಪರ್ಕ ಸಿಗುವುದಿಲ್ಲ. ಇದರಿಂದಾಗಿ ಅವರು ಇದ್ದ ಸ್ಥಳದ ಮಾಹಿತಿ ತಿಳಿದಿರಲಿಲ್ಲ. ಹೀಗಾಗಿ ಶೋಧ ವಿಳಂಬವಾಯಿತು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.



ಮಡಿಕೇರಿ ತಾಲ್ಲೂಕಿನ ತಡಿಯಂಡಮೋಳ್ ಬೆಟ್ಟದಲ್ಲಿ ನಾಪತ್ತೆಯಾಗಿದ್ದ ಮಹಿಳೆ ಭಾನುವಾರ ಪತ್ತೆಯಾದರು

'ಯಾರೇ ಯಾವುದೇ ರಾಜ್ಯದಿಂದ ಚಾರಣಕ್ಕೆ ಬಂದು ನಾಪತ್ತೆಯಾದರೂ, ಅವರನ್ನು ಹುಡುಕುವ ಜವಾಬ್ದಾರಿ ನಮ್ಮ ಸರ್ಕಾರದ ಮೇಲಿರುತ್ತದೆ. ನಾವು ಜವಾಬ್ದಾರಿ ನಿರ್ವಹಿಸಿದ್ದೇವೆ' ಎಂದು ಹೇಳಿದ್ದಾರೆ.

'ಅವರ ಪತ್ತೆಗಾಗಿ ರಚಿಸಿದ್ದ 9 ತಂಡಗಳು, ಹಗಲಿರುಳೆನ್ನದೇ ಶೋಧ ಕಾರ್ಯ ನಡೆಸಿದವು. ಮುಖ್ಯಮಂತ್ರಿಯವರ ಸೂಚನೆಯ ಮೇರೆಗೆ ಭಾನುವಾರ ಹೆಚ್ಚುವರಿಯಾಗಿ 40 ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಇದರಲ್ಲಿ ಬುಡಕಟ್ಟು ಸಮುದಾಯದ ಜನರೂ ಇದ್ದರು' ಎಂದು ತಿಳಿಸಿದ್ದಾರೆ.

ದ್ವಿತೀಯ ಪಿಯು ಫಲಿತಾಂಶ 8ಕ್ಕೆ?

ಬೆಂಗಳೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಇದೇ 8ರಂದು ಪ್ರಕಟವಾಗುವ ಸಾಧ್ಯತೆ ಇದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಮೂಲಗಳು ತಿಳಿಸಿವೆ.

ಈ ಮೊದಲಿನ ತಾತ್ಕಾಲಿಕ ವೇಳಾಪಟ್ಟಿಯಂತೆ 7ರಂದು ಫಲಿತಾಂಶ ಪ್ರಕಟವಾಗಬೇಕಿತ್ತು. ಫಲಿತಾಂಶ ಪ್ರಕಟಿಸುವ ಬಗ್ಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆಯಲಾಗಿದೆ. ಅವರ ಸಮಯ ನೋಡಿಕೊಂಡು ಫಲಿತಾಂಶ ಪ್ರಕಟಿಸಲಾಗುವುದು ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಉತ್ತರದಾಯಿತ್ವಕ್ಕೆ ನೌಕರರ ಆಗ್ರಹ

ನವದೆಹಲಿ (ಪಿಟಿಐ): ನೌಕರರನ್ನು ಕೆಲಸದಿಂದ ತೆಗೆಯುವ ಬದಲು, ಅವರಿಗೆ ಹೊಸದಾಗಿ ಕೌಶಲ ತರಬೇತಿ ನೀಡುವುದನ್ನು ಆದ್ಯತೆ ಆಗಿಸಿಕೊಳ್ಳಬೇಕು ಎಂದು ಐ.ಟಿ. ವಲಯದ ನೌಕರರ ಸಂಘಟನೆ ಎನ್‌ಐಟಿಇಎಸ್, ಕಂಪನಿಗಳಿಗೆ ಮನವಿ ಮಾಡಿದೆ.

ತಂತ್ರಜ್ಞಾನ ವಲಯದ ಕಂಪನಿಗಳ ಲಾಭದ ಪ್ರಮಾಣ ಚೆನ್ನಾಗಿಯೇ ಇದ್ದರೂ, ಉದ್ಯೋಗದ ಭದ್ರತೆ ದುರ್ಬಲಗೊಳ್ಳುತ್ತಿರುವುದು ಕಾರ್ಪೊರೇಟ್ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಸಂಘಟನೆ ಹೇಳಿದೆ. 8

ಇರಾನ್ ವಿರುದ್ಧ ಟ್ರಂಪ್ ಅಶ್ಲೀಲ ವಾಗ್ದಾಳಿ

ವಾಷಿಂಗ್ಟನ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಾಳ್ಮೆ ಕಳೆದುಕೊಂಡು ಇರಾನ್ ಅನ್ನು ಅಶ್ಲೀಲ ಪದಗಳಲ್ಲಿ ನಿಂದಿಸಿದ್ದಾರೆ. ಮುಂದಿನ 48 ಗಂಟೆಗಳ ಗಡುವಿನೊಳಗೆ ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸದಿದ್ದರೆ ನರಕ ನೋಡಬೇಕಾದೀತು ಎಂಬ ಎಚ್ಚರಿಕೆಯ ಮಾತನ್ನೂ ಪುನರುಚ್ಚರಿಸಿದ್ದಾರೆ.

'ಮಂಗಳವಾರದವರೆಗೆ ಮಾತ್ರ ಗಡುವು. ಆನಂತರ ಇರಾನ್‌ನ ವಿದ್ಯುತ್ ಸ್ಥಾವರ, ಸೇತುವೆಗಳ ಮೇಲೆ ದಾಳಿ ನಡೆಸಬೇಕಾದೀತು. ಅಷ್ಟು ತೀವ್ರ ಸ್ವರೂಪದ ದಾಳಿಯನ್ನು ನೀವು ನೋಡಿರಲಿಕ್ಕಿಲ್ಲ. ಹುಚ್ಚು ಕಿಡಿಗೇಡಿಗಳೇ, ಆ ಜಲಸಂಧಿಯನ್ನು ತೆರೆಯಿರಿ. ಇಲ್ಲದಿದ್ದರೆ, ನೀವು ನರಕ ದರ್ಶನ ಮಾಡುವಿರಿ. ಸುಮ್ಮನೆ ಕಾದು ನೋಡಿ. ಅಲ್ಲಾಹ ಸ್ತೋತ್ರ ಮಾಡುವ ಕಾಲ ಬಂದೀತು' ಎಂದು ಟ್ರೂತ್ ಸೋಷಿಯಲ್‌ನಲ್ಲಿ ಬರೆದಿದ್ದಾರೆ.

ಈ ಹಿಂದೆಯೇ ಟ್ರಂಪ್ ಅವರು ಇರಾನ್‌ಗೆ ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವಂತೆ ಗಡುವು ನೀಡುತ್ತಾ ಬಂದಿದ್ದರು. ಕೆಲವು ದೇಶಗಳ ಮಧ್ಯಸ್ಥಿಕೆ ಮಾತಿಗೆ ಮಣಿದು, ಗಡುವನ್ನು ವಿಸ್ತರಿಸಿದ್ದರು. ಅವರ ಎಚ್ಚರಿಕೆಯ ಮಾತಿಗೆ ಜಗ್ಗದೆ ಇರಾನ್ ಪ್ರತಿದಾಳಿಗಳನ್ನು ನಡೆಸಿತ್ತು.

ತಮ್ಮ ದೇಶದ ಸೇನಾ ವಿಮಾನದ ಪೈಲಟ್ ಅನ್ನು ಸಿನಿಮೀಯ ರೀತಿಯಲ್ಲಿ ರಕ್ಷಿಸಿದ ನಂತರ ಟ್ರಂಪ್ ಅಶ್ಲೀಲ ಪದಗಳನ್ನು ಬಳಸಿ, ಇರಾನ್‌ಗೆ ಕಟುವಾದ ಎಚ್ಚರಿಕೆ ನೀಡಿದ್ದಾರೆ. 8



'ಇತಿಹಾಸ ಪುನರಾವರ್ತನೆಯಾಗುತ್ತದೆ. ಏಪ್ರಿಲ್ 24, 1980ರಲ್ಲಿ ಇರಾನ್‌ನ ತಬಾಸ್ ಮರುಭೂಮಿಯಲ್ಲಿ ಅಮೆರಿಕದ ಮಿಲಿಟರಿ ಕಾರ್ಯಾಚರಣೆ 'ಆಪರೇಷನ್ ಈಗಲ್ ಕ್ಲಾ' ವಿಫಲಗೊಂಡಿದ್ದು ನೆನಪಿದೆಯಾ?
ಥಾಯ್ಲೆಂಡ್‌ನಲ್ಲಿರುವ ಇರಾನ್‌ನ ರಾಯಭಾರ ಕಚೇರಿ, 'ಎಕ್ಸ್' ಪೋಸ್ಟ್‌ನಲ್ಲಿ

ಅಮೆರಿಕ ಯೋಧನ ರಕ್ಷಣಾ ಕಾರ್ಯಾಚರಣೆ ನಡೆದದ್ದು ಹೀಗೆ...



1 ಯೋಧರನ್ನು ಪತ್ತೆ ಮಾಡಲು ಅನುಕೂಲವಾಗುವಂಥ ಉಡುಪನ್ನು ಅಮೆರಿಕದ ಯೋಧರು ಧರಿಸುತ್ತಾರೆ. ಇದರಲ್ಲಿ ಜಿಪಿಎಸ್ ವ್ಯವಸ್ಥೆ ಇದೆ. ಉಡುಪಿನಲ್ಲಿ ನೀರು, ಆಹಾರ, ಪ್ರಥಮ ಚಿಕಿತ್ಸೆ ಕಿಟ್ ಕೂಡ ಇರುತ್ತದೆ

2 ಸ್ಥಳೀಯರ ಕೈಗೆ ಸಿಲುಕಿಕೊಳ್ಳದೇ ಯೋಧ ಅಡಗಿಕೊಂಡಿದ್ದರು. ಬಳಿಕ, 7 ಸಾವಿರ ಅಡಿ ಎತ್ತರದ ಬೆಟ್ಟವೊಂದನ್ನು ಹತ್ತಿದರು

3 ಸಿಐಎ ಯೋಧನನ್ನು ಪತ್ತೆ ಹಚ್ಚಿತು. ಈಗಾಗಲೇ ಯೋಧ ನಮಗೆ ಸಿಕ್ಕಿದ್ದಾನೆ ಎಂದು ಹೇಳಿಕೆ ನೀಡಿ ಇರಾನ್‌ನ ಗಮನ ಬೇರೆಡೆ ಸೆಳೆಯಲಾಯಿತು

4 ಯೋಧನ ರಕ್ಷಣಾ ಕಾರ್ಯಾಚರಣೆಯ ಜವಾಬ್ದಾರಿಯನ್ನು ನೌಕಾಪಡೆ ಕಮಾಂಡರ್‌ಗಳಿಗೆ ನೀಡಲಾಯಿತು. ಕಾರ್ಯಾಚರಣೆಯಲ್ಲಿ ಹಲವಾರು ಯುದ್ಧ ವಿಮಾನಗಳು, ನೂರಾರು ವಿಶೇಷ ಪಡೆಗಳನ್ನು ಬಳಕೆ ಮಾಡಲಾಗಿದೆ

5 ಇರಾನ್ ಪಡೆಗಳ ಕಣ್ತಪ್ಪಿಸಿ 2ಸಿ– 130 ಸಾಗಣೆ ವಿಮಾನದ ಮೂಲಕ ರಕ್ಷಿಸಲಾಯಿತು

6 ಇರಾನ್ ನೆಲದಲ್ಲಿ ಸಿಲುಕಿದ್ದ ತಮ್ಮ ವಿಮಾನವನ್ನು ಅಮೆರಿಕದ ಸೈನಿಕರೇ ಸ್ಫೋಟಿಸಿದ್ದಾರೆ. ವಿಮಾನವು ಇರಾನಿ ಸೈನಿಕರಿಗೆ ಸಿಗಬಾರದು ಎಂದು ಹೀಗೆ ಮಾಡಿದ್ದಾರೆ. ಆನಂತರವೇ ಅಲ್ಲಿಂದ ಹೊರಟಿದ್ದಾರೆ

ಬಡ ಕುಟುಂಬದ ಅಳಲಿಗೆ ಆಸರೆಯಾದ ಹೈಕೋರ್ಟ್

'ಲೋಕ ಅದಾಲತ್ ತೀರ್ಪು ಪ್ರಶ್ನಾತೀತವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕ ಅದಾಲತ್ ತೀರ್ಪು ಪ್ರಶ್ನಾತೀತವಲ್ಲ' ಎಂದು ಪ್ರಕರಣವೊಂದರಲ್ಲಿ ಪುನರುಚ್ಚರಿಸಿರುವ ಹೈಕೋರ್ಟ್, 'ಲೋಕ ಅದಾಲತ್‌ನಲ್ಲಿ ವ್ಯಾಜ್ಯಕರ್ತ, ಉಭಯ ಪಕ್ಷಗಾರರ ಅನುಪಸ್ಥಿತಿಯಲ್ಲಿ ತೀರ್ಪು ಅಂಗೀಕೃತವಾಗಿದ್ದರೆ ಅಂತಹ ತೀರ್ಪು ಎಲ್ಲ ಕಾಲಕ್ಕೂ ಕಾನೂನುಬದ್ಧವಾಗಿದೆ ಮತ್ತು ಸರಿಯಾಗಿದೆ ಎಂದು ಹೇಳಲಾಗದು' ಎಂದು ಸ್ಪಷ್ಟಪಡಿಸಿದೆ.

ಮೋಟಾರು ವಾಹನ ಅಪಘಾತ ಪ್ರಕರಣವೊಂದರಲ್ಲಿ ಲೋಕ ಅದಾಲತ್ ತೀರ್ಪು ಪ್ರಶ್ನಿಸಿ ಹುಬ್ಬಳ್ಳಿ ಆನಂದನಗರದ ಬಡ ಕುಟುಂಬದ ತಾಯಿ–ಮಗ, ಶೈಲಾ ಐ ಕರ್ಕಿಹಳ್ಳಿಮಠ (37) ಮತ್ತು ವಿಶಾಲ್ ಐ ಕರ್ಕಿಹಳ್ಳಿಮಠ (11) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.



'ಲೋಕ ಅದಾಲತ್‌ನಲ್ಲಿ ನಮಗೆ ನೀಡಲಾಗಿದ್ದ ಪರಿಹಾರದ ಮೊತ್ತವನ್ನು ಕಡಿಮೆ ಮಾಡಿರುವುದು ತಪ್ಪಾಗಿದೆ. ನಮ್ಮ ಪರವಾದ ಹಿಂದಿನ ವಕೀಲರು ಮತ್ತು ವಿಮಾ ಕಂಪನಿಯ ನಡುವೆ ಇತ್ಯರ್ಥ ಮಾಡಿಕೊಳ್ಳಲಾಗಿದೆ ಎಂಬುದು ನಮಗೆ ಯಾವತ್ತೂ ಗಮನಕ್ಕೆ ಬಂದೇ ಇರಲಿಲ್ಲ. ಆದ್ದರಿಂದ, ಲೋಕ ಅದಾಲತ್‌ನಲ್ಲಿ ಪರಿಹಾರದ ಮೊತ್ತವನ್ನು ಕಡಿಮೆ ಮಾಡಿ ಆದೇಶಿಸಿರುವುದನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂಬ ಅರ್ಜಿದಾರರ ವಾದವನ್ನು ನ್ಯಾಯಪೀಠ ಮನ್ನಿಸಿದೆ. 4A

ಮಕ್ಕಳಿಂದ ಭಿಕ್ಷಾಟನೆ: ತಡೆಗೆ ಸಮಿತಿ ರಚನೆ

ಬೆಂಗಳೂರು: 'ಭಿಕ್ಷಾಟನೆಯಲ್ಲಿ ತೊಡಗುವ ಹಾಗೂ ಬೀದಿ ಬದಿ ಆಟಿಕೆ ಮತ್ತಿತರ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳನ್ನು ಪತ್ತೆ ಹಚ್ಚಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಸೂಕ್ತ ಶಿಫಾರಸುಗಳನ್ನು ನೀಡಲು ಪೊಲೀಸ್, ಮಕ್ಕಳ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ 12 ಸದಸ್ಯರ ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ' ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ತಿಳಿಸಿದೆ.

'ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳನ್ನು ಗುರುತಿಸಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ, 'ಲೆಟ್ಸ್ ಕಿಟ್ ಫೌಂಡೇಷನ್' ವ್ಯವಸ್ಥಾಪಕ ಟ್ರಸ್ಟಿ, ಲಕ್ಷ್ಮಿ ಹೊಳ್ಳ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳ ಸಮಸ್ಯೆ ನಿವಾರಣೆಗೆ ಸರ್ಕಾರ ಇದೇ 9ರಂದು 12 ಸದಸ್ಯರ ಸಮಿತಿ ರಚನೆ ಮಾಡಿದೆ. ಈ ಸಮಿತಿಯಲ್ಲಿ ನಿಮ್ಹಾನ್ಸ್‌ನ ತಜ್ಞ ವೈದ್ಯರು, ಪೊಲೀಸ್, ಮಕ್ಕಳ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದಾರೆ' ಎಂದು ತಿಳಿಸಿದರು. 4A

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗಲಿದೆ



ನಗರದಲ್ಲಿ ನಡೆದ ಸಿರಿ ವುಮೆನ್ ಅಚೀವರ್ಸ್ ಅವಾರ್ಡ್–2026 ಸಮಾರಂಭದಲ್ಲಿ ವಾಲಿಬಾಲ್‌ನಲ್ಲಿ ಚಿನ್ನದ ಪದಕ ಪಡೆದ ಭಾರತಿ ಪರಮೇಶ್ವರ್ ಅವರಿಗೆ ಸಿರಿ ಕರ್ನಾಟಕ ಕೀರ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಮತಾ ದಯಾನಂದ್, ಮಮತಾ ದೇವರಾಜ್, ಜೋಗತಿ ಮಂಜಮ್ಮ, ಭವ್ಯಗೌಡ, ಚಿತ್ರನಟಿಯರಾದ ಪ್ರಿಯಾಂಕಾ ಉಪೇಂದ್ರ, ಅಂಕಿತಾ ಜಯರಾಮ್, ರೂಪಿಕಾ ಉಪಸ್ಥಿತರಿದ್ದರು

ಎರಡನೆಯ ಬಾರಿ ಟೆಂಡರ್

ಎಲಿವೇಟೆಡ್ ಕಾರಿಡಾರ್: ಏರ್‌ಪೋರ್ಟ್ ರಸ್ತೆಯಲ್ಲಿ ದಟ್ಟಣೆ ನಿವಾರಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆಬ್ಬಾಳ ಜಂಕ್ಷನ್‌ನಲ್ಲಿ ಹೆಚ್ಚುವರಿ ರ‍್ಯಾಂಪ್ ನಿರ್ಮಾಣ ಬಳಿಕ ಮೇಖ್ರಿ ವೃತ್ತದಲ್ಲಿ ಉಂಟಾಗಿರುವ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಸುಮಾರು 1.6 ಕಿ.ಮೀ. ಉದ್ದದ ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕಾಗಿ ಎರಡನೇ ಬಾರಿ ಟೆಂಡರ್ ಆಹ್ವಾನಿಸಿದೆ.

ನಾಲ್ಕು ಪಥದ 1.6 ಕಿ.ಮೀ. ಉದ್ದದ ಕಾರಿಡಾರ್‌ಗೆ ₹419 ಕೋಟಿ ಅಂದಾಜು ಮಾಡಲಾಗಿದ್ದು, ಕಾರ್ಯಾದೇಶ ನೀಡಿದ 18 ತಿಂಗಳೊಳಗೆ ಪೂರ್ಣಗೊಳಿಸುವ ಗುರಿ ಹೊಂದಿದೆ. ಈ ಉದ್ದೇಶಿತ ಮೇಲ್ಸೇತುವೆ ಪಶುವೈದ್ಯಕೀಯ ಕಾಲೇಜಿನ ಎದುರಿಗಿರುವ ಯುಎಎಸ್ ಸಿಬ್ಬಂದಿ ವಸತಿಗೃಹ ಬಳಿ ಆರಂಭವಾಗಿ ಮೇಖ್ರಿ ಸರ್ಕಲ್‌ವರೆಗೆ ವಿಸ್ತರಿಸಲಿದೆ.

ಮುಖ್ಯಾಂಶಗಳು

- 1.6 ಕಿ.ಮೀ ಉದ್ದ
- ಯೋಜನಾ ವೆಚ್ಚ ₹420 ಕೋಟಿ
- 18 ತಿಂಗಳು ಗಡುವು

ಪ್ರಾಧಿಕಾರವು ಕಳೆದ ನಾಲ್ಕು ತಿಂಗಳಲ್ಲಿ ಎರಡನೇ ಬಾರಿಗೆ ಟೆಂಡರ್ ಕರೆದಿದೆ. ಇದಕ್ಕೂ ಮುನ್ನ ಡಿಸೆಂಬರ್‌ನಲ್ಲಿ ಮೇಲ್ಸೇತುವೆ ಜತೆಗೆ ಕಿರು ಸುರಂಗ ಮಾರ್ಗ ನಿರ್ಮಾಣಕ್ಕೂ ಟೆಂಡರ್ ಆಹ್ವಾನಿಸಿತ್ತು.

ಪಶು ವೈದ್ಯಕೀಯ ಕಾಲೇಜು ಮುಂಭಾಗದಿಂದ ಮೇಖ್ರಿ ವೃತ್ತದವರೆಗೆ ಮೇಲ್ಸೇತುವೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಮೇಖ್ರಿ ವೃತ್ತದಲ್ಲಿ ಎಲಿವೇಟೆಡ್ ಮಾದರಿಯ ರೋಟರಿ ಜಂಕ್ಷನ್ ನಿರ್ಮಾಣದ ಮೂಲಕ ಎರಡು ಡೌನ್ ರ‍್ಯಾಂಪ್‌ಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಒಂದು ರ‍್ಯಾಂಪ್ ಸಿ.ವಿ. ರಾಮನ್ ರಸ್ತೆ ಮೂಲಕ ಯಶವಂತಪುರದತ್ತ, ಮತ್ತೊಂದು ಜಯಮಹಲ್ ಕಡೆಗೆ ಸಂಪರ್ಕ ಕಲ್ಪಿಸುತ್ತದೆ.



ಸಾಂದರ್ಭಿಕ ಚಿತ್ರ

ವಿಮಾನ ನಿಲ್ದಾಣ ಕಡೆಯಿಂದ ಬೆಂಗಳೂರಿನತ್ತ ಮೇಲ್ಸೇತುವೆ ಮಾರ್ಗವಾಗಿ ಸರಾಗವಾಗಿ ಬರುವ ವಾಹನಗಳು ಹೆಬ್ಬಾಳ ಜಂಕ್ಷನ್‌ನಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಳ್ಳುತ್ತಿದ್ದವು. ಹಾಗಾಗಿ ಪ್ರಾಧಿಕಾರವು, ಕೆ.ಆರ್.ಪುರ ಕಡೆಯಿಂದ ನಗರದತ್ತ ಹೆಚ್ಚುವರಿ ರ‍್ಯಾಂಪ್ ನಿರ್ಮಿಸಿ, ದಟ್ಟಣೆ ಸಮಸ್ಯೆ ಪರಿಹರಿಸಲು ಪ್ರಯತ್ನಿಸಿತ್ತು. ಆದರೆ, ಈಗ ಮೇಖ್ರಿ ವೃತ್ತದಿಂದ ಗಾಲ್ಫ್ ಕೋರ್ಸ್‌ವರೆಗೆ ದಟ್ಟಣೆ ಉಂಟಾಗುತ್ತಿದೆ. ಹಾಗಾಗಿ ಮೇಲ್ಸೇತುವೆ ನಿರ್ಮಾಣಕ್ಕೆ ಮುಂದಾಗಿದೆ.

ರಸ್ತೆ ಮಧ್ಯ ಭಾಗದಲ್ಲೇ ಮೇಲ್ಸೇತುವೆ ನಿರ್ಮಿಸಲು ತೀರ್ಮಾನಿಸಿದ್ದು, ಇದಕ್ಕೆ ಹೆಚ್ಚು ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಿಲ್ಲ. ಬಳ್ಳಾರಿ ರಸ್ತೆಯ ಎರಡೂ ಬದಿಗಳಲ್ಲಿರುವ ಏರ್‌ಫೋರ್ಸ್ ಟ್ರೈನಿಂಗ್ ಕಮಾಂಡ್ ಮತ್ತು ಪ್ಯಾರಾಚೂಟ್ ರೆಜಿಮೆಂಟ್ ಸೇರಿ ಇತರೆ ರಕ್ಷಣಾ ಸಂಸ್ಥೆಗಳಿಂದ ಅನುಮತಿ ಪಡೆಯಬೇಕಿದೆ.

ಮದ್ಯ ಸೇವಿಸಿ ಸಿಕ್ಕಿಬಿದ್ದ ಚಾಲಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮದ್ಯ ಸೇವಿಸಿ ಲಾರಿ ಚಾಲನೆ ಮಾಡುತ್ತಿದ್ದ ವೇಳೆ ಪೊಲೀಸರಿಗೆ ಸಿಕ್ಕಿಬಿದ್ದ ಚಾಲಕ, ಅದೇ ಲಾರಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಮಿಳುನಾಡಿನ ಷಣ್ಮುಗಂ (26) ಆತ್ಮಹತ್ಯೆ ಮಾಡಿಕೊಂಡ ಚಾಲಕ.

ತಮಿಳುನಾಡಿನಿಂದ ಜೆ.ಪಿ. ನಗರದ ಕಡೆಗೆ ಬರುತ್ತಿದ್ದ ಲಾರಿಯನ್ನು ಶನಿವಾರ ರಾತ್ರಿ 11 ಗಂಟೆ ಸುಮಾರಿಗೆ ಹೊರ ವರ್ತುಲ ರಸ್ತೆಯಲ್ಲಿ ಸಂಚಾರ ಪೊಲೀಸರು ತಡೆದು ತಪಾಸಣೆ ನಡೆಸಿದ್ದರು. ಈ ವೇಳೆ ಲಾರಿ ಚಾಲಕ ಮದ್ಯ ಕುಡಿದು ವಾಹನ ಚಾಲನೆ ಮಾಡುತ್ತಿರುವುದು ದೃಢಪಟ್ಟಿದೆ.

ಚಾಲಕನಿಗೆ 'ಡ್ರಂಕ್ ಆ್ಯಂಡ್ ಡ್ರೈವ್' ಪ್ರಕರಣ ಕುರಿತ ನೋಟಿಸ್ ನೀಡಿ, ಲಾರಿಯನ್ನು ವಶಕ್ಕೆ ಪಡೆದುಕೊಂಡಿದ್ದರು. ನೋಟಿಸ್ ಪಡೆದು ಹೋದ ಚಾಲಕ, ಠಾಣೆಯ ಸಮೀಪ ನಿಲ್ಲಿಸಿದ್ದ ಲಾರಿಯ ಟಾಪ್‌ನ ಕೊಂಡಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಳಿಗ್ಗೆ ಮಾಹಿತಿ ತಿಳಿದ ಪೊಲೀಸರು ಪರಿಶೀಲನೆ ನಡೆಸಿ, ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ. ಈ ಬಗ್ಗೆ ಮೃತನ ಪೋಷಕರಿಗೆ ವಿಷಯ ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ.ಜಗಲಾಸರ್, 'ಡ್ರಂಕ್ ಆ್ಯಂಡ್ ಡ್ರೈವ್' ಪರಿಶೀಲನೆ ವೇಳೆ ಚಾಲಕನಿಗೆ ನೋಟಿಸ್ ನೀಡಿರುವುದು ಮತ್ತು ಆತನೊಂದಿಗೆ ಪೊಲೀಸರು ಮಾತನಾಡಿರುವುದು ಸಿಬ್ಬಂದಿಯ ಬಾಡಿ ವೋರ್ನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಬಗ್ಗೆ ಅಸಹಜ ಸಾವಿನ ಪ್ರಕರಣ ದಾಖಲಿಸಿಕೊಂಡು ಅವರ ಸಂಬಂಧಿಕರಿಗೆ ವಿಷಯ ತಿಳಿಸಲಾಗಿದೆ. ಅವರು ನೀಡಿರುವ ದೂರು ಸ್ವೀಕರಿಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.



ಕಾರ್ಯಕ್ರಮದಲ್ಲಿ ರಶ್ಮಿ ಎಸ್, ಭಾರತಿ ವಸ್ತ್ರದ ಹಾಗೂ ಅರ್ನಿ ಸಿ. ನವೀನ್ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಪತ್ರಕರ್ತೆಯರ ಸಂಘದ ಸದಸ್ಯರು ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

'ಹೆಚ್ಚು ಸೂಕ್ಷ್ಮಗೊಳ್ಳುತ್ತಿರುವ ಹೊಸ ಪೀಳಿಗೆ'

ಮೂರು ತಲೆಮಾರಿನ ಲೇಖಕಿಯರ ಪುಸ್ತಕ ಜನಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಣ್ಣ ಪುಟ್ಟ ವಿಷಯಗಳಿಗೂ ಸೂಕ್ಷ್ಮವಾಗಿ ಸ್ಪಂದಿಸುವ ಹೊಸ ತಲೆಮಾರಿನವರು, ಸುತ್ತಮುತ್ತಲಿನ ಸಂಗತಿಗಳಿಗೆ ನಿರ್ಲಿಪ್ತರಾಗುತ್ತಿದ್ದಾರೆ. ಇದು ಈ ತಲೆಮಾರಿನ ದುರಂತ' ಎಂಬ ಅಭಿಪ್ರಾಯ 'ಬದುಕಬನಿ ಮೂರುಧ್ವನಿ' ಕಾರ್ಯಕ್ರಮದ ಸಂವಾದದಲ್ಲಿ ವ್ಯಕ್ತವಾಯಿತು.

ಬೆರಗು ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಭಾರತಿ ವಸ್ತ್ರದ ಅವರ 'ಚೇತನ ಭಾರತಿ', ರಶ್ಮಿ ಎಸ್. ಅವರ 'ಮಿದು ಮಾತು' ಹಾಗೂ ಅರ್ನಿ ಸಿ. ನವೀನ್ ಅವರ 'ಎಕೋಸ್ ಫ್ರಮ್ ಮೈ ಜಾರ್' ಪುಸ್ತಕಗಳ ಜನಾರ್ಪಣೆಯಾಯಿತು. ಬಳಿಕ ಅಂಕಣಕಾರ ಎಸ್. ರವಿಶಂಕರ್ ಅವರು ಲೇಖಕಿಯರ ಜತೆಗೆ ಸಂವಾದ ನಡೆಸಿದರು.

'ನಮ್ಮ ಕಾಲದಲ್ಲಿ 'ಬಾಡಿ ಶೇಮಿಂಗ್'ಗೆ ಅರ್ಥ ಇರಲಿಲ್ಲ. ಕರಿಯ, ಕುರುಡ ಎಂದೆಲ್ಲ ಕರೆಯುವುದು ಸಾಮಾನ್ಯವಾಗಿತ್ತು. ಈ ಬಗ್ಗೆ ಯಾರೂ ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳುತ್ತಿರಲಿಲ್ಲ. ಈ ಕಾಲದಲ್ಲಿ ಕಪ್ಪಗೆ ಇದ್ದೀಯಾ, ದಪ್ಪ ಇದ್ದೀಯಾ ಅಂತ ಹೇಳಿದರೂ ತುಂಬಾ ಸೂಕ್ಷ್ಮವಾಗಿ ವರ್ತಿಸುತ್ತಾರೆ. ಹೊಸ ತಲೆಮಾರಿನವರು ಹೆಚ್ಚು ಸೂಕ್ಷ್ಮಗೊಳ್ಳುತ್ತಿದ್ದು, ಸಣ್ಣ ಪುಟ್ಟ ನಿಂದನೆಗಳನ್ನೂ ಸಹಿಸಿಕೊಳ್ಳದಂತಾಗಿದ್ದಾರೆ' ಎಂದು ರವಿಶಂಕರ್ ಅಭಿಪ್ರಾಯಪಟ್ಟರು.

'ತಾವು ಹಗುರವಾಗಲು ಕೆಲವರು ಸಾಮಾಜಿಕ ಜಾಲತಾಣದಲ್ಲಿ ನಿಂದಿಸುವುದನ್ನು ಕಾಣಬಹುದಾಗಿದೆ. ಅಲ್ಲಿ ನಿರ್ಬಂಧ ಇಲ್ಲದಿರುವುದೇ ಇದಕ್ಕೆ ಮುಖ್ಯಕಾರಣ' ಎಂದು ಹೇಳಿದರು.

ಬೀದರ್‌ನಲ್ಲಿ ಮಹಿಳೆಯರಿಗೆ ಸಾಕ್ಷರತೆ ಜತೆಗೆ ಸ್ವಾವಲಂಬಿ ಬದುಕು ಕಟ್ಟಲು ನೆರವಾದ ಬಗೆ ವಿವರಿಸಿದ ಭಾರತಿ ವಸ್ತ್ರದ ಅವರು, 'ಪತಿ ನೀಡಿದ ಪ್ರೋತ್ಸಾಹದಿಂದ ಸ್ವಾವಲಂಬಿ ಜೀವನ ಕಟ್ಟಿಕೊಳ್ಳಲು ಸಾಧ್ಯವಾಯಿತು. ಯಾವುದೂ ಅಸಾಧ್ಯವಲ್ಲ ಎನ್ನುವುದು ಅನುಭವಕ್ಕೆ ಬಂದಿತು. ನಮ್ಮ ದಾಂಪತ್ಯದಲ್ಲಿ ಸಾಮರಸ್ಯವಿತ್ತು. ಸಮಾಜದಲ್ಲಿ ವಚನಕಾರರು ಸಮಾನತೆಯನ್ನು ಸಾರಿದ ಪರಿಣಾಮ, ವಚನ ಸಾಹಿತ್ಯದ ಬಗ್ಗೆ ಒಲವು ಹೆಚ್ಚಿತು' ಎಂದು ಹೇಳಿದರು.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಅಂಕಣಗಳ ಸಂಗ್ರಹವಾದ 'ಮಿದು ಮಾತು' ಕೃತಿಯ ಬಗ್ಗೆ ಹಾಗೂ ಮಹಿಳೆಯ ಬಗ್ಗೆ ಸಮಾಜ ಹೊಂದಿರುವ ದೃಷ್ಟಿಕೋನದ ಬಗ್ಗೆ ರಶ್ಮಿ ಎಸ್. ಅಭಿಪ್ರಾಯ ವ್ಯಕ್ತಪಡಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಬೆರಗು ಪ್ರಕಾಶನದ ವಿಜಯಲಕ್ಷ್ಮಿ ಕತ್ತಿ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಎಲ್ ಆ್ಯಂಡ್ ಟಿಯ ಬ್ಯಾಂಕ್ ಗ್ಯಾರಂಟಿ ಮುಟ್ಟುಗೋಲು

ಬೆಂಗಳೂರು: ತನ್ನ ಕಾರ್ಯಕ್ಷಮತಾ ಬ್ಯಾಂಕ್ ಗ್ಯಾರಂಟಿಗಳನ್ನು ಕೆ-ರೈಡ್ ಸಂಸ್ಥೆ ವಶಕ್ಕೆ ಪಡೆಯಬಾರದು ಎಂದು ಎಲ್ ಆ್ಯಂಡ್ ಟಿ ಸಲ್ಲಿಸಿದ್ದ ಅರ್ಜಿಯನ್ನು ಮಧ್ಯಸ್ಥಿಕೆ ನ್ಯಾಯಮಂಡಳಿ (ಅರ್ಬಿಟ್ರೇಷನ್ ಟ್ರಿಬ್ಯುನಲ್) ತಿರಸ್ಕರಿಸಿದೆ. ಹಾಗಾಗಿ ಎಲ್ ಆ್ಯಂಡ್ ಟಿ ಪರವಾಗಿ ಯೆಸ್ ಬ್ಯಾಂಕ್ ನೀಡಿದ್ದ ₹ 57 ಕೋಟಿ ಮೌಲ್ಯದ ಎರಡು ಕಾರ್ಯಕ್ಷಮತಾ ಬ್ಯಾಂಕ್ ಗ್ಯಾರಂಟಿಗಳನ್ನು ಕೆ-ರೈಡ್ ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ನಗದೀಕರಿಸಿದೆ.

ಬೆಂಗಳೂರು ಉಪನಗರ ರೈಲು ಯೋಜನೆಯ ಚಿಕ್ಕಬಾಣಾವರ–ಬೆನ್ನಿಗಾನಹಳ್ಳಿ (ಕಾರಿಡಾರ್–2) ಮತ್ತು ಹೀಲಲಿಗೆ–ರಾಜಾನುಕುಂಟೆ (ಕಾರಿಡಾರ್–4) ಕಾಮಗಾರಿಗಳ ಗುತ್ತಿಗೆಯನ್ನು ಎಲ್ ಆ್ಯಂಡ್ ಟಿ ಸಂಸ್ಥೆ ಪಡೆದಿತ್ತು. ಆದರೆ, ವರ್ಷದ ಹಿಂದೆ ಗುತ್ತಿಗೆ ಒಪ್ಪಂದದಿಂದ ಹಿಂದಕ್ಕೆ ಸರಿದಿತ್ತು. ಷರತ್ತುಗಳನ್ನು ಉಲ್ಲಂಘಿಸಿ ಒಪ್ಪಂದಗಳನ್ನು ಏಕಪಕ್ಷೀಯವಾಗಿ ಮತ್ತು ಕಾನೂನುಬಾಹಿರವಾಗಿ ರದ್ದುಪಡಿಸಿದೆ ಎಂದು ಕೆ–ರೈಡ್ ತಿಳಿಸಿತ್ತು.

ಈ ನಡುವೆ ಬ್ಯಾಂಕ್ ಗ್ಯಾರಂಟಿಗಳನ್ನು ವಶಪಡಿಸಿಕೊಳ್ಳುವುದನ್ನು ತಡೆಯಲು ವಾಣಿಜ್ಯ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆಯನ್ನು ಎಲ್ ಆ್ಯಂಡ್ ಟಿ ಪಡೆದಿತ್ತು. ಒಪ್ಪಂದದ ಮಧ್ಯಸ್ಥಿಕೆ ವಿಧಿಯನ್ನು ಬಳಸಿಕೊಂಡು, ತನ್ನ ದಾವೆಗಳನ್ನು ಮುಂದಿಟ್ಟಿತ್ತು. ಅದಕ್ಕಾಗಿ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳನ್ನು ಒಳಗೊಂಡ ಮಧ್ಯಸ್ಥಿಕೆ ನ್ಯಾಯಮಂಡಳಿ ರಚಿಸಿ, ವಾಣಿಜ್ಯ ನ್ಯಾಯಾಲಯವು ಎಲ್ಲ ವಿಷಯಗಳನ್ನು ಈ ನ್ಯಾಯಮಂಡಳಿಗೆ ವರ್ಗಾಯಿಸಿತ್ತು.



ಇರಾನ್ ವಿದೇಶಾಂಗ ಸಚಿವರ ಜೊತೆ ಜೈಶಂಕರ್ ಚರ್ಚೆ

ನವದೆಹಲಿ (ಪಿಟಿಐ): ಹೊರ್ಮುಜ್ ಜಲಸಂಧಿಯನ್ನು ಸಂಚಾರಕ್ಕೆ ಮುಕ್ತಗೊಳಿಸಲು ಡೊನಾಲ್ಡ್ ಟ್ರಂಪ್ ಹೊಸ ಗಡುವು ವಿಧಿಸಿದ ಬೆನ್ನಲ್ಲೇ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮತ್ತು ಕತಾರ್ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್‌ರಹ್ಮಾನ್ ಬಿನ್ ಜಸ್ಸೀಂ ಅಲ್ ಥಾನಿ ಅವರೊಂದಿಗೆ ದೂರವಾಣಿ ಮೂಲಕ ಚರ್ಚೆ ನಡೆಸಿದ್ದಾರೆ.

'ಇರಾನ್ ವಿದೇಶಾಂಗ ಸಚಿವರಿಂದ ದೂರವಾಣಿ ಕರೆ ಸ್ವೀಕರಿಸಿ, ಪ್ರಸಕ್ತ ಸನ್ನಿವೇಶದ ಕುರಿತು ಮಾತುಕತೆ ನಡೆಸಿದೆ' ಎಂದು ಜೈಶಂಕರ್ ಅವರು ಭಾನುವಾರ ತಡರಾತ್ರಿ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಆದರೆ, ಮಾತುಕತೆಯ ಹೆಚ್ಚಿನ ವಿವರಗಳನ್ನು ಹಂಚಿಕೊಂಡಿಲ್ಲ. ಅರಬ್ ಸಂಯುಕ್ತ ಸಂಸ್ಥಾನದ ವಿದೇಶಾಂಗ ಸಚಿವ ಶೇಖ್ ಅಬ್ದುಲ್ಲಾ ಬಿನ್ ಝಾಯೇದ್ ನಹ್ಯಾನ್ ಅವರೊಂದಿಗೂ ದೂರವಾಣಿ ಮುಖೇನ ಮಾತುಕತೆ ನಡೆಸಿದ್ದಾರೆ.

'ಇಬ್ಬರೂ ವಿದೇಶಾಂಗ ಸಚಿವರು ದ್ವಿಪಕ್ಷೀಯ ಸಂಬಂಧಗಳು ಹಾಗೂ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ' ಎಂದು ನವದೆಹಲಿಯಲ್ಲಿನ ಇರಾನ್ ರಾಯಭಾರ ಕಚೇರಿ ತಿಳಿಸಿದೆ.

ಸ್ಕಿಲ್ಸ್ ಒಲಿಂಪಿಕ್ಸ್: ಚಿತ್ರಾಗೆ ಚಿನ್ನ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಹರಿಯಾಣದ ಗ್ರೇಟರ್ ನೋಯ್ಡಾದಲ್ಲಿ ನಡೆದ 'ಇಂಡಿಯಾ ಸ್ಕಿಲ್ಸ್ ಒಲಿಂಪಿಕ್ಸ್' ಸೈಬರ್ ಭದ್ರತಾ ವಿಭಾಗದಲ್ಲಿ ನಗರದ ಚಿತ್ರಾ ಉದಯಕುಮಾರ್ ಬಂಗಾರದ ಪದಕ ಗಳಿಸಿದ್ದಾರೆ.

ಚೀನಾದ ಶಾಂಗೈನಲ್ಲಿ ಆಗಸ್ಟ್‌ನಲ್ಲಿ ನಡೆಯಲಿರುವ 'ವರ್ಲ್ಡ್ ಸ್ಕಿಲ್ಸ್ ಒಲಿಂಪಿಕ್ಸ್' ಸ್ಪರ್ಧೆಯಲ್ಲಿ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ.



ಚಿತ್ರ ಉದಯ ಕುಮಾರ್

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ.

ನಗರದಲ್ಲಿ ಇಂದು

100 ಉದಯೋನ್ಮುಖ ವಿದ್ಯಾರ್ಥಿಗಳಿಂದ ಸಂಗೀತ, ನೃತ್ಯ ಪ್ರತಿಭೋತ್ಸವ: ಉದ್ಘಾಟನೆ: ಬಿ.ಎಸ್. ಮಂಜುನಾಥಸ್ವಾಮಿ, ಅಧ್ಯಕ್ಷತೆ: ಶುಭಾ ಧನಂಜಯ್, ಅತಿಥಿಗಳು: ಬಲವಂತರಾವ್ ಪಾಟೀಲ್, ಅಶೋಕ್ ಎನ್. ಚಲವಾದಿ, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಕಾರ್ಯತಂತ್ರಗಳನ್ನು ರೂಪಿಸುವ ಕುರಿತು ದುಂಡು ಮೇಜಿನ ಸಭೆ: ಉದ್ಘಾಟನೆ: ಬಾಬು ಮ್ಯಾಥ್ಯೂ, ನಿರಂಜನಾರಾಧ್ಯ ವಿ.ಪಿ., ಅಧ್ಯಕ್ಷತೆ: ಉಮೇಶ್ ಗಂಗವಾಡಿ, ಆಯೋಜನೆ: ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30


ಹೂವಿನ ಕರಗ ಶಕ್ತ್ಯೋತ್ಸವ: ಬೆಳಿಗ್ಗೆ 11ಕ್ಕೆ ಈಶಾನ್ಯಕ್ಕೆ ಗಂಗಾ ಪೂಜೆ, ಮಧ್ಯರಾತ್ರಿ 1ಕ್ಕೆ ಮುತ್ಯಾಲಮ್ಮ ದೇವಿಯ ಹೂವಿನ ಕರಗ ಶಕ್ತ್ಯೋತ್ಸವ, ದೂಪನಹಳ್ಳಿ ಗ್ರಾಮದಲ್ಲಿ ಎಲ್ಲ ದೇವರ ಹೂವಿನ ಪಾಲಕೋತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ, ಮಹೇಶ್ವರಮ್ಮ ದೇವಿ, ಕಾಟೇರಮ್ಮ ದೇವಿ ದೇವಸ್ಥಾನಗಳ ಅಭಿವೃದ್ಧಿ ಮಂಡಳಿ, ದೂಪನಹಳ್ಳಿ, ಎಚ್‌ಎಎಲ್ ಎರಡನೇ ಹಂತ, ಇಂದಿರಾನಗರ.

ಮುತ್ಯಾಲಮ್ಮ ದೇವಿ ರಥೋತ್ಸವ: ಮಂದಸನೋತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

'ಶಬ್ದಾನುಸಂಧಾನ' ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ ಬಡಿಗೇರ, ಆಯೋಜನೆ: ಅಭಿನಯ ತರಂಗ ನಾಟಕ ಶಾಲೆ, ಸ್ಥಳ: ಕೆ.ವಿ. ಸುಬ್ಬಣ್ಣ ಆಪ್ತ ರಂಗಮಂದಿರ, ಟೀಚರ್ಸ್ ಕಾಲೊನಿ, ಮೊದಲನೇ ಹಂತ, ಸಂಜೆ 5.30, ರಾತ್ರಿ 8

88ನೇ ಶ್ರೀರಾಮನವಮಿ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಯೋಗ ಕೀರ್ತನಾ, ಅದಿತಿ ಕೃಷ್ಣಪ್ರಕಾಶ್, ಎಚ್.ಎಸ್. ಸುಧೀಂದ್ರ, ಶರತ್ ಕೌಶಿಕ್, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಸುಮಾ ಸುಧೀಂದ್ರ, ಕೆ.ವಿ. ಪ್ರಸಾದ್, ನಾರಾಯಣ ಮೂರ್ತಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 4.30 ರಿಂದ

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅಶ್ವಿನಿ ಸತೀಶ್, ಪಿಟೀಲು: ಅಚ್ಯುತ್ ರಾವ್, ಮೃದಂಗ: ಅದಮ್ಯ ರಮಾನಂದ್, ಖಂಜೀರಾ: ಆರ್. ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30



ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ರಸ್ತೆ ದುರಸ್ತಿಗೊಳಿಸಿ'



ಸರ್ಜಾಪುರದ ಕಸವನಹಳ್ಳಿಯ ಚರ್ಚ್ ರಸ್ತೆಯ ಎರಡನೇ ಕ್ರಾಸ್‌ನಲ್ಲಿ ಗುಂಡಿಗಳು ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಮಳೆಗಾಲದಲ್ಲಿ ಈ ರಸ್ತೆಯ ಗುಂಡಿಗಳಲ್ಲಿ ನೀರು ತುಂಬಿಕೊಂಡು ರಸ್ತೆ ಯಾವುದು, ಗುಂಡಿ ಯಾವುದು ಎಂಬುದೇ ಗೊತ್ತಾಗುವುದಿಲ್ಲ. ದ್ವಿಚಕ್ರ ವಾಹನ ಸವಾರರು ಈ ಗುಂಡಿಗಳಲ್ಲಿ ಬಿದ್ದು ಕೈಕಾಲು ಮುರಿದುಕೊಂಡಿರುವ ಘಟನೆಗಳು ನಡೆದಿವೆ. ಕೂಡಲೇ ಸಂಬಂಧಪಟ್ಟ ಪಾಲಿಕೆಯ ಸಿಬ್ಬಂದಿ ಈ ರಸ್ತೆಯನ್ನು ದರುಸ್ತಿಗೊಳಿಸಬೇಕು.

ಕಸವನಹಳ್ಳಿ ನಿವಾಸಿಗಳು

'ರಸ್ತೆ ಬದಿಯಲ್ಲಿ ಕಸದ ರಾಶಿ'



ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಾವರೆಕೆರೆ–ಕೆಂಗೇರಿ ಮುಖ್ಯ ರಸ್ತೆಯ ಎರಡೂ ಬದಿಗಳಲ್ಲಿ ರಾಶಿಗಟ್ಟಲೇ ಕಸ ಬಿದ್ದಿದೆ. ಇದರಿಂದಾಗಿ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಬೀದಿ ನಾಯಿಗಳು ಹಾಗೂ ಬೀಡಾಡಿ ದನಗಳು ಈ ಕಸದ ರಾಶಿಯನ್ನು ಮುಖ್ಯರಸ್ತೆಗೆ ಎಳೆದು ತರುತ್ತಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಜೊತೆಗೆ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿ ಹಾಕಿರುವ ಕಸದ ರಾಶಿಯನ್ನು ತೆರವುಗೊಳಿಸಬೇಕು.

ವಿವೇಕ ಶಾಸ್ತ್ರಿ, ತಾವರೆಕೆರೆ

'ರಸ್ತೆಯಲ್ಲಿ ಕಸದ ರಾಶಿ'



ಕೆ.ಆರ್. ಪುರದ ವಾರ್ಡ್ ಸಂಖ್ಯೆ 52ರ ಸರ್ಕಾರಿ ಶಾಲೆ ಹಾಗೂ ಕಾಲೇಜಿನ ಪಕ್ಕದಲ್ಲಿಯೇ ಕಸ ತಂದು ಸುರಿಯಲಾಗುತ್ತಿದೆ. ಬೀಡಾಡಿ ದನಗಳು ಕಸದ ರಾಶಿಯನ್ನು ಮುಖ್ಯ ರಸ್ತೆಗೆ ಎಳೆದು ತರುತ್ತಿವೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಪಾಲಿಕೆ ಸಿಬ್ಬಂದಿ ಕೂಡಲೇ ಕಸದ ರಾಶಿಯನ್ನು ವಿಲೇವಾರಿ ಮಾಡಿ ನಗರದ ಸೌಂದರ್ಯ ಕಾಪಾಡಬೇಕು.

ಕೆ.ಆರ್.ಪುರದ ನಿವಾಸಿಗಳು

'ಮನೆ ಮುಂದೆ ಕಸ'



ಅಮರ ಜ್ಯೋತಿ ನಗರದ ಆರನೇ ಅಡ್ಡ ರಸ್ತೆಯ ಮನೆಯೊಂದರ ಮುಂದೆಯೇ ಕಸದ ರಾಶಿ ಹಾಕಲಾಗಿದೆ. 25 ದಿನಗಳಿಂದ ಈ ಕಸದ ರಾಶಿ ಇಲ್ಲಿಯೇ ಬಿದ್ದಿದ್ದು, ಪಾಲಿಕೆಯ ಸಿಬ್ಬಂದಿ ತೆರವುಗೊಳಿಸಿಲ್ಲ. ಇದು ಸೊಳ್ಳೆಗಳ ಉತ್ಪತ್ತಿ ಸ್ಥಾನವಾಗಿದ್ದು, ಮನೆಯಲ್ಲಿ ಕಿಟಕಿಯನ್ನು ತೆರೆಯಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಕೂಡಲೇ ಕಸದ ರಾಶಿಯನ್ನು ವಿಲೇವಾರಿ ಮಾಡಬೇಕು.

ಶ್ರೀನಿವಾಸಮೂರ್ತಿ, ಅಮರಜ್ಯೋತಿ ನಗರ

ಜ್ಞಾನದ ಕೊಡುಕೊಳ್ಳುವಿಕೆಯ 'ಎಡ್ಯುವರ್ಸ್'ಗೆ ತೆರೆ

'ಪ್ರಜಾವಾಣಿ'–'ಡೆಕ್ಕನ್ ಹೆರಾಲ್ಡ್' ಎರಡು ದಿನ ಆಯೋಜಿಸಿದ್ದ ಶೈಕ್ಷಣಿಕ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಎರಡು ದಿನ ಆಯೋಜಿಸಿದ್ದ 'ಎಡ್ಯುವರ್ಸ್: ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೊ' ಭಾನುವಾರ ತೆರೆಕಂಡಿತು. ವಿದ್ಯಾರ್ಥಿಗಳು, ಪೋಷಕರು ಉಪಯುಕ್ತ ಮಾಹಿತಿ ಪಡೆದು, ಹೊಸ ಕನಸು ಹೊತ್ತು ತೆರಳಿದರು.

ಶನಿವಾರಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ಭಾನುವಾರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ತುಮಕೂರು, ಮೈಸೂರು, ಹಾಸನ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳಿಂದ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಕಾಲೇಜುಗಳಲ್ಲಿ ಇರುವ ಸೌಲಭ್ಯ, ನೂತನ ಕೋರ್ಸ್‌ಗಳು, ಪ್ರವೇಶ ಶುಲ್ಕ, ಉದ್ಯೋಗಾವಕಾಶ, ಶೈಕ್ಷಣಿಕ ಸಾಲಗಳ ಬಗ್ಗೆ ಇದ್ದ ಪ್ರಶ್ನೆಗಳು, ಗೊಂದಲಗಳನ್ನು ಪರಿಹರಿಸಿಕೊಂಡರು. 70ಕ್ಕೂ ಅಧಿಕ ಮಳಿಗೆಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಮಾಹಿತಿಗಳನ್ನು ನೀಡಲಾಯಿತು.

ತಮಗೆ ಗೊತ್ತಿರದ ಕೋರ್ಸ್‌ಗಳ ಬಗ್ಗೆ ಮಾಹಿತಿ ಪಡೆಯಲು ಬಹುತೇಕರು ಉತ್ಸುಕರಾಗಿದ್ದರು. ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ರೋಬೊಟಿಕ್ಸ್, ಪ್ರವಾಸೋದ್ಯಮ, ಬಿಬಿಎ, ಎಂಸಿಎ, ಫ್ಯಾಷನ್ ಡಿಸೈನಿಂಗ್, ಎಐ–ಎಂಎಸ್, ಸೈಬರ್ ಕ್ರೈಂ ಸೇರಿದಂತೆ ವಿವಿಧ ಕೋರ್ಸ್‌ಗಳು ಹಾಗೂ ಕಾಲೇಜುಗಳ ವೈಶಿಷ್ಟ್ಯಗಳ ಬಗ್ಗೆ ವಿದ್ಯಾಸಂಸ್ಥೆಗಳ ಪ್ರತಿನಿಧಿಗಳು ಮಾಹಿತಿ ಒದಗಿಸಿದರು.

ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ತಯಾರಿ ಮಟ್ಟವನ್ನು ಪರಿಶೀಲಿಸಿಕೊಳ್ಳಲು ಅನುಕೂಲವಾಗುವಂತೆ ಶನಿವಾರ ಅಣಕು ಸಿಇಟಿ ಪರೀಕ್ಷೆ ನಡೆದರೆ, ಭಾನುವಾರ ಅಣಕು ನೀಟ್ ನಡೆಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು. ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದವರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

'ಜಾಗತಿಕವಾಗಿ ಬೇಡಿಕೆಯ ಎಚ್‌ಆರ್'



ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಇತರ ಸಾಮಾನ್ಯ ಕೋರ್ಸ್‌ಗಳ ಬದಲು ಮಾನವ ಸಂಪನ್ಮೂಲ (ಎಚ್‌ಆರ್) ಪರಿಗಣಿಸಿದರೆ ಅದಕ್ಕೆ ಎಂಥ ಮನ್ನಣೆ ಇದೆ ಎಂಬುದನ್ನು ಬೆಂಗಳೂರಿನ ರಾಷ್ಟ್ರೀಯ ಮಾನವ ಸಂಪನ್ಮೂಲ ಅಭಿವೃದ್ಧಿ (ಎನ್‌ಎಚ್‌ಆರ್‌ಡಿ) ಪ್ರಧಾನ ಕಾರ್ಯದರ್ಶಿ ನಾಗನಗೌಡ ಎಸ್. ಜಕ್ಕನಗೌಡರ್ ತಿಳಿಸಿಕೊಟ್ಟರು. ಎಡ್ಯುವರ್ಸ್ ಮೇಳದಲ್ಲಿ ಭಾನುವಾರ ಅವರು ಎಚ್‌ಆರ್ ವೃತ್ತಿ ಜೀವನದ ಅಗತ್ಯತೆ ಬಗೆಗಿನ ಗೋಷ್ಠಿಯ ಮೂಲಕ ವಿದ್ಯಾರ್ಥಿಗಳಲ್ಲಿ ಹೊಸ ದೃಷ್ಟಿಕೋನವನ್ನು ಬಿತ್ತಿದರು.

'ಯಾವುದೇ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲು ಇಂಥದ್ದೇ ಕೋರ್ಸ್ ಮಾಡಬೇಕು ಎಂಬುದು ಸಾಮಾನ್ಯವಾಗಿ ಇದೆ. ಆದರೆ, ಮಾನವ ಸಂಪನ್ಮೂಲ ಅಧಿಕಾರಿಯಾಗಲು ಯಾವ ಕೋರ್ಸ್ ಮಾಡಿದರೂ ಆಗುತ್ತದೆ. ಎಂಜಿನಿಯರಿಂಗ್, ವಿಜ್ಞಾನ, ವಾಣಿಜ್ಯ ಸಹಿತ ಬೇರೆ ಬೇರೆ ಕೋರ್ಸ್‌ಗಳನ್ನು ಮಾಡಿದವರು ಎಚ್‌ಆರ್ ವಿಭಾಗದಲ್ಲಿ ನೌಕರಿ ಪಡೆಯಬಹುದು' ಎಂದು ವಿವರಿಸಿದರು.

ಒಂದು ಕಂಪನಿ ಆರಂಭವಾಗಬೇಕಿದ್ದರೂ, ಮುಚ್ಚಬೇಕಿದ್ದರೂ ಎಚ್‌ಆರ್ ಪಾತ್ರ ಬೇಕೇ ಬೇಕು. ಕಂಪನಿ ಸಂಸ್ಕೃತಿಯನ್ನು ರೂಪಿಸಲು, ಕಾರ್ಪೊರೇಟ್ ಸಂಸ್ಕೃತಿಗೆ ಹೊಂದಿಕೊಳ್ಳಲು ಅಗತ್ಯ ಇರುವ ಎಚ್‌ಆರ್ ವೃತ್ತಿಯು ಜಾಗತಿಕವಾಗಿ ಹೆಚ್ಚಿನ ಬೇಡಿಕೆಯಿರುವ ವೃತ್ತಿಗಳಲ್ಲಿ ಒಂದಾಗಿದೆ ಎಂದು ಹೇಳಿದರು.



ಪ್ರಜಾವಾಣಿ' ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿದ್ದ 'ಎಡ್ಯುವರ್ಸ್' ಮೇಳದಲ್ಲಿ ವಿದ್ಯಾರ್ಥಿಗಳು ಮಳಿಗೆಯೊಂದರಲ್ಲಿ ಮಾಹಿತಿ ಪಡೆದರು ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳು, ಪೋಷಕರ ಮಾತು



ಕಾಲೇಜುಗಳನ್ನು ಆಯ್ಕೆಮಾಡುವಾಗ ನಾನು ಏನನ್ನು ನೋಡಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು 'ಎಡ್ಯುವರ್ಸ್' ಮೇಳ ಸಹಾಯ ಮಾಡಿತು. ಬಿ.ಟೆಕ್ ಮಾಡಬೇಕು. ಅದಕ್ಕಾಗಿ ಯಾವ ಕಾಲೇಜು ಆಯ್ಕೆ ಮಾಡಬೇಕು ಎಂಬುದನ್ನು ಆಯ್ಕೆ ಮಾಡಲು ಸುಲಭವಾಯಿತು.

ಆರ್. ರಕ್ಷಿತಾ, ವಿದ್ಯಾರ್ಥಿನಿ, ಹೆಬ್ಬಾಳ



ನಾನು ಏನು ಮಾಡಬೇಕೆಂದು ನಿರ್ಧರಿಸಿರಲಿಲ್ಲ. ಇಲ್ಲಿ ಬಂದ ಮೇಲೆ ಸಿವಿಲ್ ಎಂಜಿನಿಯರಿಂಗ್ ಇಲ್ಲವೇ ಬಿ.ಟೆಕ್ ಮಾಡೋಣ ಎಂದು ತೀರ್ಮಾನಿಸಿದ್ದೇನೆ. ಎಲ್ಲ ಮಳಿಗೆಗಳಲ್ಲಿ ನಮಗೆ ಉತ್ತಮ ಮಾಹಿತಿ ದೊರೆಯಿತು.

ಕೆ. ಚರಣಿ, ವಿದ್ಯಾರ್ಥಿನಿ, ಕನಕನಗರ



ನನ್ನ ಮಗ ಇನ್ನೂ ಪ್ರಥಮ ಪಿಯುಸಿ. ಮುಂದಿನ ವರ್ಷ ದ್ವಿತೀಯ ಪಿಯು ಮುಗಿಸಿದ ಮೇಲೆ ಯಾವ ಕೋರ್ಸ್‌ಗೆ ಕಳುಹಿಸಬಹುದು ಎಂದು ತಿಳಿಯುವುದಕ್ಕಾಗಿ 'ಎಡ್ಯುವರ್ಸ್'ಗೆ ಬಂದೆ. ಇಲ್ಲಿ ಉತ್ತಮ ಮಾಹಿತಿ ದೊರೆಯಿತು.

ಪ್ರತಿಭಾ ಎಸ್., ಕೊಡಿಗೆಹಳ್ಳಿ

ಶೈಕ್ಷಣಿಕ ವಲಯದ ಪ್ರಮುಖರ ಅಭಿಪ್ರಾಯಗಳು



ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಬೇರೆ ಬೇರೆ ಕೋರ್ಸ್‌ಗಳಿವೆ. ಅವು ಮಕ್ಕಳಿಗೆ, ಪೋಷಕರಿಗೆ ತಿಳಿಯಲು ಮೇಳ ಸಹಕಾರಿಯಾಗಿದೆ. ನಮ್ಮ ಸಂಸ್ಥೆಯು ವಿಜ್ಞಾನ ವಿಭಾಗವನ್ನು ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಯೊಂದಿಗೆ ಸಂಯೋಜನೆ ಮಾಡಿದೆ. ಇದರಿಂದ ಸೇನೆಗೆ ಸಂಬಂಧಿಸಿದ ತಂತ್ರಜ್ಞಾನ ಕಲಿಯಲು ಸಾಧ್ಯ. ಪೈಲಟ್, ಸಿಇಟಿ, ಐಎಎಸ್‌ಗೆ ತರಬೇತಿ ಇದೆ. ಈ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿದ್ದೇವೆ.

ಸಂತೋಷ್ ನಾರಾಯಣ ಭಟ್, ಮ್ಯಾನೇಜರ್ (ಅಡ್ಮಿಶನ್), ಯುನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್



'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳು ಶಿಕ್ಷಣಕ್ಕೆ ಸಂಬಂಧಿಸಿದ ಮೇಳವನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ದಾರಿದೀಪವಾಗುತ್ತಿದೆ. ವಿದ್ಯಾಸಂಸ್ಥೆಗಳಿಗೆ ಅನುಕೂಲವೂ ಆಗುತ್ತಿದೆ. ಬಿಬಿಎ, ಎಂಬಿಎ, ಬಿಸಿಎ, ಎಂಸಿಎ, ಬಿಕಾಂ, ಎಂಕಾಂ ಬಿಎಚ್‌ಎಂ ಸಹಿತ ನಮ್ಮಲ್ಲಿ ಅನೇಕ ಕೋರ್ಸ್‌ಗಳಿವೆ. ಹಲವಾರು ವಿದ್ಯಾರ್ಥಿಗಳು, ಪೋಷಕರು ಬಂದು ತಮಗೆ ಏನು ಬೇಕು ಎಂಬುದನ್ನು ಕೇಳಿ ತಿಳಿದುಕೊಂಡು ಹೋದರು.

ರೋಶನ್ ರಾಥೋರ್, ಎಐಎಂಎಸ್ ನಿರ್ದೇಶಕ (ಅಡ್ಮಿಶನ್ ಮತ್ತು ಮಾರುಕಟ್ಟೆ)



'ಎಡ್ಯುವರ್ಸ್' ಎಕ್ಸ್‌ಪೊದಲ್ಲಿ ಭಾಗವಹಿಸುವ ಮೂಲಕ ಹೊಸ ಅನುಭವ ಪಡೆಯುವಂತಾಯಿತು. ಪಿಯುಸಿ ಪರೀಕ್ಷೆ ಬರೆದವರಷ್ಟೇ ಅಲ್ಲ, ಎಸ್ಸೆಸ್ಸೆಲ್ಸಿ ಪೂರೈಸಿರುವ ವಿದ್ಯಾರ್ಥಿಗಳೂ ಬಂದು ತಮಗೆ ಬೇಕಾದ ಮಾಹಿತಿ ಪಡೆದರು. ನಮ್ಮ ಸಂಸ್ಥೆಯಲ್ಲಿ ಯಾವ ಕೋರ್ಸ್‌ಗಳಿವೆ ಎಂದು ನಾವು ತಿಳಿಸಿಕೊಡುವ ಜೊತೆಗೆ ಬೇರೆ ಸಂಸ್ಥೆಗಳಲ್ಲಿ ಯಾವ ಕೋರ್ಸ್‌ಗಳಿವೆ ಎಂದು ನಾವೂ ತಿಳಿಯುವಂತಾಯಿತು.

ದಿವ್ಯಾ, ಅಡ್ಮಿಶನ್ ಕೌನ್ಸೆಲರ್, ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜು



ನಿರ್ದಿಷ್ಟ ಕೋರ್ಸ್‌ಗಳ ಒಳಗೆ ಮೇಜರ್, ಮೈನರ್ ಎಂದು ಎರಡು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಬೇರೆ ವಿದ್ಯಾಸಂಸ್ಥೆಗಳಲ್ಲಿ ಅವಕಾಶವಿದೆ. ಆದರೆ, ನಮ್ಮಲ್ಲಿ ವಿಶೇಷ ಏನೆಂದರೆ ಮೇಜರ್ ಆಗಿ ತಾಂತ್ರಿಕ ವಿಭಾಗದ ಕೋರ್ಸ್ ಆಯ್ಕೆ ಮಾಡಿಕೊಂಡವರಿಗೆ ಮೈನರ್ ಆಗಿ ಮ್ಯಾನೇಜ್‌ಮೆಂಟ್ ಕೋರ್ಸ್ ಆಯ್ಕೆ ಮಾಡಲು ಅವಕಾಶವಿದೆ. ಅದೇ ರೀತಿ ವೈಸ್‌ವರ್ಸ ಕೂಡ ಇದೆ. ಬಿ.ಟೆಕ್ ಹೊರತುಪಡಿಸಿ ಉಳಿದ ಎಲ್ಲ ವಿಷಯಗಳಲ್ಲಿ ಶೇ 100ರಷ್ಟು ವಿದ್ಯಾರ್ಥಿವೇತನ ಪಡೆಯಲು ಅವಕಾಶವಿದೆ. 80 ವರ್ಷದ ಇತಿಹಾಸ ಇರುವ ನಮ್ಮ ಸಂಸ್ಥೆ ಹೊಸತನಕ್ಕೆ ಸದಾ ತೆರೆದುಕೊಂಡಿದೆ.

ಬೆಳ್ಳಿಯಪ್ಪ ಎ.ಪಿ., ಡೆಪ್ಯುಟಿ ಹೆಡ್, ಔಟ್‌ರೀಚ್, ಆರ್.ವಿ. ವಿಶ್ವವಿದ್ಯಾಲಯ



ಮೇಳದಲ್ಲಿ ಎರಡನೇ ದಿನ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಉತ್ತಮ ಸ್ಪಂದನೆ ದೊರೆಯಿತು. ನಮ್ಮಲ್ಲಿ ಐಬಿಎಂ ಸಂಯೋಜಿತ ಕೋರ್ಸ್, ಕೋ ಬ್ರ್ಯಾಂಡೆಡ್ ಕೋರ್ಸ್, ಹೈ ಎಂಡ್ ಇಂಟಿಗ್ರೇಟೆಡ್ ಕೋರ್ಸ್ ಸೇರಿದಂತೆ ಅನೇಕ ನವೀನ ಕೋರ್ಸ್‌ಗಳಿವೆ. ಆದರೂ ಎಂಜಿನಿಯರಿಂಗ್ ಮತ್ತು ಆರೋಗ್ಯ ವಿಜ್ಞಾನ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ವಿದ್ಯಾರ್ಥಿಗಳಿಗೆ ಅಗತ್ಯ ಇರುವ ಮಾಹಿತಿ ನೀಡಿದೆವು.

ಲೇಖಾ ಗೌಡ, ಕೃಪಾನಿಧಿ ವಿದ್ಯಾಸಂಸ್ಥೆ



ನಮ್ಮಲ್ಲಿ ನರ್ಸರಿಯಿಂದ ವೈದ್ಯಕೀಯ ಕೋರ್ಸ್‌ಗಳವರೆಗೆ ಎಲ್ಲ ವಿಭಾಗಗಳಿವೆ. ಆಯುರ್ವೇದ ಮತ್ತು ಯುನಾನಿ ಹೊರತುಪಡಿಸಿ ಯಾವುದೇ ಕೋರ್ಸ್‌ಗಳನ್ನು ಕಲಿಯಬಹುದು. ಪುಟ್ಟ ಮಕ್ಕಳಿಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ, ರಾಜ್ಯ ಪಠ್ಯಕ್ರಮ, ಸಿಬಿಎಸ್‌ಇ, ಐಸಿಎಸ್‌ಇ ಕಲಿಯಲು ಅವಕಾಶವಿದ್ದರೆ, ಎಸ್‌ಎಸ್‌ಎಲ್‌ಸಿ, ಪಿಯುಸಿ ನಂತರ ಯಾವ ಕೋರ್ಸ್ ಬೇಕು ಅದನ್ನು ಕಲಿಸುತ್ತೇವೆ. ಈಗಿನ ಮಕ್ಕಳಿಗೆ ಯಾವ ಕೋರ್ಸ್, ಯಾವ ಕಾಲೇಜಿನಲ್ಲಿದೆ ಎಂಬುದೆಲ್ಲ ಗೊತ್ತು. ಇಲ್ಲಿ ಬಂದು ಅವರಿಗೆ ಬೇಕಾದುದನ್ನು ಅಂತಿಮಗೊಳಿಸುತ್ತಿದ್ದಾರೆ.

ಮುನೇಶ್, ಆಡಳಿತಾಧಿಕಾರಿ, ದಿ ಆಕ್ಸ್‌ಫರ್ಡ್ ಎಜುಕೇಶನ್ ಇನ್‌ಸ್ಟಿಟ್ಯೂಷನ್ಸ್



ವಿದ್ಯಾರ್ಥಿಗಳು, ಪೋಷಕರು ಅವರ ಗೊಂದಲಗಳನ್ನು ಪರಿಹರಿಸಿಕೊಳ್ಳಲು 'ಎಡ್ಯುವರ್ಸ್' ಮೇಳ ಅನುಕೂಲವಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ತಜ್ಞರು ಶಿಕ್ಷಣಕ್ಕೆ ಸಂಬಂಧಿಸಿದ ಉತ್ತಮ ಅಂಶಗಳನ್ನು ಹೇಳಿದ್ದಾರೆ. ಪ್ರಸ್ತುತ ಕೈಗಾರಿಕೆಗಳಲ್ಲಿ ಏನಾಗಿದೆ? ಏನಾಗುತ್ತಿದೆ? ಕೈಗಾರಿಕೆಗಳಿಗೆ ಏನು ಬೇಕಾಗಿದೆ ಎಂಬುದು ತಿಳಿಯುವುದು ಅಗತ್ಯ. ಅಂಥವುಗಳನ್ನು ನಾವು ಹೇಳಿಕೊಡುತ್ತಿದ್ದೇವೆ. ಗುಣಮಟ್ಟದ ಶಿಕ್ಷಣ ಮತ್ತು ಉದ್ಯೋಗ ಒದಗಿಸುವುದು ನಮ್ಮ ಧ್ಯೇಯ.

ಯೋಗೇಶ್ ಜಿ.ಎಸ್., ಉಪ ಪ್ರಾಂಶುಪಾಲರು, ಈಸ್ಟ್ ಪಾಯಿಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್

ನಾವೇ ವಿನ್ಯಾಸ ಮಾಡದೇ ಮೇಕ್ ಇನ್ ಇಂಡಿಯಾ ಅಸಾಧ್ಯ: ಪ್ರಮೋದ್ ಕುಲಕರ್ಣಿ



'ನಾವು ಉತ್ಪನ್ನಗಳನ್ನು ವಿನ್ಯಾಸಗೊಳಿಸದೇ, ಬೇರೆ ದೇಶಗಳಲ್ಲಿ ವಿನ್ಯಾಸಗೊಳಿಸಿದ ಉತ್ಪನ್ನಗಳನ್ನು ತಂದು ಮೇಕ್ ಇನ್ ಇಂಡಿಯಾ ಎಂದು ಕರೆಯುವುದು ಸೂಕ್ತವಾಗುವುದಿಲ್ಲ. ನಾವೇ ವಿನ್ಯಾಸಗೊಳಿಸಲು ಮುಂದಾಗಬೇಕು' ಎಂದು ರೇವಾ ವಿಶ್ವವಿದ್ಯಾಲಯದ ಸಮ ಕುಲಪತಿ ಪ್ರಮೋದ್ ಆರ್. ಕುಲಕರ್ಣಿ ತಿಳಿಸಿದರು.

'ವಿನ್ಯಾಸ ಚಿಂತನೆ ಮತ್ತು ತಂತ್ರಜ್ಞಾನ ಆಧಾರಿತ ನಾವೀನ್ಯತೆ' ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅಂಕಕ್ಕಿಂತ ಕೌಶಲ ಮುಖ್ಯ. ಬಹಳಷ್ಟು ಎಂಜಿನಿಯರ್‌ಗಳಿಗೆ ಅಭಿವೃದ್ಧಿ ಗೊತ್ತು. ಆದರೆ, ನಕ್ಷೆ, ವಿನ್ಯಾಸ ಮಾಡಲು ಬರುವುದಿಲ್ಲ. ತಂತ್ರಜ್ಞಾನದಲ್ಲಿ ವಿನ್ಯಾಸ ಬಹಳ ಮುಖ್ಯ ಎಂದು ಹೇಳಿದರು. 'ದೇಶದ ವಿವಿಧ ವಿದ್ಯಾ ಸಂಸ್ಥೆಗಳಲ್ಲಿ ವಿನ್ಯಾಸ ಕೋರ್ಸ್‌ಗಳಲ್ಲಿ ಪದವಿ ಮಾಡಲು ಅವಕಾಶವಿದೆ. ಆದರೆ, ಅವೆಲ್ಲವೂ ವಿನ್ಯಾಸಕ್ಕೆ ಸಂಬಂಧಿಸಿದ ಒಂದು ವಿಷಯದ ಮೇಲಷ್ಟೇ ಕೇಂದ್ರೀಕರಿಸುತ್ತವೆ. ನಾವು ರೇವಾ ವಿಶ್ವವಿದ್ಯಾಲಯದಲ್ಲಿ ವಿನ್ಯಾಸಗೊಳಿಸಿರುವ ಬಿ.ಟೆಕ್ ಕಾರ್ಯಕ್ರಮವು ಅಸ್ತಿತ್ವದಲ್ಲಿರುವ ಕೋರ್ಸ್‌ಗಳಿಗೆ ಭಿನ್ನವಾಗಿ ವಿಶಿಷ್ಟವಾದ ರಚನೆಯನ್ನು ಹೊಂದಿದೆ' ಎಂದು ವಿವರಿಸಿದರು.

'ವಿನ್ಯಾಸ ಕೇಂದ್ರಿತ ಬಹುಶಿಸ್ತೀಯ ಎಂಜಿನಿಯರಿಂಗ್ ಕಾರ್ಯಕ್ರಮ, ಮರುಕಲ್ಪನೆಯ ಎಂಜಿನಿಯರಿಂಗ್, ಚಟುವಟಿಕೆ ಆಧಾರಿತ, ಯೋಜನಾ ಆಧಾರಿತ, ಸವಾಲು ಆಧಾರಿತ ಪಠ್ಯಕ್ರಮ ಮತ್ತು ಸೃಜನಶೀಲ ವಿನ್ಯಾಸವನ್ನು ಸಂಯೋಜಿಸಲಾಗಿದೆ ಎಂದರು.

11ಕ್ಕೆ ಜೆಡಿಎಸ್ 'ಜನತಾ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಮುಂದಾಗಿರುವ ಜೆಡಿಎಸ್ ನಾಯಕರು ಇದೇ ಏ.11ರಂದು ಕೊಮ್ಮಘಟ್ಟ ನೈಸ್ ಮೈದಾನದಲ್ಲಿ 'ಜನತಾ ಸಮಾವೇಶ' ನಡೆಸುತ್ತಿದ್ದಾರೆ.



ರಮೇಶ್ ಗೌಡ

ಈ ಕುರಿತು ಮಾಹಿತಿ ನೀಡಿದ ಜೆಡಿಎಸ್ ಗ್ರೇಟರ್ ಬೆಂಗಳೂರು ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ, ಪಕ್ಷ ಬಲವರ್ಧನೆಯ ಭಾಗವಾಗಿ ಜನತಾ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ' ಎಂದರು. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ, ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಪ್ರಮುಖರ ಸಮಿತಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ ಸಮಾವೇಶದಲ್ಲಿ ಭಾಗವಹಿಸುವರು. ಸಮಾವೇಶದ ಸಿದ್ಧತೆಗಳ ಬಗ್ಗೆ ವಿವಿಧ ಕ್ಷೇತ್ರಗಳ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ನಡೆಸಲಾಗುತ್ತಿದೆ ಎಂದರು.

ಮಹಿಳೆ ಮೇಲೆ ಅತ್ಯಾಚಾರ: ಉದ್ಯಮಿ ಬಂಧನ

ಬೆಂಗಳೂರು: ಮಹಿಳಾ ಅಧಿಕಾರಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ್ದ ಹಾಗೂ ಬ್ಲ್ಯಾಕ್‌ಮೇಲ್ ಮಾಡಿದ ಆರೋಪ ಪ್ರಕರಣದಲ್ಲಿ ಉದ್ಯಮಿಯೊಬ್ಬರನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಸ್ಟಮ್ಸ್ ಅಧೀಕ್ಷಕಿಯಾಗಿರುವ 45 ವರ್ಷದ ಸಂತ್ರಸ್ತೆ ನೀಡಿರುವ ದೂರಿನ ಮೇಲೆ ಇಂದಿರಾನಗರ ನಿವಾಸಿ ಎಂ.ಕೃಪಲಾನಿ (36) ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. 'ಎಲೆಕ್ಟ್ರಾನಿಕ್ ವಸ್ತುಗಳ ರಫ್ತು ವ್ಯವಹಾರ ನಡೆಸುತ್ತಿದ್ದ ಆರೋಪಿ, ಕಸ್ಟಮ್ಸ್ ಅಧಿಕಾರಿಗಳ ಕಣ್ಣು ತಪ್ಪಿಸಿ ಅಕ್ರಮವೆಸಗಿದ್ದಾನೆ. ಇದೇ ವೇಳೆ ಕಸ್ಟಮ್ಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಸಂತ್ರಸ್ತೆ ಬಗ್ಗೆ ತಿಳಿದುಕೊಂಡ ಆರೋಪಿ, ಆಕೆಗೆ ಬ್ಲ್ಯಾಕ್‌ಮೇಲ್ ಮಾಡಿ ಹಣ ಸುಲಿಗೆ ಮಾಡಿದ್ದಾನೆ. ಅಲ್ಲದೇ ಆಕೆಯನ್ನು ಪ್ರೀತಿಸುವ ನಾಟಕವಾಡಿ ಲೈಂಗಿಕವಾಗಿ ಬಳಸಿಕೊಂಡಿದ್ದಾನೆ. ಹೇಳಿದಂತೆ ಕೇಳದಿದ್ದರೆ ಖಾಸಗಿ ಫೋಟೊ ಮತ್ತು ವಿಡಿಯೊಗಳನ್ನು ಜಾಲತಾಣದಲ್ಲಿ ಪ್ರಕಟಿಸುವುದಾಗಿ ಬೆದರಿಕೆ ಹಾಕಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

130 ಆಟೊ ಎಲ್‌ಪಿಜಿ ಸ್ಟೇಷನ್ ಬಂದ್

ಅನಿಲ ದರ ಹೆಚ್ಚಳವಾದರೂ ಸರ್ಕಾರ ಏಕೆ ಸುಮ್ಮನಿದೆ: ಆಟೊ ಚಾಲಕರ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 130ಕ್ಕೂ ಹೆಚ್ಚು ಎಲ್‌ಪಿಜಿ ಸ್ಟೇಷನ್‌ಗಳು ಬಂದ್ ಆಗಿರುವುದರಿಂದ, ಆಟೊಗಳಿಗೆ ಬಳಸುವ ಎಲ್‌ಪಿಜಿ ಸಮಸ್ಯೆ ಇನ್ನಷ್ಟು ತೀವ್ರಗೊಂಡಿದೆ.

ನಗರ ವ್ಯಾಪ್ತಿಯ ವಿವಿಧ ಕಂಪನಿಗಳ 160 ಆಟೊ ಎಲ್‌ಪಿಜಿ ಸ್ಟೇಷನ್‌ಗಳಿಗೆ ಒಂದು ವಾರದಿಂದ ಸರಿಯಾಗಿ ಅನಿಲ ಸರಬರಾಜು ಆಗಿಲ್ಲ. ಇದರಿಂದಾಗಿ ಹಲವು ಬಂದ್ ಆಗಿದ್ದು, ಕೇವಲ 30 ಸ್ಟೇಷನ್ ಕಾರ್ಯನಿರ್ವಹಿಸುತ್ತಿವೆ.

ಸೋಮವಾರವೂ ಅನಿಲ ಸರಬರಾಜು ಆಗುವ ಸಾಧ್ಯತೆ ಕಡಿಮೆ ಇರುವುದರಿಂದ ಇನ್ನಷ್ಟು ಸ್ಟೇಷನ್‌ಗಳು ಸೇವೆ ನಿಲ್ಲಿಸುವ ಸಾಧ್ಯತೆ ಇದೆ. ಮಂಗಳವಾರ ಎಲ್‌ಪಿಜಿ ಅನಿಲ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಆಟೊ ಚಾಲಕರೊಬ್ಬರು ತಿಳಿಸಿದರು.

ಭಾನುವಾರವೂ ನಗರದ ಹಲವು ಭಾಗಗಳಲ್ಲಿ ಆಟೊ ಚಾಲಕರು ಎಲ್‌ಪಿಜಿಗಾಗಿ ಸ್ಟೇಷನ್‌ಗಳನ್ನು ಎಡತಾಕುವುದು ಸಾಮಾನ್ಯವಾಗಿತ್ತು. ಕೆಲವು ಕಡೆಯಂತೂ ಮೂರು ಗಂಟೆಗೂ ಹೆಚ್ಚು ಕಾಲ ಸರತಿಯಲ್ಲಿ ನಿಂತು ಅನಿಲ ತುಂಬಿಸಿಕೊಳ್ಳಲು ಪ್ರಯತ್ನಿಸಿದರೂ ಅಗತ್ಯದಷ್ಟು ಸಿಗಲಿಲ್ಲ. ಕೆಲವರು ಅನಿಲ ಸಿಗದೇ ಮತ್ತೊಂದು ಸ್ಟೇಷನ್‌ಗಾಗಿ ಹುಡುಕಾಟ ನಡೆಸುತ್ತಿರುವುದು ಕಂಡು ಬಂತು.

ರಾಜಾಜಿನಗರದ ಎಲ್‌ಪಿಜಿ ಸ್ಟೇಷನ್ ಒಂದರಲ್ಲಿ ಮಧ್ಯಾಹ್ನ 3 ಗಂಟೆವರೆಗೆ ಮಾತ್ರ ಸೇವೆ ನೀಡಿ ಆ ನಂತರ, 'ದಾಸ್ತಾನು ಇಲ್ಲ' ಎನ್ನುವ ಫಲಕವನ್ನು ಹಾಕಲಾಗಿತ್ತು.

'ಬೆಳಿಗ್ಗೆಯಿಂದ ಅನಿಲವೇ ಸಿಕ್ಕಿಲ್ಲ. ಇದರಿಂದ ಬೆಳಿಗಿನ ಹೊತ್ತಿನಲ್ಲಿ ₹1 ಸಾವಿರ ಆದಾಯ ತಪ್ಪಿ ಹೋಯಿತು. ನಮ್ಮ ಸಮಸ್ಯೆಯನ್ನು ಯಾರಿಗೆ ಹೇಳಿದರೂ ಪರಿಹಾರ ಸಿಗುತ್ತಿಲ್ಲ' ಎಂದು ಜೆ.ಪಿ ನಗರದ ಆಟೊ ಚಾಲಕರೊಬ್ಬರು ಅಲವತ್ತುಕೊಂಡರು.

ಈ ಮಧ್ಯೆ ಎಲ್‌ಪಿಜಿ ದರದಲ್ಲಿ ಗಣನೀಯ ಏರಿಕೆಯಾಗಿದೆ. ಒಂದು ಲೀಟರ್‌ಗೆ ₹65 ಇದ್ದ ದರ ಈಗ ₹130 ಸಮೀಪಿಸಿದೆ. ಇನ್ನೂ ಹೆಚ್ಚಾದರೆ ಹೇಗೆ ಎನ್ನುವ ಆತಂಕ ಚಾಲಕರನ್ನು ಕಾಡುತ್ತಿದೆ.

'ನಾವು ಗ್ರಾಹಕರಿಂದ ₹10ರಷ್ಟು ಹೆಚ್ಚಿನ ಪ್ರಯಾಣ ದರ ಪಡೆದರೆ ಮೊಕದ್ದಮೆ ದಾಖಲಿಸಲಾಗುತ್ತದೆ. ಅದೇ ಸ್ಟೇಷನ್‌ನಲ್ಲಿ ಎರಡು ಪಟ್ಟು ದರ ವಸೂಲಿ ಮಾಡಿದರೂ ಸರ್ಕಾರ ಏನೂ ಮಾಡುತ್ತಿಲ್ಲ. ಸಚಿವರು, ಅಧಿಕಾರಿಗಳು ಎಲ್ಲಿದ್ದಾರೆ, ನಮ್ಮ ಮೇಲಿನ ಶೋಷಣೆ ಅವರಿಗೆ ಕಾಣುವುದಿಲ್ಲವೇ' ಎಂದು ಆಟೊ ಚಾಲಕರೊಬ್ಬರು ಪ್ರಶ್ನಿಸಿದರು.



ಎಲ್‌ಪಿಜಿ ಸ್ಟೇಷನ್ ಎದುರು ಆಟೊ ರಿಕ್ಷಾಗಳ ಸಾಲು

ಅನಿಲ ವಿತರಣೆ ಹೆಚ್ಚಳ: ಐಒಸಿಎಲ್

ಕರ್ನಾಟಕದಲ್ಲಿ ಆಟೊ ಎಲ್‌ಪಿಜಿ ಸರಬರಾಜು ಪ್ರಮಾಣ ಶೇಕಡ 70ರಷ್ಟಿದ್ದು, ಇನ್ನಷ್ಟು ಸುಧಾರಣೆಯಾಗಲಿದೆ ಎಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ತಿಳಿಸಿದೆ.

ಕರ್ನಾಟಕದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ 72 ಆಟೊ ಅನಿಲ ಸ್ಟೇಷನ್‌ಗಳಿವೆ. 300ಕ್ಕೂ ಹೆಚ್ಚು ಖಾಸಗಿ ಕಂಪನಿಗಳ ಸ್ಟೇಷನ್‌ಗಳಿವೆ. ಏ.4ರಂದು 68.53 ಟನ್ ಅನಿಲ ಸರಬರಾಜು ಮಾಡಲಾಗಿದೆ. ಫೆಬ್ರವರಿಯಲ್ಲಿ 43.5 ಟನ್, ಮಾರ್ಚ್‌ನಲ್ಲಿ 59.53 ಟನ್‌ನಷ್ಟಿತ್ತು. ಸರ್ಕಾರಿ ಸ್ವಾಮ್ಯದ ಕಂಪನಿಗಳು ಬೆಂಗಳೂರಿನಲ್ಲಿ ಪ್ರತಿ ಲೀಟರ್‌ಗೆ ₹89.52ಕ್ಕೆ ಮಾರಾಟ ಮಾಡುತ್ತಿವೆ. ಖಾಸಗಿ ಕಂಪನಿಗಳ ಮಾರಾಟ ದರ ₹99ರಿಂದ ₹105ರವರೆಗೆ ಇದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಇಂಡಿಗೊ ವಿಮಾನಕ್ಕೆ ಹುಸಿ ಬಾಂಬ್ ಬೆದರಿಕೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶನಿವಾರ ಸಂಜೆ ದೆಹಲಿಗೆ ಹೊರಡಬೇಕಿದ್ದ ಇಂಡಿಗೊ ವಿಮಾನದಲ್ಲಿ ಬಾಂಬ್ ಇಟ್ಟಿರುವುದಾಗಿ ಬಂದ ಮಾಹಿತಿ ಕೆಲಕಾಲ ಆತಂಕ ಸೃಷ್ಟಿಸಿತ್ತು. ತಪಾಸಣೆ ಬಳಿಕ ಇದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಈ ವಿಮಾನದಲ್ಲಿ ಬಾಂಬ್ ಇಡಲಾಗಿದೆ' ಎಂದು ವಿಮಾನದ ಶೌಚಾಲಯದ ಟಿಷ್ಯೂ ಪೇಪರ್ ಮೇಲೆ ಬರೆದಿರುವುದು ಪ್ರಯಾಣಿಕರೊಬ್ಬರಿಗೆ ಕಂಡಿತು.



ತಕ್ಷಣ ಈ ವಿಷಯವನ್ನು ಅವರು ವಿಮಾನದ ಸಿಬ್ಬಂದಿಗೆ ಗಮನಕ್ಕೆ ತಂದರು. ಸಿಬ್ಬಂದಿ ಪೈಲಟ್‌ಗೆ ಹಾಗೂ ಪೈಲಟ್ ಏರ್ ಟ್ರಾಫಿಕ್ ಕಂಟ್ರೋಲ್‌ಗೆ ಮಾಹಿತಿ ನೀಡಿದರು. ತಕ್ಷಣ ಎಲ್ಲಾ ಪ್ರಯಾಣಿಕರನ್ನು ತುರ್ತಾಗಿ ವಿಮಾನದಿಂದ ಕೆಳಗೆ ಇಳಿಸಲಾಯಿತು. ಬಾಂಬ್ ನಿಷ್ಕ್ರಿಯ ದಳ ಸೇರಿದಂತೆ ಭದ್ರತಾ ಸಿಬ್ಬಂದಿ ವಿಮಾನವನ್ನು ಸಂಪೂರ್ಣವಾಗಿ ಪರಿಶೀಲಿಸಿದರು. ಆದರೆ ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಲಿಲ್ಲ. ಕೊನೆಗೆ ಇದು ಸುಳ್ಳು ಬಾಂಬ್ ಬೆದರಿಕೆ ಎಂದು ದೃಢಪಡಿಸಿದ ನಂತರ ವಿಮಾನ ದೆಹಲಿಗೆ ಹಾರಿತು.

ಐಪಿಎಲ್ ಟಿಕೆಟ್: ಟೆಕಿಗೆ ₹1.45 ಲಕ್ಷ ವಂಚನೆ



ಬೆಂಗಳೂರು: ಆರ್‌ಸಿಬಿ ಹಾಗೂ ಸಿಎಸ್‌ಕೆ ತಂಡಗಳ ನಡುವಿನ ಐಪಿಎಲ್ ಕ್ರಿಕೆಟ್ ಪಂದ್ಯದ ಟಿಕೆಟ್ ಮಾರಾಟ ಮಾಡುವ ನೆಪದಲ್ಲಿ ದುಷ್ಕರ್ಮಿಗಳು ಆನ್‌ಲೈನ್‌ನಲ್ಲಿ ಟೆಕಿಯೊಬ್ಬರಿಗೆ ₹1.45 ಲಕ್ಷ ವಂಚಿಸಿದ್ದಾರೆ.

ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರದ ಕ್ರಿಕೆಟ್ ಪಂದ್ಯದ ಟಿಕೆಟ್‌ಗೆ ಸಂಬಂಧಿಸಿ ಇನ್‌ಸ್ಟಾಗ್ರಾಂನಲ್ಲಿ ಹಾಕಿದ್ದ ಪೋಸ್ಟ್ ಅನ್ನು ಟೆಕಿ ಗಮನಿಸಿದ್ದಾರೆ. ಪೋಸ್ಟ್ ಹಾಕಿದವರನ್ನು ಸಂಪರ್ಕಿಸಿದಾಗ, ಪಂದ್ಯದ ಟಿಕೆಟ್‌ಗಳು, ಊಟದ ಕೂಪನ್ ಒಳಗೊಂಡಿವೆ ಎಂಬ ಆಮಿಷವೊಡ್ಡಿದ್ದಾರೆ.

ಅವರ ಮಾತು ನಂಬಿದ ಟೆಕಿ, ತನ್ನ ಹಾಗೂ ತಾಯಿಯ ಬ್ಯಾಂಕ್ ಖಾತೆಗಳಿಂದ ಟಿಕೆಟ್‌ಗಾಗಿ ಹಣ ಪಾವತಿಸಿದ್ದಾರೆ. ವಂಚಕರು ಕೂಪನ್ ಮತ್ತು ಭದ್ರತಾ ಠೇವಣಿ ಹೆಸರಿನಲ್ಲಿ ಹಂತ ಹಂತವಾಗಿ ಹಣ ವಸೂಲು ಮಾಡಿದ್ದಾರೆ.ತಾನು ವಂಚನೆಗೆ ಒಳಗಾಗಿರುವುದನ್ನು ಅರಿತ ಟೆಕಿ, ತಕ್ಷಣವೇ ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ನಂತರ ಮಹದೇವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವೆಬ್‌ಸೈಟ್ ವಿರುದ್ಧ ಪ್ರಕರಣ ದಾಖಲಿಸಿ ಆರೋಪಿಗಳ ಪತ್ತೆಗೆ ಕ್ರಮವಹಿಸಲಾಗಿದೆ. ಸಾಮಾಜಿಕ ಜಾಲತಾಣ, ಗೂಗಲ್ ವೆಬ್‌ಸೈಟ್ ಹುಡುಕಾಟದ ವೇಳೆ ಐಪಿಎಲ್ ಟಿಕೆಟ್ ಹೆಸರಿನ ನಕಲಿ ಮಾಹಿತಿ ಬಗ್ಗೆ ಎಚ್ಚರ ವಹಿಸಬೇಕು. ಕ್ರಿಕೆಟ್ ಅಭಿಮಾನಿಗಳು ನಕಲಿ ವೆಬ್‌ಸೈಟ್ ನಂಬಿ ಹಣ ಕಳೆದುಕೊಳ್ಳಬಾರದು ಎಂದು ಪೊಲೀಸರು ತಿಳಿಸಿದ್ದಾರೆ.

ಚೂರಿ ಇರಿತ: ಆರೋಪಿ ಬಂಧನ



ಬೆಂಗಳೂರು: ಕೋಣನಕುಂಟೆಯ ವಡ್ಡರಪಾಳ್ಯದಲ್ಲಿ ಮದ್ಯದ ಪಾರ್ಟಿಯಲ್ಲಿ ಸ್ನೇಹಿತನಿಗೆ ಚೂರಿಯಿಂದ ಇರಿದು ಗಾಯಗೊಳಿಸಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಕೋಣನಕುಂಟೆ ನಿವಾಸಿ ಗಿರಿವರ್ಧನ್ ಬಂಧಿತ. ಗಿರಿವರ್ಧನ್ ನಿವಾಸದಲ್ಲಿ ಮದ್ಯದ ಪಾರ್ಟಿ ಆಯೋಜಿಸಲಾಗಿತ್ತು. ಇದರಲ್ಲಿ ರಾಹುಲ್, ದಿಲೀಪ್, ಸ್ಕಂದ ಮತ್ತು ಕಾರ್ತಿಕ್ ಭಾಗಿಯಾಗಿದ್ದರು. ಮದ್ಯ ಕುಡಿಯುವಾಗ ಹಣದ ವಿಚಾರಕ್ಕೆ ರಾಹುಲ್ ಮತ್ತು ಗಿರಿವರ್ಧನ್ ನಡುವೆ ಮಾತಿನ ಚಕಮಕಿ ನಡೆಯಿತು. ಜಗಳ ತಾರಕಕ್ಕೆ ಹೋಗಿ ಗಿರಿವರ್ಧನ್ ತನ್ನ ಕಾರಿನಿಂದ ಚಾಕು ತಂದು ರಾಹುಲ್ ಎದೆಗೆ ಇರಿದಿದ್ದ. ಗಂಭೀರವಾಗಿ ಗಾಯಗೊಂಡ ರಾಹುಲ್ ಅವರನ್ನು ಕೂಡಲೇ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಕೋಣನಕುಂಟೆ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಪ್ರಸ್ತಾವಿತ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ: ಮೋದಿ ಹೇಳಿಕೆಗೆ ಸಿ.ಎಂ ತಿರುಗೇಟು

'ಕನ್ನಡಿಗರ ಧ್ವನಿ ಅಡಗಿಸುವ ಯತ್ನ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಇದು ಚುನಾವಣಾ ತಂತ್ರದಂತೆ ಕಾಣುತ್ತಿದೆ: ಸಿದ್ದರಾಮಯ್ಯ
- ದಕ್ಷಿಣದ ಧ್ವನಿ ದುರ್ಬಲಗೊಳಿಸಲು ಯತ್ನ: ಆರೋಪ
- 'ದಕ್ಷಿಣದ ಜನರ ವಿಶ್ವಾಸ ಗಳಿಸುವಲ್ಲಿ ಮೋದಿ ಸರ್ಕಾರ ವಿಫಲ'

ಬೆಂಗಳೂರು: 'ಪ್ರಸ್ತಾವಿತ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ವೇಳೆ ದಕ್ಷಿಣದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ತಗ್ಗಿಸುವುದಿಲ್ಲ ಎಂಬ ಪ್ರಧಾನಿ ನರೇಂದ್ರ ಮೋದಿಯವರ ಹೇಳಿಕೆ ರಾಜಕೀಯ ಮುತ್ಸದ್ದಿತನಕ್ಕಿಂತ ಹೆಚ್ಚಾಗಿ, ಮುಂಬರುವ ಕೇರಳ ಮತ್ತು ತಮಿಳುನಾಡು ಚುನಾವಣೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಹೆಣೆದ ಚುನಾವಣಾ ತಂತ್ರದಂತೆ ಕಾಣುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಸಿದ್ದರಾಮಯ್ಯ, 'ದಕ್ಷಿಣದ ಜನರ ವಿಶ್ವಾಸ ಗಳಿಸುವಲ್ಲಿ ವಿಫಲವಾಗಿರುವ ಮೋದಿ ಸರ್ಕಾರ, ಈಗ ಪ್ರಾತಿನಿಧ್ಯದ ಪುನರ್‌ರಚನೆಯ ಮೂಲಕ ದಕ್ಷಿಣದ ಧ್ವನಿ ದುರ್ಬಲಗೊಳಿಸಲು ಯತ್ನಿಸುತ್ತಿದೆ' ಎಂದು ದೂರಿದ್ದಾರೆ.

'ಇದು ಒಕ್ಕೂಟ ವ್ಯವಸ್ಥೆಯ ಮೇಲಿನ ಹಲ್ಲೆ. ಇಂತಹ ರಚನಾತ್ಮಕ ಬದಲಾವಣೆಯನ್ನು ಸಾರ್ವಜನಿಕ ಚರ್ಚೆ ಮತ್ತು ಸಮಾಲೋಚನೆ ಇಲ್ಲದೆ ಜಾರಿಗೊಳಿಸಬಾರದು. ಕನ್ನಡಿಗರ ಧ್ವನಿ ಅಡಗಿಸುವ ಯಾವುದೇ ಯತ್ನವನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ' ಎಂದೂ ಎಚ್ಚರಿಕೆ ನೀಡಿದ್ದಾರೆ.

'ಸಮಸ್ಯೆ ಇರುವುದು ದಕ್ಷಿಣದ ರಾಜ್ಯಗಳ ಲೋಕಸಭಾ ಸೀಟುಗಳು ಹೆಚ್ಚಾಗುತ್ತವೆ ಎಂಬುದರಲ್ಲಲ್ಲ. ಬದಲಾಗಿ, ಸೀಟುಗಳು ಹೇಗೆ ಹೆಚ್ಚಾಗುತ್ತವೆ ಮತ್ತು ಇದರಿಂದ ಅಸಮಾನವಾಗಿ ಯಾರಿಗೆ ಲಾಭವಾಗುತ್ತದೆ ಎಂಬುದರಲ್ಲಿದೆ. ಪ್ರಸ್ತಾವಿತ ವಿಸ್ತರಣೆಯಡಿ, ಪ್ರತಿ ರಾಜ್ಯದಲ್ಲೂ ಸೀಟುಗಳು ಹೆಚ್ಚಾದರೂ, ಅದರ ದರ ಮತ್ತು ಪ್ರಮಾಣ ಸ್ಪಷ್ಟವಾಗಿ ಬಿಜೆಪಿ ಪ್ರಾಬಲ್ಯವಿರುವ ಉತ್ತರದ ರಾಜ್ಯಗಳಿಗೆ ಅತಿ ಹೆಚ್ಚು ಲಾಭ ತಂದುಕೊಡಲಿದೆ' ಎಂದಿದ್ದಾರೆ.

'ಕರ್ನಾಟಕದ ಸೀಟುಗಳು 28ರಿಂದ 42ಕ್ಕೆ (+14), ತಮಿಳುನಾಡು 39 ರಿಂದ 58-59ಕ್ಕೆ (+20), ಆಂಧ್ರಪ್ರದೇಶ 25ರಿಂದ 37-38ಕ್ಕೆ (+12-13), ತೆಲಂಗಾಣ 17 ರಿಂದ 25-26ಕ್ಕೆ (+8-9) ಮತ್ತು ಕೇರಳ 20ರಿಂದ 30ಕ್ಕೆ (+10) ಏರಿಕೆಯಾಗಲಿವೆ. ಐದು ದಕ್ಷಿಣದ ರಾಜ್ಯಗಳು ಒಟ್ಟಾಗಿ ಕೇವಲ 63ರಿಂದ 66 ಹೆಚ್ಚುವರಿ ಸೀಟುಗಳನ್ನು ಪಡೆದರೆ, ಉತ್ತರದ ಏಳು ಹಿಂದಿ-ಭಾಷಿಕ ರಾಜ್ಯಗಳು 128ರಿಂದ 131 ಸೀಟುಗಳನ್ನು ಪಡೆಯುತ್ತವೆ' ಎಂದಿದ್ದಾರೆ.

ಬೈಕ್ ಡಿಕ್ಕಿ: ಇಬ್ಬರ ಸಾವು

ಬೆಂಗಳೂರು: ಬೆಂಗಳೂರು-ಬಳ್ಳಾರಿ ರಸ್ತೆಯ ವಿದ್ಯಾಶಿಲ್ಪಾ ಕ್ರಾಸ್ ಬಳಿ ಭಾನುವಾರ ನಸುಕಿನಲ್ಲಿ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ನಿವಾಸಿಗಳಾದ ಶಾಂತಪ್ಪ (35) ಮತ್ತು ಸಿದ್ದಾರ್ಥ (19) ಮೃತಪಟ್ಟವರು. ಕಟ್ಟಡ ಕಾರ್ಮಿಕರಾಗಿದ್ದ ಇಬ್ಬರೂ ಅಲ್ಲಾಳಸಂದ್ರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕೆಲಸದ ನಿಮಿತ್ತ ಹೈದರಾಬಾದ್‌ಗೆ ಹೋಗಿದ್ದ ಶಾಂತಪ್ಪ ಮತ್ತು ಸಿದ್ದಾರ್ಥ, ಬೆಳಗಿನ ಜಾವ ವಾಪಸ್ ಬೆಂಗಳೂರಿಗೆ ಬರುವಾಗ ವಿದ್ಯಾಶಿಲ್ಪಾ ಕ್ರಾಸ್ ಬಳಿ ಬಸ್‌ನಿಂದ ಇಳಿದು ಮನೆಗೆ ಹೊರಟಿದ್ದರು. ಒಟ್ಟಿಗೆ ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ಬೈಕ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಇಬ್ಬರೂ ಸ್ಥಳದಲ್ಲೇ ಅಸುನೀಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

'ಖಾಸಗಿ ಬಸ್ ಚಾಲಕನ ನಿರ್ಲಕ್ಷ್ಯ ಹಾಗೂ ಬೈಕ್ ಸವಾರನ ಅತಿಯಾದ ವೇಗದ ಕಾರಣಕ್ಕೆ ಅಪಘಾತ ಸಂಭವಿಸಿದೆ. ವಿದ್ಯಾಶಿಲ್ಪಾ ಕ್ರಾಸ್ ಬಳಿ ಬಸ್ ನಿಲುಗಡೆಗೆ ಅವಕಾಶವಿಲ್ಲದಿದ್ದರೂ ಬಸ್ ನಿಲ್ಲಿಸಲಾಗಿದೆ. ಮೇಲ್ಸೇತುವೆಯ ಪಕ್ಕಕ್ಕೆ ಸರ್ವಿಸ್ ರಸ್ತೆಯಲ್ಲಿ ಬಸ್ ನಿಲುಗಡೆಗೆ ಸ್ಥಳಾವಕಾಶವಿದೆ. ಚಾಲಕ ಸರ್ವಿಸ್ ರಸ್ತೆಯಲ್ಲಿ ಹೋಗುವುದನ್ನು ತಪ್ಪಿಸುವ ಉದ್ದೇಶಕ್ಕೆ ಮೇಲ್ಸೇತುವೆಗೂ ಮೊದಲೇ ವಿದ್ಯಾಶಿಲ್ಪಾ ಕ್ರಾಸ್ ಬಳಿ ಬಸ್ ನಿಲ್ಲಿಸಿ ಅವರನ್ನು ಕೆಳಗಿಳಿಸಿದ್ದಾನೆ. ಈ ಜಾಗದಲ್ಲಿ ಜನರು ರಸ್ತೆ ದಾಟುವಾಗ ಪದೇಪದೇ ಅಪಘಾತ ಸಂಭವಿಸುತ್ತಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚಾಲಕನ ವಿರುದ್ಧ ನಿರ್ಲಕ್ಷ್ಯ ಆರೋಪದಡಿ ಪ್ರಕರಣ ದಾಖಲಿಸಿ ಬಸ್ ಜಪ್ತಿ ಮಾಡಲಾಗಿದೆ. ಬೈಕ್ ಸವಾರ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ಮದ್ಯ ಕುಡಿದು ಕಾರು ಚಾಲನೆ ಮಾಡುವ ವೇಳೆ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿರುವ ಘಟನೆ ಜೀವನ್ ಭಿಮಾನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಬೈಕ್ ಸವಾರ ಪ್ರತೀಕ್ (19) ಮೃತ ಯುವಕ. ಪ್ರತೀಕ್, ರಾತ್ರಿ 11 ಗಂಟೆಗೆ ಬುಲೆಟ್‌ನಲ್ಲಿ ಮಲ್ಲೇಶ್ ಪಾಳ್ಯದ ಮಾರುತಿನಗರ 10ನೇ ಮುಖ್ಯರಸ್ತೆಯಲ್ಲಿ ಹೋಗುತ್ತಿದ್ದರು. ಇದೇ ರಸ್ತೆಯಲ್ಲಿ ವೇಗವಾಗಿ ಬಂದ ಇನೊವಾ ಕಾರು, ಬುಲೆಟ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಪ್ರತೀಕ್ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.



ಜೀವನ್ ಭಿಮಾನಗರ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಕಾರು ಚಾಲಕನನ್ನು ವಶಕ್ಕೆ ಪಡೆದು, ವೈದ್ಯಕೀಯ ತಪಾಸಣೆ ನಡೆಸಿದಾಗ ಮದ್ಯ ಕುಡಿದು ಚಾಲನೆ ಮಾಡಿರುವುದು ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಗ್ಯಾರಂಟಿಗೆ ಆಡಳಿತ ವಿರೋಧಿ ಅಲೆ ಸವಾಲು

ಕ್ಷೇತ್ರದಲ್ಲಿ ಪಾರಮ್ಯ ಸಾಧಿಸಲು ಉಭಯ ಪಕ್ಷಗಳ ನಾಯಕರು ಕಸರತ್ತು

• ಬಸವರಾಜ ಹವಾಲ್ದಾರ


ಉಮೇಶ ಮೇಟಿ


ವೀರಣ್ಣ ಚರಂತಿಮಠ

ಬಾಗಲಕೋಟೆ: ಬಿರು ಬೇಸಿಗೆಯಿಂದಾಗಿ ಕೃಷ್ಣೆ, ಘಟಪ್ರಭಾ, ಮಲಪ್ರಭಾ ನದಿಗಳಲ್ಲಿ ನೀರಿನ ಹರಿವು ಕಡಿಮೆ ಆಗುತ್ತಿದೆ. ಆದರೆ, ಬಾಗಲಕೋಟೆಯಲ್ಲಿ ರಾಜಕೀಯ ನಾಯಕರ ಪ್ರವಾಹವೇ ಹರಿದು ಬರುತ್ತಿದೆ. ಪ್ರಚಾರದ ಅಬ್ಬರದಲ್ಲಿ ಕ್ಷೇತ್ರದ ಸಮಸ್ಯೆಗಳು ಗೌಣವಾಗಿವೆ.

ಕ್ಷೇತ್ರ ಉಳಿಸಿಕೊಳ್ಳಲು ಕಾಂಗ್ರೆಸ್ 'ಪಂಚ ಗ್ಯಾರಂಟಿ' ಮಂತ್ರ ಪಠಿಸಿದರೆ, ಅಭಿವೃದ್ಧಿ ಶೂನ್ಯ ಸರ್ಕಾರ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ. ಗ್ಯಾರಂಟಿ ಯೋಜನೆಗಳು ಗೆಲುವಿಗೆ ಶ್ರೀರಕ್ಷೆ ಆಗಲಿವೆ ಎಂಬ ನಿರೀಕ್ಷೆ ಕಾಂಗ್ರೆಸ್ ಹೊಂದಿದೆ. ಆಡಳಿತ ವಿರೋಧಿ ಅಲೆಯಿಂದ ಕ್ಷೇತ್ರದಲ್ಲಿ ಕಮಲ ಅರಳಲಿದೆ ಎಂಬ ವಿಶ್ವಾಸ ಬಿಜೆಪಿಗೆ ಇದೆ.

ಬಾಗಲಕೋಟೆ ಕ್ಷೇತ್ರದ ಉಪಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಗೆಲುವಿಗಿಂತ ಎರಡೂ ಪಕ್ಷಗಳ ನಾಯಕರಿಗೆ ಕ್ಷೇತ್ರದ ಮೇಲೆ ಹಿಡಿತ ಹೊಂದುವುದು ಪ್ರತಿಷ್ಠೆಯ ವಿಷಯವಾಗಿದೆ. ಸಿ.ಎಂ ಸಿದ್ದರಾಮಯ್ಯ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿ ಎರಡೂ ಪಕ್ಷಗಳ ನಾಯಕರ ದಂಡೇ ಇಲ್ಲಿದೆ.

2023ರ ಫಲಿತಾಂಶ	
ಕಾಂಗ್ರೆಸ್ ಅಭ್ಯರ್ಥಿ	ಎಚ್.ವೈ.ಮೇಟಿ (ಪಡೆದ ಮತಗಳು **79,336**)
ಬಿಜೆಪಿ ಅಭ್ಯರ್ಥಿ	ವೀರಣ್ಣ ಚರಂತಿಮಠ (ಪಡೆದ ಮತಗಳು **73,458**)
ಗೆದ್ದ ಪಕ್ಷ	ಕಾಂಗ್ರೆಸ್
ಗೆಲುವಿನ ಅಂತರ	**5,878** ಮತ

ಎಚ್.ವೈ.ಮೇಟಿ ಅವರು ಜನತಾ ಪರಿವಾರದ ಕಾಲದಿಂದಲೂ ಸಿದ್ದರಾಮಯ್ಯ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದರು. ಅವರದ್ದೇ ಕುರುಬ ಸಮುದಾಯಕ್ಕೆ ಸೇರಿದ್ದರಿಂದ ಸಿದ್ದರಾಮಯ್ಯ ಅವರಿಗೆ ಇದು ಪ್ರತಿಷ್ಠೆಯ ಕಣವಾಗಿದೆ. 'ಮುಖ್ಯಮಂತ್ರಿ ಹುದ್ದೆ ಬದಲಾವಣೆ ಕುರಿತ ಚರ್ಚೆ ಕೊನೆಗಾಣಿಸಲು ಮತ್ತು ಹೈಕಮಾಂಡ್‌ಗೆ ಸಂದೇಶ ಕಳುಹಿಸಲು ಉಪಚುನಾವಣೆ ಫಲಿತಾಂಶ ನೆರವಾಗಬಹುದು' ಎಂಬ ನಿರೀಕ್ಷೆ ಅವರದ್ದು.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಹಲವು ಆಕ್ಷೇಪ ಎತ್ತಿರುವ ವೇಳೆಯಲ್ಲೇ ಎದುರಾಗಿರುವ ಉಪ ಚುನಾವಣೆಯಲ್ಲಿ ಗೆಲುವು ದಾಖಲಿಸಿದರೆ, ಸಮರ್ಥ ನಾಯಕತ್ವ ಸಾಬೀತುಪಡಿಸಲು ನೆರವಾಗಬಹುದು ಎಂಬ ಆತ್ಮವಿಶ್ವಾಸದಲ್ಲಿ ಬಿ.ವೈ.ವಿಜಯೇಂದ್ರ ಇದ್ದಾರೆ.



ಮತದಾರರ ವಿವರ

1,26,999 ಪುರುಷರು

1,32,775 ಮಹಿಳೆಯರು

23 ಲಿಂಗತ್ವ ಅಲ್ಪಸಂಖ್ಯಾತರು

2,59,775 ಒಟ್ಟು

ಕಣದಲ್ಲಿರುವವರು

ಕಾಂಗ್ರೆಸ್‌ನಿಂದ ಉಮೇಶ ಮೇಟಿ, ಬಿಜೆಪಿಯಿಂದ ವೀರಣ್ಣ (ವೀರಭದ್ರಯ್ಯ) ಚರಂತಿಮಠ, ಉತ್ತಮ ಪ್ರಜಾಕೀಯ ಪಾರ್ಟಿಯಿಂದ ಅಂತೋಷ ಸವ್ವಾಸೆ, ಜನತಾ ಚಳುವಳಿ ಭಾರತ ಪಕ್ಷದಿಂದ ತೇಜೋರಾಮ ಶೆಟ್ಟಿ ದೇವಾಂಗ, ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಗರಾಜ ಕಲಕುಟಗರ, ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ, ಆಲ್ ಇಂಡಿಯಾ ಜನರಕ್ಷ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರರಾಗಿ ಆನಂದ ಜಕಾತಿ, ರವಿ ಪಡಸಲಗಿ ಕಣದಲ್ಲಿದ್ದಾರೆ.

ಗೆಲುವಿನ ದಾರಿ..

2008ರಿಂದ 2023ರವರೆಗೆ ನಾಲ್ಕೂ ಚುನಾವಣೆಗಳಲ್ಲಿ ಎಚ್.ವೈ. ಮೇಟಿ ಹಾಗೂ ವೀರಣ್ಣ ಚರಂತಿಮಠ ಎದುರಾಳಿಗಳು ಆಗಿದ್ದಾರೆ. ನಾಲ್ಕೂ ಚುನಾವಣೆಗಳಲ್ಲಿ 1.41 ಲಕ್ಷ ಮತಗಳಿರುವ ಗ್ರಾಮೀಣ ಪ್ರದೇಶದಲ್ಲಿ ಮೇಟಿ ಮುನ್ನಡೆ ಸಾಧಿಸಿದ್ದರು. 1.18 ಲಕ್ಷ ಮತಗಳಿರುವ ನಗರದ ಪ್ರದೇಶದಲ್ಲಿ ಚರಂತಿಮಠ ಹೆಚ್ಚಿನ ಮತಗಳನ್ನು ಗಳಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಮುನ್ನಡೆ ಸಾಧಿಸಿ, ನಗರ ಪ್ರದೇಶದಲ್ಲಿ ಬಿಜೆಪಿ ಆ ಮುನ್ನಡೆ ದಾಟದಂತೆ ನೋಡಿಕೊಳ್ಳಬೇಕಾದ ಸವಾಲು ಕಾಂಗ್ರೆಸ್‌ಗೆ ಇದೆ. ನಗರದಲ್ಲಿ ಬಿಜೆಪಿ ಮುನ್ನಡೆ ಸಾಧಿಸಿ, ಗ್ರಾಮೀಣ ಪ್ರದೇಶದಲ್ಲಿ ಕಾಂಗ್ರೆಸ್ ನಿಯಂತ್ರಿಸಬೇಕಿದೆ. ಸಾರ್ವತ್ರಿಕ ಚುನಾವಣೆಯ ಮಾದರಿಯನ್ನೇ ಉಪಚುನಾವಣೆಯಲ್ಲಿ ಮುರಿಯುವ ಯತ್ನ ನಡೆದಿದೆ.

ಕ್ಷೇತ್ರ ಸಮೀಕ್ಷೆ

ಹೇಗಾದರೂ ಮಾಡಿ ಈ ಕ್ಷೇತ್ರ ತಮ್ಮದಾಗಿಸಿಕೊಳ್ಳಬೇಕು ಎಂದು ಪಣ ತೊಟ್ಟಿರುವ ಬಿಜೆಪಿ ನಾಯಕರು, ಪಕ್ಷದಿಂದ ಉಚ್ಚಾಟನೆಗೊಂಡಿರುವ ಬಸನಗೌಡ ಪಾಟೀಲ ಅವರಿಗೂ ಪ್ರಚಾರ ಮಾಡಲು ಸಮ್ಮತಿ ನೀಡಿದ್ದಾರೆ.

ಅನುಕಂಪದ ಲಾಭಕ್ಕೆ ಯತ್ನ: ಎಚ್.ವೈ. ಮೇಟಿ ಅವರ ನಿಧನದ ಅನುಕಂಪದ ಅಲೆಯ ಲಾಭ ಪಡೆಯಲು ಕಾಂಗ್ರೆಸ್ ಮುಂದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, 'ತಬ್ಬಲಿ ಮಗನನ್ನು ನಿಮ್ಮ ಜೋಳಿಗೆಗೆ ಹಾಕಿದ್ದೇವೆ. ಗೆಲ್ಲಿಸುವ ಜವಾಬ್ದಾರಿ ನಿಮ್ಮದು' ಎಂದು ಹೇಳುತ್ತಿದ್ದಾರೆ.

ಸೇರ್ಪಡೆ ತಂತ್ರ: 2023ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠರ ಸಹೋದರ ಮಲ್ಲಿಕಾರ್ಜುನ ಚರಂತಿಮಠ ಸ್ಪರ್ಧಿಸಿ 10 ಸಾವಿರ ಮತಗಳನ್ನು ಗಳಿಸಿದ್ದರು. ಈಗ ಅವರು ಕಾಂಗ್ರೆಸ್ ಸೇರಿದ್ದಾರೆ. ತಾವು ಗಳಿಸಿದ್ದ ಮತದಲ್ಲಿ ಎಷ್ಟು ಮತಗಳನ್ನು ಕಾಂಗ್ರೆಸ್‌ಗೆ ಕೊಡಿಸಲಿದ್ದಾರೆ ನೋಡಬೇಕು.

ಇನ್ನೊಂದೆಡೆ ಇದೇ ಚುನಾವಣೆಯಲ್ಲಿ 3,470 ಮತಗಳನ್ನು ಗಳಿಸಿದ್ದ ಜೆಡಿಎಸ್‌ನ ಡಾ.ದೇವರಾಜ ಪಾಟೀಲ ಬಿಜೆಪಿ ಸೇರಿದ್ದಾರೆ. ಎಚ್.ವೈ. ಮೇಟಿ ಸಮುದಾಯಕ್ಕೆ ಸೇರಿರುವ ಇವರು, ಬಿಜೆಪಿಗೆ ಎಷ್ಟು ಮತ ತರಲಿದ್ದಾರೆ ಎಂಬ ಕುತೂಹಲ ಇದೆ. ಜೆಡಿಎಸ್ ಪಕ್ಷದ ಮುಖಂಡರೂ ಪ್ರಚಾರ ಮಾಡುತ್ತಿದ್ದಾರೆ.

ಒಗ್ಗಟ್ಟಿನ ಜಪ: 2004ರಿಂದ ಆಂತರಿಕ ಭಿನ್ನಮತದಿಂದ ನಲುಗುತ್ತಿದ್ದ ಬಿಜೆಪಿಯು ಈ ಬಾರಿ ಒಗ್ಗಟ್ಟಿನ ಸಂದೇಶ ರವಾನಿಸಿದೆ. ಎಲ್ಲರೂ ಜೊತೆಗೂಡಿ ಪ್ರಚಾರದಲ್ಲಿ ತೊಡಗಿದ್ದಾರೆ.

ಬಿಟಿಡಿಎ ಅಧ್ಯಕ್ಷರ ನೇಮಕ ಉಳಿದ ಆಕಾಂಕ್ಷಿಗಳಲ್ಲಿ, ಎಚ್.ವೈ. ಮೇಟಿ ಅವರ ಹಿರಿಯ ಪುತ್ರ ಮಲ್ಲಿಕಾರ್ಜುನ ಅವರಿಗೆ ಟಿಕೆಟ್ ಸಿಗದಿರುವುದು ಅವರ ಬೆಂಬಲಿಗರಲ್ಲಿ ಬೇಸರ ಮೂಡಿಸಿದೆ

ಬಿಸಿಲಿನ ತಾಪ ಏರಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಗೆಲುವಿಗಾಗಿ ಬೆವರು ಹರಿಸುತ್ತಿದ್ದಾರೆ. ಎಲ್ಲವನ್ನೂ ವೀಕ್ಷಿಸುತ್ತಿರುವ ಮತದಾರರು ಬೆವರಿನ ಫಲವನ್ನು ಯಾರಿಗೆ ನೀಡುವರು ಎಂಬುದೇ ಸದ್ಯದ ಕುತೂಹಲ.

ಸುದ್ದಿ 2 ನಿಮಿಷ

'ಚುನಾವಣಾ ಆಯೋಗ ಸ್ವಾಯತ್ತವಾಗಿರಬೇಕು'

ನವದೆಹಲಿ: 'ಸಂವಿಧಾನದತ್ತ ಆಡಳಿತವು ಮುಂದುವರಿಯಬೇಕು ಎಂದಾದರೆ, ಚುನಾವಣಾ ಆಯೋಗವೂ ಸೇರಿದಂತೆ ಭಾರತದ ಸಾಂವಿಧಾನಿಕ ಸಂಸ್ಥೆಗಳು ಸ್ವಾಯತ್ತವಾಗಿ ಕೆಲಸ ಮಾಡಬೇಕು' ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅಭಿಪ್ರಾಯಪಟ್ಟರು.

ಪಟ್ನಾದ ಚಾಣಕ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ 'ಹಕ್ಕುಗಳ ಆಚೆಗಿನ ಸಾಂವಿಧಾನಿಕತೆ: ವ್ಯವಸ್ಥೆ ಯಾಕೆ ಮುಖ್ಯವಾಗುತ್ತದೆ' ವಿಷಯದ ಕುರಿತು ನ್ಯಾ. ನಾಗರತ್ನ ಅವರು ಇತ್ತೀಚೆಗೆ ಉಪನ್ಯಾಸ ನೀಡಿದ್ದರು.

'ಚುನಾವಣೆಯ ಸಮಗ್ರತೆಯನ್ನು ಕಾಪಾಡುವುದು ಚುನಾವಣಾ ಆಯೋಗದ ಪ್ರಾಥಮಿಕ ಕೆಲಸ. ಚುನಾವಣೆ ನಡೆಸುವ ಸಂಸ್ಥೆಯೊಂದು ಚುನಾವಣಾ ಕಣದಲ್ಲಿರುವವರ ಮೇಲೆಯೇ ಅವಲಂಬಿತವಾದರೆ, ಇಡೀ ಚುನಾವಣಾ ಪ್ರಕ್ರಿಯೆಯು ತಟಸ್ಥ ಧೋರಣೆಯೊಂದಿಗೆ ಇರುವುದಿಲ್ಲ' ಎಂದರು.

'ರಾಜಕೀಯ ಪ್ರಕ್ರಿಯೆಯು ಕೆಲವು ವಿಚಾರಗಳಲ್ಲಿ ತಟಸ್ಥವಾಗಿರುವುದಿಲ್ಲ. ಇಂಥ ವಿಚಾರಗಳಲ್ಲಿ ತಟಸ್ಥ ನಿಲುವು ಇರಬೇಕು ಜೊತೆಗೆ ವಿಷಯ ತಜ್ಞತೆಯೂ ಬೇಕು ಎಂಬುದಕ್ಕಾಗಿ ಚುನಾವಣಾ ಆಯೋಗ, ಸಿಎಜಿ, ಹಣಕಾಸು ಆಯೋಗದಂಥ ಸ್ವಾಯತ್ತ ಸಂಸ್ಥೆಗಳನ್ನು ರೂಪಿಸಲಾಗಿದೆ. ಇವುಗಳು ರಾಜಕೀಯ ಪ್ರಕ್ರಿಯೆಯಿಂದ ದೂರ ಇರುವುದು ಬಹಳ ಮುಖ್ಯವಾಗುತ್ತವೆ' ಎಂದರು.

'ದೇಶವೊಂದರ ಸ್ವಾಯತ್ತ ಸಂಸ್ಥೆಗಳು ನಿಯಂತ್ರಿಸುವ ಕಾರ್ಯ ಮೊಟಕುಗೊಳಿಸಿದಾಗ ಸಾಂವಿಧಾನಿಕ ವ್ಯವಸ್ಥೆ ಕುಸಿಯುತ್ತದೆ. ಹೀಗೆ ಕುಸಿತ ಕಂಡ ವ್ಯವಸ್ಥೆಯೊಳಗೆ ಚುನಾವಣೆಗಳು ನಡೆಯಬಹುದು, ನ್ಯಾಯಾಲಯಗಳು ಕೆಲಸ ಮಾಡಬಹುದು, ಸಂಸತ್ತು ಕಾನೂನು ರೂಪಿಸಬಹುದು. ಆಗ ಪ್ರಭುತ್ವಕ್ಕೆ ನಿಯಂತ್ರಣವೇ ಇರುವುದಿಲ್ಲ. ಯಾಕೆಂದರೆ, ದೇಶದಲ್ಲಿ ಸಂವಿಧಾನದತ್ತ ವ್ಯವಸ್ಥೆಯೇ ಇರುವುದಿಲ್ಲವಲ್ಲ' ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅಭಿಪ್ರಾಯಪಟ್ಟರು.



ಮಸೂದೆ ಜಾರಿಗೆ ಮುನ್ನ ಜನಗಣತಿ ನಡೆಸಿ: ಅಖಿಲೇಶ್

ಲಖನೌ: 'ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿಯನ್ನು ಯಾವ ಆಧಾರದಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಪ್ರಶ್ನಿಸಿರುವ ಸಮಾಜವಾದಿ ಪಕ್ಷದ (ಎಸ್‌ಪಿ) ಅಖಿಲೇಶ್ ಯಾದವ್, ಇದಕ್ಕಾಗಿ ಜನಗಣತಿ ನಡೆಸಬೇಕಿರುವುದು ಅತ್ಯಗತ್ಯ' ಎಂದು ಪ್ರತಿಪಾದಿಸಿದ್ದಾರೆ.

'ಯಾವುದೇ ನೀತಿಯನ್ನು ಜಾರಿಗೊಳಿಸುವ ಮುನ್ನ ನಿಖರವಾದ ಅಂಕಿಅಂಶಗಳು ಇರಬೇಕು. 2011ರ ಜನಗಣತಿ ಆಧಾರವಾಗಿಟ್ಟುಕೊಂಡು ಮೀಸಲಾತಿ ಜಾರಿಗೊಳಿಸಿದರೆ ಅದು ದೋಷಪೂರ್ಣವಾಗಿರುತ್ತದೆ' ಎಂದು ಅಖಿಲೇಶ್ 'ಎಕ್ಸ್' ಪೋಸ್ಟ್‌ನಲ್ಲಿ ಹೇಳಿದ್ದಾರೆ.

'ವಾಸ್ತವವಾಗಿ ಮಹಿಳಾ ಮೀಸಲಾತಿ ಮಸೂದೆಯ 'ಆಧಾರ'ವೇ ದೋಷಪೂರ್ಣವಾಗಿದೆ. ಇದನ್ನು ಸರಿಪಡಿಸಿಕೊಳ್ಳಬೇಕು. 2011ರ ಜನಗಣತಿ ಅಂಕಿ ಅಂಶಗಳ ಆಧಾರದಲ್ಲಿ ಮೀಸಲಾತಿ ಕಲ್ಪಿಸುವುದು ಸರಿಯಲ್ಲ. ಹೊಸ ಗಣತಿ ನಡೆಸಿದ ನಂತರವೇ ಮಸೂದೆಗೆ ತಿದ್ದುಪಡಿ ತರಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮಹಿಳೆಯರಿಗೆ ಮೀಸಲಾತಿ ಕಲ್ಪಿಸಬೇಕು ಎಂಬ ಯೋಚನೆ ಬಿಜೆಪಿಗೆ ಇಲ್ಲ. ಬಿಜೆಪಿ ಮಹಿಳೆಯರನ್ನು ಮೋಸ ಮಾಡುತ್ತಿದೆ' ಎಂದು ಅಖಿಲೇಶ್ ಹೇಳಿದರು.

'ಹಣ, ಮದ್ಯ, ತೋಳ್ಬಲ ನಡೆಯಲ್ಲ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಹಣ, ಮದ್ಯ, ತೋಳ್ಬಲದಿಂದ ಚುನಾವಣೆ ಗೆಲ್ಲುತ್ತೇವೆ ಎಂದು ಕಾಂಗ್ರೆಸ್‌ನವರು ಅಂದುಕೊಂಡಿದ್ದಾರೆ. ಜನರ ನಿರ್ಧಾರದ ಮುಂದೆ ಅವುಗಳು ಪ್ರಯೋಜನಕ್ಕೆ ಬರುವುದಿಲ್ಲ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಇಲ್ಲಿ ಅಭಿಪ್ರಾಯಪಟ್ಟರು.


ಬಿ.ಎಸ್. ಯಡಿಯೂರಪ್ಪ

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನವರು ಸೂಟ್‌ಕೇಸ್‌ನಲ್ಲಿ ಹಣ ತಂದಿದ್ದಾರೆ. ವಾಮಮಾರ್ಗದಿಂದ ಚುನಾವಣೆ ಗೆಲ್ಲಲು ಮುಂದಾಗಿದ್ದಾರೆ' ಎಂದು ಆರೋಪಿಸಿದರು.

'ಈ ಉಪ ಚುನಾವಣೆಯಲ್ಲಿ ಸೋಲು ನಿಶ್ಚಿತ ಎಂಬುದು ಮುಖ್ಯಮಂತ್ರಿ ಅವರಿಗೆ ಮನವರಿಕೆ ಆಗಿದೆ. ಅದಕ್ಕೆ ಠಿಕಾಣಿ ಹೂಡಿದ್ದಾರೆ' ಎಂದು ವ್ಯಾಖ್ಯಾನಿಸಿದರು.

ಮುಸ್ಲಿಮರ ಅಸಮಾಧಾನ ತಣಿಸಲು ಪ್ರಯತ್ನ

ಮುನಿಸು ಮರೆತು ಒಗ್ಗಟ್ಟು ಪ್ರದರ್ಶಿಸಿದ ಸಚಿವರಾದ ಮಲ್ಲಿಕಾರ್ಜುನ್–ಜಮೀರ್ ಅಹ್ಮದ್ ಖಾನ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಟಿಕೆಟ್ ಹಂಚಿಕೆ ಕುರಿತ ವೈಮನಸು ಮರೆತು ಸಚಿವರಾದ ಜಮೀರ್ ಅಹ್ಮದ್ ಖಾನ್ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ ಉಪ ಚುನಾವಣಾ ಕಣದಲ್ಲಿ ಒಗ್ಗಟ್ಟು ಪ್ರದರ್ಶಿಸಿದರು. ಮುಸ್ಲಿಂ ಸಮುದಾಯದಲ್ಲಿ ಮೂಡಿದ ಅಸಮಾಧಾನ ತಣಿಸುವ ಪ್ರಯತ್ನ ಮಾಡಿದರು.

ಕೇರಳದಿಂದ ನೇರವಾಗಿ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಮನೆಗೆ ಬಂದ ಜಮೀರ್, ಜಂಟಿ ಪತ್ರಿಕಾಗೋಷ್ಠಿ ನಡೆಸಿದರು. 'ಮುನಿಸು ಮರೆತಿದ್ದೇವೆ. ಪಕ್ಷದ ಹಿತದೃಷ್ಟಿಯಿಂದ ಒಗ್ಗೂಡಿ ಕೆಲಸ ಮಾಡಲಿದ್ದೇವೆ' ಎಂದರು.

'ಕೇರಳ ಚುನಾವಣೆಯ ಸ್ಟಾರ್ ಪ್ರಚಾರಕನಾಗಿ ಪಕ್ಷ ನಿಯೋಜಿಸಿ 10 ಜಿಲ್ಲೆಗಳ ಉಸ್ತುವಾರಿ ನೀಡಿತ್ತು. ಮಾರ್ಚ್ 26ರಿಂದ ಕೇರಳ ಅಲ್ಲಿ ಪ್ರಚಾರದಲ್ಲಿ ತೊಡಗಿದ್ದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆಯ ಮೇರೆಗೆ ಈಗ ಸಮರ್ಥ್ ಪರ ಪ್ರಚಾರಕ್ಕೆ ಬಂದಿದ್ದೇನೆ' ಎಂದು ಜಮೀರ್ ಮಾಹಿತಿ ನೀಡಿದರು.

'ಹಿಂದೆ ಟಿಕೆಟ್‌ಗಾಗಿ ಮುಸ್ಲಿಂ ಸಮುದಾಯ ಬೇಡಿಕೆ ಇಟ್ಟಾಗ ಹೈಕಮಾಂಡ್ ಗಮನಕ್ಕೆ ತರುವುದಾಗಿ ತಿಳಿಸಿದ್ದೆ. ಟಿಕೆಟ್ ಕೈತಪ್ಪಿದ್ದರಿಂದ ಕೆಲವರಿಗೆ ಬೇಸರ ಆಗಿರುವುದು ಸತ್ಯ. ಎಲ್ಲವನ್ನೂ ಸರಿಪಡಿಸುತ್ತೇವೆ. ನಮ್ಮದು ಕಾಂಗ್ರೆಸ್ ಕುಟುಂಬ. ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರ ಮನವೊಲಿಸುತ್ತೇವೆ' ಎಂದರು.


ದಾವಣಗೆರೆಯಲ್ಲಿ ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಚಿವರಾದ ಜಮೀರ್ ಅಹ್ಮದ್ ಖಾನ್ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಒಗ್ಗಟ್ಟು ಪ್ರದರ್ಶಿಸಿದರು. ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬಹಿರಂಗ ಪ್ರಚಾರ ಮಾಡದ ಜಮೀರ್

ಸಚಿವ ಜಮೀರ್ ಅಹ್ಮದ್ ಖಾನ್ ಅವರು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮನೆಯಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಹಾಗೂ ಸಂಸದೆ ಡಾ.ಪ್ರಭಾ ಅವರ ಜೊತೆ ಕೆಲ ಹೊತ್ತು ಚರ್ಚಿಸಿದರು.

ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ಸಭೆ ನಡೆಸಿ, ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸುವಂತೆ ಸೂಚಿಸಿದರು. ಕ್ಷೇತ್ರದಲ್ಲಿ ಬಹಿರಂಗ ಪ್ರಚಾರ ಮಾಡದೇ ಬಾಗಲಕೋಟೆಗೆ ತೆರಳಿದರು.

> **ಜಮೀರ್ ಅಹ್ಮದ್ ಮತ್ತು ನಾನು ಸ್ನೇಹಿತರು. ಏಕವಚನದಲ್ಲೇ ಮಾತನಾಡಿಕೊಳ್ಳುತ್ತೇವೆ. ಇಬ್ಬರ ನಡುವೆ ಯಾವುದೇ ಗೊಂದಲ ಇಲ್ಲ**
> **ಎಸ್.ಎಸ್.ಮಲ್ಲಿಕಾರ್ಜುನ್,** ಗಣಿ ಮತ್ತು ಭೂವಿಜ್ಞಾನ ಸಚಿವ

'2023ರ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಎಸ್‌ಡಿಪಿಐ, ಜೆಡಿಎಸ್, ಪಕ್ಷೇತರರು ಸೇರಿ 13 ಮುಸ್ಲಿಂ ಅಭ್ಯರ್ಥಿಗಳಿದ್ದರು. ಅವರ ಒಟ್ಟು ಮತಗಳು 3,000 ಮೀರಿಲ್ಲ. ಇದು ಕಾಂಗ್ರೆಸ್ ಪಕ್ಷದ ಭದ್ರಕೋಟೆ. ಸಮರ್ಥ್ ಶಾಮನೂರು ಅವರ ಗೆಲುವು ಖಚಿತ' ಎಂದು ಹೇಳಿದರು.

ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಜಮೀರ್ ಅಹಮ್ಮದ್ ಖಾನ್ ಅವರು, 'ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ವಿಚಾರದಲ್ಲಿ ನನಗೆ ಯಾವುದೇ ಅಸಮಾಧಾನವಿಲ್ಲ. ಮುನಿಸು ಇದ್ದಿದ್ದರೆ ಪ್ರಚಾರ ಕಾರ್ಯಕ್ಕೆ ತೆರಳುತ್ತಿರಲಿಲ್ಲ' ಎಂದು ಹೇಳಿದರು.

'ಕೈ'ನಿಂದ ಒಗ್ಗೂಡಿಸುವ ಕೆಲಸ'

ಬಿಸ್ವಂತ್ ಚರೈಲಿ (ಪಿಟಿಐ): ಗಾಯಕ ಜುಬೀನ್ ಗರ್ಗ್ ಅವರಂತೆಯೇ ಕಾಂಗ್ರೆಸ್ ಕೂಡ ಅಸ್ಸಾಂ ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದೆ ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಭಾನುವಾರ ಹೇಳಿದರು.

ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಭಾರತದ 'ಅತ್ಯಂತ ಭ್ರಷ್ಟ ಮುಖ್ಯಮಂತ್ರಿ'. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಜುಬೀನ್ ಗರ್ಗ್ ಅವರು ತಮ್ಮ ಇಡೀ ಜೀವನವನ್ನು ಅಸ್ಸಾಂ ಜನರ ಏಕತೆಗಾಗಿ ಮೀಸಲಿಟ್ಟಿದ್ದರು. ಯಾರೊಂದಿಗೂ ಅವರು ಅನುಚಿತವಾಗಿ ವರ್ತಿಸುತ್ತಿರಲ್ಲ. ಕಾಂಗ್ರೆಸ್ ಸಿದ್ಧಾಂತವೂ ಅದೇ ರೀತಿಯಾಗಿದೆ. ದ್ವೇಷದ ವಿರುದ್ಧ ಪ್ರೀತಿಯನ್ನು ಪಸರಿಸುತ್ತದೆ' ಎಂದು ಪ್ರತಿಪಾದಿಸಿದರು.

'ಶರ್ಮಾ ದಂಪತಿ ದುಬೈನಲ್ಲಿ ಆಸ್ತಿ'

ನವದೆಹಲಿ (ಪಿಟಿಐ): 'ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ಪತ್ನಿ ರಿಂಕಿ ಶರ್ಮಾ ಮೂರು ಪಾಸ್‌ಪೋರ್ಟ್ ಹೊಂದಿದ್ದಾರೆ. ವಿದೇಶದಲ್ಲಿರುವ ತಮ್ಮ ಆಸ್ತಿಗಳನ್ನು ಘೋಷಿಸಿಲ್ಲ' ಎಂದು ಕಾಂಗ್ರೆಸ್ ಆರೋಪಿಸಿದೆ.

'ಆರೋಪವು ದುರುದ್ದೇಶಪೂರಿತ ಹಾಗೂ ಕಪೋಲಕಲ್ಪಿತವಾಗಿದ್ದು, 48 ಗಂಟೆಗಳ ಒಳಗಾಗಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹಿಮಂತ ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ದಾಖಲೆಗಳನ್ನು ಪ್ರದರ್ಶಿಸಿದ ಕಾಂಗ್ರೆಸ್‌ನ ಮಾಧ್ಯಮ ಹಾಗೂ ಸಂವಹನ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ಹಿಮಂತ ಚುನಾವಣಾ ನಾಮಪತ್ರ ಸಲ್ಲಿಕೆ ವೇಳೆ ಈ ಮಾಹಿತಿಯನ್ನು ಮುಚ್ಚಿಟ್ಟಿದ್ದು, ಅವರ ನಾಮಪತ್ರವನ್ನು ಚುನಾವಣಾ ಆಯೋಗವು ಕೂಡಲೇ ರದ್ದುಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ಇದಕ್ಕೆ ಉತ್ತರಿಸಿರುವ ಹಿಮಂತ ಶರ್ಮಾ, 'ಅಸ್ಸಾಂ ಐತಿಹಾಸಿಕ ಜನಾದೇಶದತ್ತ ಸಾಗುತ್ತಿದೆ. ಇಂತಹ ಆಧಾರರಹಿತ ಆರೋಪಗಳು ಕಾಂಗ್ರೆಸ್ ಕುಸಿಯುತ್ತಿರುವುದಕ್ಕೆ ಸಾಕ್ಷಿಯಾಗಿವೆ. ರಾಜ್ಯದ ಜನರನ್ನು ದಾರಿ ತಪ್ಪಿಸಲು ಡಿಜಿಟಲ್ ತಂತ್ರಜ್ಞಾನ ಬಳಸಿಕೊಂಡು ದಾಖಲೆಗಳನ್ನು ಸೃಷ್ಟಿಸಲಾಗಿದೆ. ಮಾನಹಾನಿಯಾಗುವಂತೆ ಹೇಳಿಕೆ ನೀಡಿದ ಖೇರಾ ವಿರುದ್ಧ ನಾನು ಹಾಗೂ ಪತ್ನಿ ಸೇರಿ 48 ಗಂಟೆಗಳ ಒಳಗಾಗಿ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ' ಎಂದಿದ್ದಾರೆ.

ಬಿಜೆಪಿ ವಿರುದ್ಧ ಕಿಟ್ ವಿತರಣೆ ಆರೋಪ: ಘರ್ಷಣೆ

ತ್ರಿಶ್ಶೂರ್ (ಪಿಟಿಐ): ಮಣಲೂರು ಕ್ಷೇತ್ರದಲ್ಲಿ ಬಿಜೆಪಿ ವಿರುದ್ಧ ಮತದಾರರಿಗೆ ಆಹಾರ ಕಿಟ್ ವಿತರಣೆ ಆರೋಪಗಳು ಭಾನುವಾರ ವ್ಯಕ್ತವಾಗಿದ್ದು ಗದ್ದಲಕ್ಕೆ ಕಾರಣವಾಯಿತು. ಈ ವೇಳೆ ಕೇಸರಿ ಪಕ್ಷ, ಯುಡಿಎಫ್ ಮತ್ತು ಎಲ್‌ಡಿಎಫ್ ಕಾರ್ಯಕರ್ತರ ನಡುವೆ ಘರ್ಷಣೆ ನಡೆಯಿತು.

ಮಣಲೂರಿನ ವಡನಪ್ಪಳ್ಳಿಯಲ್ಲಿನ ಗೋದಾಮಿನಲ್ಲಿ ಕಿಟ್‌ಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂಬ ಮಾಹಿತಿ ಬಂದ ಕೂಡಲೇ ಎಲ್‌ಡಿಎಫ್ ಮತ್ತು ಯುಡಿಎಫ್ ಕೂಟಗಳ ಕಾರ್ಯಕರ್ತರು ಜಮಾಯಿಸಿ ಮುತ್ತಿಗೆ ಹಾಕಿದರು. ಅಲ್ಲಿದ್ದ ಬಿಜೆಪಿ ನಾಯಕ ಮತ್ತು ನಟ ದೇವನ್ ಅವರನ್ನು ಸ್ಥಳದಿಂದ ಹೋಗದಂತೆ ತಡೆದರು.

ಗೋದಾಮಿನ ಬಳಿ ಬಂದ ಯುಡಿಎಫ್ ಅಭ್ಯರ್ಥಿ ಟಿ.ಎನ್. ಪ್ರತಾಪನ್ ಅವರು ಬಿಜೆಪಿ ವಿರುದ್ಧ ಕಿಡಿಕಾರಿದರು. 'ಬಿಜೆಪಿಯು ಮತದಾರರಿಗೆ ಹಂಚಲು 4,000 ಕಿಟ್‌ಗಳನ್ನು ಸಿದ್ಧಪಡಿಸಿದೆ ಮತ್ತು ಇನ್ನೂ 10,000 ಕಿಟ್‌ಗಳನ್ನು ತಯಾರಿಸಲು ಅಗತ್ಯವಾದ ವಸ್ತುಗಳನ್ನು ಗೋದಾಮಿನಲ್ಲಿ ಸಂಗ್ರಹಿಸಿದೆ' ಎಂದು ಅವರು ದೂರಿದರು.

ಗೋದಾಮಿನಲ್ಲಿರುವ ಬಿಜೆಪಿ ನಾಯಕರನ್ನು ಬಂಧಿಸುವಂತೆ ಯುಡಿಎಫ್ ಕಾರ್ಯಕರ್ತರು ಆಗ್ರಹಿಸಿದರು. ಎಲ್‌ಡಿಎಫ್ ಕಾರ್ಯಕರ್ತರು ಇದೇ ರೀತಿ ಬೇಡಿಕೆಗಳನ್ನು ಮುಂದಿಟ್ಟರು. ತಮ್ಮ ನಾಯಕ ಗೋದಾಮಿನಲ್ಲಿ ಸಿಲುಕಿರುವುದನ್ನು ತಿಳಿದು ಸ್ಥಳಕ್ಕೆ ಬಂದ ಬಿಜೆಪಿ ಕಾರ್ಯಕರ್ತರು ಯುಡಿಎಫ್ ಮತ್ತು ಎಲ್‌ಡಿಎಫ್ ಕಾರ್ಯಕರ್ತರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು.

ಪರಿಸ್ಥಿತಿ ಕೈಮೀರದಂತೆ ಪೊಲೀಸರು ಎಚ್ಚರವಹಿಸಿದರು. ಚುನಾವಣಾ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿದರು.

ಪಿಣರಾಯಿ ವಿರುದ್ಧ ಅಮಿತ್ ಶಾ ಆರೋಪ

ಕೊಚ್ಚಿ (ಪಿಟಿಐ): ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇಂದ್ರದ ಅನುದಾನಿತ ಯೋಜನೆಗಳ ಹೆಸರನ್ನು ಬದಲಿಸುವುದರಲ್ಲಿ ತೊಡಗಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಆರೋಪಿಸಿದರು.

ಕುನ್ನತ್ತುನಾಡ್ ಕ್ಷೇತ್ರದಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಅವರು ಮಾತನಾಡಿದರು.


'ದೇಶದಲ್ಲಿ ಎಲ್ಲರಿಗೂ ನ್ಯಾಯ ಒದಗಿಸಬೇಕು ಮತ್ತು ಯಾರನ್ನೂ ತುಷ್ಟೀಕರಿಸಬಾರದು ಎಂಬುದು ಬಿಜೆಪಿ ನೇತೃತ್ವದ ಎನ್‌ಡಿಎ ನಿಲುವಾಗಿದೆ' ಎಂದು ಅವರು ಹೇಳಿದರು.

ಈ ಚುನಾವಣೆ ಗುರಿ ಸರ್ಕಾರವನ್ನು ಬದಲಿಸುವುದಷ್ಟೇ ಅಲ್ಲ, ರಾಜ್ಯದ ಭವಿಷ್ಯವನ್ನೂ ಸುಧಾರಿಸುವುದಾಗಿದೆ ಎಂದ ಅವರು, ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಚಿಸುವ ಸಮಯ ಬಂದಿದೆ ಎಂದು ಅಮಿತ್ ಶಾ ತಿಳಿಸಿದರು.


ಕೊಯಿಕ್ಕೋಡ್‌ನಲ್ಲಿ ಭಾನುವಾರ ನಡೆದ ರೋಡ್ ಶೋನಲ್ಲಿ ಗೃಹ ಸಚಿವ ಅಮಿತ್ ಶಾ ಅವರು ಭಾಗವಹಿಸಿದ್ದರು –ಪಿಟಿಐ ಚಿತ್ರ

'ಟಿಎಂಸಿ ಜಂಗಲ್‌ರಾಜ್ ಆಡಳಿತಕ್ಕೆ ನಿದರ್ಶನ'

ಕೋಲ್ಕತ್ತ (ಪಿಟಿಐ): ಮಾಲ್ಡಾದಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ಗಂಪೊಂದು ಕೂಡಿಹಾಕಿದ್ದ ಘಟನೆಗೆ ಸಂಬಂಧಿಸಿದಂತೆ ಟಿಎಂಸಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಇದು ಆಡಳಿತ ಪಕ್ಷದ ಮಹಾ ಜಂಗಲ್‌ರಾಜ್‌ಗೆ ನಿದರ್ಶನ ಎಂದು ಕಿಡಿಕಾರಿದರು.


ನರೇಂದ್ರ ಮೋದಿ

ಕೂಚ್ ಬಿಹಾರದಲ್ಲಿ ಭಾನುವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಪಶ್ಚಿಮ ಬಂಗಾಳದಲ್ಲಿ ಆಡಳಿತ ಪಕ್ಷವು ಕಾನೂನು ಮತ್ತು ಸುವ್ಯವಸ್ಥೆ ಅಂತ್ಯಕ್ರಿಯೆಯ ಮೆರವಣಿಗೆಗೆ ಉದ್ದೇಶಿಸಿದೆ' ಎಂದು ಆರೋಪಿಸಿದರು.

'ಮಾಲ್ಡಾದಲ್ಲಿ ಏನಾಯಿತು ಎಂಬುದನ್ನು ಇಡೀ ದೇಶ ನೋಡಿದೆ. ನ್ಯಾಯಾಂಗದ ಅಧಿಕಾರಿಗಳಿಗೆ ಸುರಕ್ಷತೆ ಇಲ್ಲದ ಟಿಎಂಸಿ ಆಡಳಿತದಲ್ಲಿ ಸಾಮಾನ್ಯ ಜನರು ಎಷ್ಟು ಸುರಕ್ಷಿತ' ಎಂದು ಅವರು ಪ್ರಶ್ನಿಸಿದರು. ಟಿಎಂಸಿ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳ ಮಹತ್ವವನ್ನೂ ಕಡೆಗಣಿಸಿದೆ ಎಂದು ದೂರಿದರು.

'ತುಷ್ಟೀಕರಣ ರಾಜಕೀಯದಲ್ಲಿ ತೊಡಗಿರುವ ಟಿಎಂಸಿ ಒಳನುಸುಳುಕೋರರಿಗೆ ನೆರವು ನೀಡುತ್ತಿದೆ. ಈ ಮೂಲಕ ಅದು ಬಂಗಾಳದ ಭವಿಷ್ಯ ಮತ್ತು ಅಸ್ಮಿತೆಯನ್ನು ಅಪಾಯಕ್ಕೆ ಸಿಲುಕಿಸಿದೆ' ಎಂದು ಆರೋಪಿಸಿದರು.

₹650 ಕೋಟಿ ಅಕ್ರಮ ಹಣ, ಮದ್ಯ ವಶ

ನವದೆಹಲಿ (ಪಿಟಿಐ): ಚುನಾವಣೆ ನಿಗದಿಯಾಗಿರುವ ನಾಲ್ಕು ರಾಜ್ಯಗಳು ಮತ್ತು ಪುದುಚೇರಿಯಲ್ಲಿ ಮತದಾರರಿಗೆ ಹಂಚಲು ಇಟ್ಟಿದ್ದ ಸುಮಾರು ₹650 ಕೋಟಿ ಮೌಲ್ಯದ ನಗದು, ಮಾದಕ ವಸ್ತು ಮತ್ತು ಮದ್ಯವನ್ನು ವಶಕ್ಕೆ ಪಡೆಯಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ದೂರುಗಳಿಗೆ ಪ್ರತಿಕ್ರಿಯಿಸಲು 5,173 ಫ್ಲೈಯಿಂಗ್ ಸ್ಕ್ವಾಡ್ ಹಾಗೂ ಸುಮಾರು 5,200 ಕಣ್ಗಾವಲು ತಂಡಗಳನ್ನು ನಿಯೋಜಿಸಲಾಗಿದೆ ಎಂದು ಆಯೋಗ ತಿಳಿಸಿದೆ.

ಏನೇನು ವಶಕ್ಕೆ? (₹ಕೋಟಿಗಳಲ್ಲಿ)

ರಾಜ್ಯ	ನಗದು	ಮಾದಕ ವಸ್ತು ಮೌಲ್ಯ	ಬೆಲೆಬಾಳುವ ವಸ್ತುಗಳ ಮೌಲ್ಯ	ಉಚಿತ ಕೊಡುಗೆಯ ಮೌಲ್ಯ	ಮದ್ಯದ ಮೌಲ್ಯ	ಒಟ್ಟು
ಪಶ್ಚಿಮ ಬಂಗಾಳ	11	65	39	150	55	319
ತಮಿಳುನಾಡು	30	67	8	63	2	170
ಅಸ್ಸಾಂ	4	56	4	13	20	97
ಕೇರಳ	8	41	1	5	2	58
ಪುದುಚೆರಿ	0.20	0	6	0.01	0.30	6.5
ಒಟ್ಟು	53.2	230	58	231	79.3	651.51

ಡಿಎಂಕೆ ಪ್ರಣಾಳಿಕೆಯನ್ನು ಸೂಪರ್ ಸ್ಟಾರ್ ಎಂದು ಬಿಂಬಿಸಿದ ಮುಖ್ಯಮಂತ್ರಿ ಸ್ಟಾಲಿನ್

'ತಮಿಳುನಾಡು– ದೆಹಲಿ ತಂಡಗಳ ನಡುವಿನ ಯುದ್ಧ'

ವಿರುಧುನಗರ (ತಮಿಳುನಾಡಿನ) (ಪಿಟಿಐ): ರಾಜ್ಯ ವಿಧಾನಸಭಾ ಚುನಾವಣೆಯು 'ತಮಿಳುನಾಡು ತಂಡ' ಮತ್ತು 'ದೆಹಲಿ ತಂಡ'ಗಳ ನಡುವಿನ ಯುದ್ಧ ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಬಣ್ಣಿಸಿದರು.


ಎಂ.ಕೆ.ಸ್ಟಾಲಿನ್

ಜಾತ್ಯತೀತ ಪ್ರಗತಿಶೀಲ ಒಕ್ಕೂಟದ (ಎಸ್‌ಪಿಎ) ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಅವರು ಭಾನುವಾರ ಮಾತನಾಡಿದ ಅವರು, 'ಡಿಎಂಕೆ ಪ್ರಣಾಳಿಕೆಯನ್ನು 2026ರ ಚುನಾವಣೆಯ ಸೂಪರ್‌ಸ್ಟಾರ್' ಎಂದರು

ಪಳನಿಸ್ವಾಮಿ ವಿರುದ್ಧ ಕಿಡಿ: 'ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ಕೀಳುಮಟ್ಟದ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಅವರು ಸುಳ್ಳುಗಾರ ಮತ್ತು ದ್ರೋಹಿ' ಎಂದು ಸ್ಟಾಲಿನ್ ಕಿಡಿಕಾರಿದರು.

'ಪಳನಿಸ್ವಾಮಿ ಅವರು ಜೆ. ಜಯಲಲಿತಾ ಅವರಿಂದ ಹಿಡಿದು ವಿ.ಕೆ.ಶಶಿಕಲಾ ಮತ್ತು ಒ. ಪನ್ನೀರ್‌ಸೆಲ್ವಂ ಅವರಿಗೆ ಹೇಗೆಲ್ಲ ದ್ರೋಹ ಬಗೆದಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ' ಎಂದರು.

ದ್ರಾವಿಡ ಮಾದರಿ ಬೆಂಬಲಿಸಿ: ತಮಿಳುನಾಡಿನ ಅಭಿವೃದ್ಧಿಯನ್ನು ತಡೆಯುವುದು ಎನ್‌ಡಿಎ ಮೈತ್ರಿಕೂಟದ ಪ್ರಾಥಮಿಕ ಗುರಿ. ದ್ರಾವಿಡ ಮಾದರಿ ಆಡಳಿತದ ಮುಂದುವರಿಕೆಯನ್ನು ಖಚಿತಪಡಿಸಿಕೊಳ್ಳಲು ಮತದಾರರ ಡಿಎಂಕೆ ನೇತೃತ್ವದ ಎಸ್‌ಪಿಎ ಮೈತ್ರಿಯನ್ನು ಬೆಂಬಲಿಸುವಂತೆ ಅವರು ಮನವಿ ಮಾಡಿದರು.

> **ಡಿಎಂಕೆ ನೇತೃತ್ವದ ಮೈತ್ರಿಕೂಟವು ಒತ್ತಡ ಮತ್ತು ಆರ್ಥಿಕ ಬಲದ ಮೂಲಕ ಸ್ಪರ್ಧೆಯನ್ನು ತೊಡೆದುಹಾಕಲು ಯತ್ನಿಸುತ್ತಿದೆ**
> **ಅಧವ್ ಅರ್ಜುನ,** ಟಿವಿಕೆ ಪ್ರಧಾನ ಕಾರ್ಯದರ್ಶಿ

ಎರಡು ಪ್ರಕರಣ ಬಾಕಿ: ವಿಜಯ್

ಚೆನ್ನೈ (ಪಿಟಿಐ): ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ವಿಜಯ್ ಅವರು ಚುನಾವಣಾ ಅಧಿಕಾರಿಗೆ ಹೊಸದಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಎರಡು ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ ಎಂದು ಘೋಷಿಸಿಕೊಂಡಿದ್ದಾರೆ.

ತಮಿಳುನಾಡಿನ ಪೆರಂಬೂರು ಮತ್ತು ತಿರುಚಿರಾಪಳ್ಳಿ ಕ್ಷೇತ್ರಗಳಿಂದ ಸ್ಪರ್ಧಿಸಲು ಅವರು ಈಗಾಗಲೇ ನಾಮಪತ್ರ ಸಲ್ಲಿಸಿದ್ದಾರೆ. ಮೊದಲಿಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಕ್ರಿಮಿನಲ್ ಪ್ರಕರಣಗಳ ಉಲ್ಲೇಖ ಇರಲಿಲ್ಲ. ಹೀಗಾಗಿ ಏಪ್ರಿಲ್ 4ರಂದು (ಶನಿವಾರ) ಹೊಸ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಚೆನ್ನೈ ಮತ್ತು ಮಧುರೈನಲ್ಲಿ ತನ್ನ ವಿರುದ್ಧ ದಾಖಲಾಗಿರುವ ಎರಡು ಎಫ್‌ಐಆರ್‌ಗಳ ಕುರಿತು ಹೊಸ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಮಂಜೇಶ್ವರ ಅಭ್ಯರ್ಥಿ ಪರ ಮುಖ್ಯಮಂತ್ರಿ ಮತಯಾಚನೆ

'ಮತ್ತೆ ಎಡರಂಗ ಬಂದರೆ ಕೇರಳ ದಿವಾಳಿ'

ಪ್ರಜಾವಾಣಿ ವಾರ್ತೆ

ಮಜೀರ್‌ಪಳ್ಳ (ಕಾಸರಗೋಡು ಜಿಲ್ಲೆ): 'ಪಿಣರಾಯಿ ವಿಜಯನ್ ನೇತೃತ್ವದ ಎಡರಂಗ ಸರ್ಕಾರದಲ್ಲಿ ಕೇರಳ ಆರ್ಥಿಕವಾಗಿ ಬೆಳೆಯಲಿಲ್ಲ. ಸಾಲಗಾರ ರಾಜ್ಯವಾಗಿ ಈಗ ದಿವಾಳಿಯತ್ತ ಸಾಗುತ್ತಿದೆ. ಎಡರಂಗ ಸರ್ಕಾರ ಮತ್ತೆ ಬಂದರೆ ಇನ್ನಷ್ಟು ಸಮಸ್ಯೆ ಆಗಲಿದೆ' ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೇರಳ ವಿಧಾನಸಭೆಯ ಮಂಜೇಶ್ವರ ಕ್ಷೇತ್ರದ ಐಕ್ಯರಂಗ ಅಭ್ಯರ್ಥಿ, ಮುಸ್ಲಿಂಗ್ ಲೀಗ್‌ನ ಎ.ಕೆ.ಎಂ.ಅಶ್ರಫ್ ಪರ ಭಾನುವಾರ ಸಂಜೆ ಮಜೀರ್‌ಪಳ್ಳ ಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

'ರಾಜ್ಯಗಳ ಸಾಲ ಜಿಡಿಪಿಯ ಶೇಕಡ 25ಕ್ಕಿಂತ ಕಡಿಮೆ ಇರಬೇಕು. ಆದರೆ ಕೇರಳದ ಸಾಲ ಈಗ ಜಿಡಿಪಿಯ ಶೇ 30ರಷ್ಟು ಆಗಿದೆ. ಇದು ರಾಜ್ಯವು ಆರ್ಥಿಕ ದಿವಾಳಿಯತ್ತ ಸಾಗುತ್ತಿರುವುದರ ಲಕ್ಷಣ' ಎಂದು ಹೇಳಿದರು.

'ಕಾಂಗ್ರೆಸ್ ಆಡಳಿತದ ಕರ್ನಾಟಕದಲ್ಲಿ ನಿರುದ್ಯೋಗ ಶೇ 2.5ರಷ್ಟು ಇದ್ದರೆ ಕೇರಳದಲ್ಲಿ ಅದರ ಶೇ 8ರಷ್ಟಿದೆ. ಹಣದುಬ್ಬರ ಕೇರಳದಲ್ಲಿ ಶೇ 8.5 ಇದೆ. ಕರ್ನಾಟಕದಲ್ಲಿ ಅದು ಶೇ 4. ಇಷ್ಟೆಲ್ಲ ಆಗುತ್ತಿದ್ದರೂ ಪಿಣರಾಯಿ ವಿಜಯನ್ ಏನು ಮಾಡ್ತಿದ್ದಾರೆ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಮತ್ತೊಮ್ಮೆ ಪಿಣರಾಯಿಗೆ ಓಟು ಕೊಡಬೇಕಾ'? ಎಂದು ಕೇಳಿದರು. ಸಭೆಯಿಂದ 'ಬೇಡ...' ಎಂಬ ಉದ್ಗಾರ ಕೇಳಿಬಂತು. 'ಉಮ್ಮನ್ ಚಾಂಡಿ ಮುಖ್ಯಮಂತ್ರಿ ಆಗಿದ್ದಾಗ ಕೇರಳ ಹೇಗಿತ್ತು, ಈಗ ಹೇಗಿದೆ ಎಂಬುದನ್ನು ಹೋಲಿಸಿ ನೋಡಬೇಕು' ಎಂದು ಸಿದ್ದರಾಮಯ್ಯ ಸಲಹೆ ಮಾಡಿದರು.

ಕರ್ನಾಟದ ಪಂಚ ಗ್ಯಾರಂಟಿಗಳನ್ನು ಪ್ರಸ್ತಾಪಿಸಿ, ಕೇರಳದಲ್ಲಿ ಐಕ್ಯರಂಗ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಗ್ಯಾರಂಟಿ ಘೋಷಿಸಿದ್ದು ಖುಷಿಯ ಸಂಗತಿ ಎಂದರು. 'ಬಿಜೆಪಿಗೆ ಇಲ್ಲಿ ಬೆಳೆಯಲು ಬಿಡದಿರುವುದು ಸ್ವಾಗತಾರ್ಹ. ಆ ಪಕ್ಷ ಸಂವಿಧಾನ ವಿರೋಧಿ, ಬಡವರ ವಿರೋಧಿ, ಅಲ್ಪಸಂಖ್ಯಾತರ ವಿರೋಧಿ' ಎಂದರು.

ಅಭ್ಯರ್ಥಿ ಎ.ಕೆ.ಎಂ.ಅಶ್ರಫ್, ಸಚಿವ ಎನ್.ಎಸ್. ಬೋಸರಾಜು, ಕೇರಳ ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್, ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಮುಖಂಡರಾದ ರಮಾನಾಥ ರೈ, ವಿನಯ ಕುಮಾರ್ ಸೊರಕೆ, ಕೆಪಿಸಿಸಿ ವಕ್ತಾರ ಸುಧೀರ್ ಕುಮಾರ್ ಮರೋಳಿ, ಕಾಂಗ್ರೆಸ್ ಕಾಸರಗೋಡು ಜಿಲ್ಲಾ ಘಟಕದ ಅಧ್ಯಕ್ಷ ಫೈಝುಲ್ ಕಾಸರಗೋಡು ಪಾಲ್ಗೊಂಡಿದ್ದರು.


ಮಂಜೇಶ್ವರ ಕ್ಷೇತ್ರದ ಮಜೀರ್‌ಪಳ್ಳ ಪೇಟೆಯಲ್ಲಿ ಭಾನುವಾರ ಏರ್ಪಡಿಸಿದ್ದ ಸಾರ್ವಜನಿಕ ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಂದಾಗ ಕಾರ್ಯಕರ್ತರು ಬರಮಾಡಿಕೊಂಡರು– ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

‘ಕೈಗಾರಿಕಾಭಿವೃದ್ಧಿಗೆ ಸರ್ಕಾರ ಅಡ್ಡಿ’

ಸಿದ್ದರಾಮಯ್ಯ ಸರ್ಕಾರ ಸ್ಪಂದಿಸುತ್ತಿಲ್ಲ: ಕೇಂದ್ರ ಸಚಿವ ಎಚ್‌ಡಿಕೆ ಕಿಡಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಕರ್ನಾಟಕದಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಕಾರ್ಖಾನೆಗಳ ಪುನಶ್ಚೇತನಕ್ಕೆ ಅಡ್ಡಿಪಡಿಸುವ ಮೂಲಕ ರಾಜ್ಯ ಸರ್ಕಾರ ರಾಜಕಾರಣ ಮಾಡುತ್ತಿದೆ’ ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಇಲ್ಲಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸಿದ್ಧವಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸ್ಪಂದಿಸುತ್ತಿಲ್ಲ’ ಎಂದು ಹೇಳಿದರು.

‘ಕುದುರೆಮುಖ ಕಬ್ಬಿಣ ಅದಿರು ಕಂಪನಿಗೆ (ಕೆಐಒಸಿಎಲ್) ಕೇಂದ್ರ ಸರ್ಕಾರ ₹1,700 ಕೋಟಿ ಬಂಡವಾಳ ಒದಗಿಸಿದೆ. ವಿನಾ ಕಾರಣ ರಾಜಕಾರಣ ಮಾಡಿ ಕಂಪನಿ ಮುಳುಗಿಸುವ ಹುನ್ನಾರಕ್ಕೆ ರಾಜ್ಯ ಸರ್ಕಾರ ಕೈಹಾಕಿದೆ. ಅರಣ್ಯ ಕಾಯ್ದೆಯನ್ನು ಉಲ್ಲೇಖಿಸಿ ಎಚ್‌ಎಂಟಿ ಪುನಶ್ಚೇತನಕ್ಕೆ ಅಡ್ಡಿಪಡಿಸುತ್ತಿದೆ’ ಎಂದು ದೂರಿದರು.

‘ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ ₹35,000 ಕೋಟಿ ಸಾಲವಿದ್ದ ಉಕ್ಕು ಕಾರ್ಖಾನೆಯನ್ನು ಪುನರಾರಂಭ ಮಾಡಿದ್ದೇವೆ. ₹1.25 ಲಕ್ಷ ಕೋಟಿ ಬಂಡವಾಳದ ಹೊಸ ಕಾರ್ಖಾನೆ ಸ್ಥಾಪನೆಯಾಗುತ್ತಿದೆ. ಕೇಂದ್ರದ ವಿರುದ್ಧ ಆರೋಪ ಬಿಟ್ಟು ಸೌಹಾರ್ದದಿಂದ ವ್ಯವಹರಿಸಿ. ಆಂಧ್ರ ಸರ್ಕಾರ ನೋಡಿ ಕಲಿಯಿರಿ’ ಎಂದು ಟೀಕಿಸಿದರು.

‘ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಅವರು ಗಾಲಿ ಕುರ್ಚಿಯಲ್ಲಿ ಅಧಿವೇಶನಕ್ಕೆ ತೆರಳಿ ಭದ್ರಾ ಮೇಲ್ದಂಡೆ ಹಾಗೂ ಎತ್ತಿನಹೊಳೆ ಯೋಜನೆಗೆ ಇದ್ದ ಅಡೆತಡೆ ನಿವಾರಿಸಿದ್ದಾರೆ. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದ ಸಮಸ್ಯೆಗಳಿಗೆ ಎಷ್ಟು ಬಾರಿ ಧ್ವನಿ ಎತ್ತಿದ್ದಾರೆ’ ಎಂದು ಪ್ರಶ್ನಿಸಿದರು.



ಸಿ.ಎಂ ಕುರ್ಚಿ ಅಲ್ಲಾಡುವಾಗ ಮಾತ್ರ ಸಿದ್ದರಾಮಯ್ಯ ಅವರಿಗೆ ‘ಅಹಿಂದ’ ಕನವರಿಕೆ ಶುರುವಾಗುತ್ತದೆ. ಕುರ್ಚಿ ಭದ್ರವಾಗಿದ್ದಾಗ ‘ಅಹಿಂದ’ ನೆನಪಾಗುವುದಿಲ್ಲ

ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

‘ಕುಮಾರಸ್ವಾಮಿ ಕಾಗದದ ಹುಲಿ’



‘ಕೈಗಾರಿಕಾಭಿವೃದ್ಧಿಗೆ ಇರುವ ತೊಡಕುಗಳ ಬಗೆಗೆ ಎಚ್‌.ಡಿ.ಕುಮಾರಸ್ವಾಮಿ ಅವರು ಸರ್ಕಾರದ ಗಮನಕ್ಕೆ ತಂದರೆ ಅನುಕೂಲ. ಇದನ್ನು ಬಿಟ್ಟು ಮಾಧ್ಯಮಗಳ ಎದುರು ಹೇಳಿ ಕಾಗದದ ಹುಲಿ ಆಗುತ್ತಿದ್ದಾರೆ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಟೀಕಿಸಿದರು.

‘ಕುಮಾರಸ್ವಾಮಿ ಅವರು ಆಟೊಮೊಬೈಲ್ ಕೈಗಾರಿಕೆಗೆ ಮಂಡ್ಯದಲ್ಲಿ 100 ಎಕರೆ ಭೂಮಿ ಕೇಳಿದ್ದರು. ಸರ್ಕಾರ 105 ಎಕರೆ ಭೂಮಿ ಕೊಟ್ಟಿದೆ. ಎಚ್‌ಎಂಟಿ ಪುನಶ್ಚೇತನ ಕುರಿತು ಎದುರಾಗಿರುವ ತೊಡಕುಗಳಲ್ಲಿ ರಾಜಕೀಯ ಹಿತಾಸಕ್ತಿ ಇಲ್ಲ. ಅರಣ್ಯ ವ್ಯಾಪ್ತಿಯಲ್ಲಿ ಕೈಗಾರಿಕೆ ಸ್ಥಾಪನೆಗೆ ತೊಡಕುಗಳು ಎದುರಾಗಿರಬಹುದು’ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಮಾದಿಗ ಸಮುದಾಯಕ್ಕೆ ಮೋಸ’

ಒಳಮೀಸಲು: ಗೃಹ ಸಚಿವ ಪರಮೇಶ್ವರ ಹೇಳಿಕೆಗೆ ಕಿಡಿ

ಪ್ರಜಾವಾಣಿ ವಾರ್ತೆ



ಎ. ನಾರಾಯಣ ಸ್ವಾಮಿ

ದಾವಣಗೆರೆ: ‘ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಒಳಮೀಸಲಾತಿ ವಿರೋಧಿ ಹೇಳಿಕೆ ನೀಡಿದ್ದು, ಆ ಮೂಲಕ ಮಾದಿಗ ಸಮುದಾಯದವರಿಗೆ ಮೋಸ ಮಾಡಿದ್ದಾರೆ’ ಎಂದು ಕೇಂದ್ರದ ಮಾಜಿ ಸಚಿವ ಎ.ನಾರಾಯಣ ಸ್ವಾಮಿ ಭಾನುವಾರ ಇಲ್ಲಿ ದೂರಿದರು.

‘ಪರಮೇಶ್ವರ ಅವರ ಹೇಳಿಕೆಯನ್ನು ಮುಖ್ಯಮಂತ್ರಿ ಖಂಡಿಸಿಲ್ಲ. ಆ ಮೂಲಕ ಪರೋಕ್ಷವಾಗಿ ಒಳಮೀಸಲಾತಿ ವಿರೋಧಿಸುತ್ತಿರುವವರನ್ನು ಬೆಂಬಲಿಸುತ್ತಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೊಳಿಸಲು ಬಿಡುವುದಿಲ್ಲ ಎಂದು ಹೇಳುವ ಮೂಲಕ ಪರಮೇಶ್ವರ ಅವರು ಸಮುದಾಯದವರ ದಿಕ್ಕು ತಪ್ಪಿಸುತ್ತಿದ್ದಾರೆ. ಒಳಮೀಸಲು ಕಲ್ಪಿಸುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದ ಕಾಂಗ್ರೆಸ್ ಈಗ ಆ ಕುರಿತು ಬದ್ಧತೆ ತೋರುತ್ತಿಲ್ಲ’ ಎಂದು ಟೀಕಿಸಿದರು.

‘ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟಿದ್ದ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರುಪಯೋಗಪಡಿಸಿಕೊಳ್ಳುತ್ತಿದೆ’ ಎಂದರು.

ಪರಮೇಶ್ವರ ಖಳನಾಯಕ: ಛಲವಾದಿ




ಛಲವಾದಿ ನಾರಾಯಣಸ್ವಾಮಿ

‘ಬಿಜೆಪಿ ದಲಿತರನ್ನು ಒಡೆಯಿತು ಎಂದು ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ. ಅವರು ಇಷ್ಟು ಚೆನ್ನಾಗಿ ಸುಳ್ಳು ಹೇಳುತ್ತಾರೆಂದು ಅಂದುಕೊಂಡಿರಲಿಲ್ಲ. ಅವರು ನಾಯಕ ಅಲ್ಲ ಖಳನಾಯಕ’ ಎಂದು ವಿಧಾನಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

‘ಒಳಮೀಸಲು ಗೊಂದಲವನ್ನು ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಅವರೇ ಬಗೆಹರಿಸಬಹುದಿತ್ತು. ಅವರಿಗೆ ಆ ಬದ್ಧತೆ ಇಲ್ಲ. ಪರಿಶಿಷ್ಟರು ಈಗ ಮೀಸಲಾತಿ ಸಿಗದೆ ಬೀದಿಯಲ್ಲಿ ನಿಂತಿರುವುದಕ್ಕೆ ಮಹದೇವಪ್ಪ ಕಾರಣ’ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಬಸವರಾಜ ಬೊಮ್ಮಾಯಿ ಅವರು ಎಸ್‌ಸಿ, ಎಸ್‌ಟಿಯವರ ಮೀಸಲಾತಿ ಹೆಚ್ಚಿಸಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ಇದನ್ನು ಕೋರ್ಟ್‌ಗೆ ಸರಿಯಾಗಿ ಮನವರಿಕೆ ಮಾಡಲಿಲ್ಲ’ ಎಂದರು.

‘ಗೌರವ ಡಾಕ್ಟರೇಟ್ ಸ್ವೀಕರಿಸಲ್ಲ’



ಬಸವರಾಜ ಬೊಮ್ಮಾಯಿ

ಹಾವೇರಿ: ‘ಹಾವೇರಿ ವಿಶ್ವವಿದ್ಯಾಲಯದಿಂದ ನನಗೆ ನೀಡಲು ತೀರ್ಮಾನಿಸಿರುವ ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲ’ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಬೊಮ್ಮಾಯಿ, ‘ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲ ಎಂದು ಕುಲಪತಿ ಅವರಿಗೆ ತಿಳಿಸಿದ್ದೇನೆ. ಸಾರ್ವಜನಿಕ ಸೇವೆಗೆ ಜನರ ಪ್ರೀತಿ ಮತ್ತು ವಿಶ್ವಾಸವೇ ದೊಡ್ಡ ಗೌರವ ಎಂದು ಭಾವಿಸುತ್ತೇನೆ’ ಎಂದು ಹೇಳಿದ್ದಾರೆ.

‘ಗೌರವ ಡಾಕ್ಟರೇಟ್ ಯಾವುದಾದರೂ ಕ್ಷೇತ್ರದಲ್ಲಿ ಮಹತ್ತರ ಸೇವೆ ಸಲ್ಲಿಸಿದವರಿಗೆ ನೀಡಬೇಕಾದ ಗೌರವ. ರಾಜಕಾರಣಿಗಳು, ಸ್ವಯಂ ಪ್ರೇರಣೆಯಿಂದ ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ನೀಡುವುದು ಸಮಂಜಸವಲ್ಲ’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ಲೋಕ ಅದಾಲತ್ ತೀರ್ಪು ಪ್ರಶ್ನಾತೀತವಲ್ಲ’

ಒಂದನೇ ಪುಟದಿಂದ...

‘ಅರ್ಜಿ ದಾಖಲಿಸಿದ ದಿನದಿಂದ ಅರ್ಜಿದಾರರಿಗೆ ಪಾವತಿಯಾಗುವ ದಿನದವರೆಗೆ ವಾರ್ಷಿಕ ಶೇ 6ರ ಬಡ್ಡಿಯಂತೆ ₹9,18,600 ಪರಿಹಾರ ನೀಡಬೇಕು’ ಎಂಬ ನ್ಯಾಯಮಂಡಳಿ ಆದೇಶವನ್ನು ಪುನರ್‌ಸ್ಥಾಪಿಸಿದೆ.

‘ಅರ್ಜಿದಾರರ ಪರ ಅವರ ವಕೀಲರು ಸಹಿ ಮಾಡಿದ್ದಾರೆ. ಒಂದು ವೇಳೆ ಈ ರಿಟ್ ಅರ್ಜಿಯನ್ನು ಮನ್ನಿಸಿದರೆ ಪಂಡೋರಾ ಪೆಟ್ಟಿಗೆಯ ಬಾಯಿ ತೆಗೆದಂತಾಗುತ್ತದೆ. ಅನಿರೀಕ್ಷಿತ ಸಮಸ್ಯೆಗಳ ಸೃಷ್ಟಿಗೆ ಕಾರಣವಾಗುತ್ತದೆ’ ಎಂದು ಪ್ರತಿವಾದಿ ಇನ್ಶೂರೆನ್ಸ್ ಕಂಪನಿ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, ‘ಅರ್ಜಿದಾರರು ಜಂಟಿ ಮೆಮೊಗೆ (ಜ್ಞಾಪನ ಪತ್ರ) ಸಹಿ ಹಾಕಿಲ್ಲ ಎಂಬುದು ಗಮನಾರ್ಹ ಅಂಶ’ ಎಂದು ಯೋಗ್ಯತೆಯ ಆಧಾರದಡಿ ಅರ್ಜಿದಾರರ ಮನವಿಯನ್ನು ಪರಿಗಣಿಸಿದೆ.

‘ಲೋಕ ಅದಾಲತ್‌ನಲ್ಲಿ ಉಭಯ ಪಕ್ಷಗಾರರು ಒಪ್ಪಂದದ ನಿಯಮಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದಾರೆ ಮತ್ತು ಅದಾಲತ್‌ನ ಹೊರಗೆ ಮಾಡಿಕೊಂಡ ಯಾವುದೇ ಒಪ್ಪಂದಕ್ಕೆ ಅವರು ಸಹಿ ಹಾಕುವುದಿಲ್ಲ ಎಂಬುದನ್ನು ಲೋಕ ಅದಾಲತ್ ಸದಸ್ಯರು ಖಚಿತಪಡಿಸಿಕೊಳ್ಳಬೇಕು’ ಎಂದು ನ್ಯಾಯಪೀಠ ಎಚ್ಚರಿಸಿದೆ.

ಪ್ರಕರಣವೇನು?: ಶೈಲಾ ಐ ಕರ್ಕಿಹಳ್ಳಿಮಠ ಅವರ ಪತಿ (41) ಬಾಣಸಿಗನಾಗಿ ತಿಂಗಳಿಗೆ ₹6 ಸಾವಿರ ಪಗಾರಕ್ಕೆ ಕೆಲಸ ಮಾಡುತ್ತಿದ್ದರು. 2012ರಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರು.

ಪರಿಹಾರ ಕೋರಿಕೆಗಾಗಿ ಅರ್ಜಿದಾರರು ಸಲ್ಲಿಸಿದ್ದ ಮನವಿಯನ್ನು, ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿ (ಎಂಎಸಿಟಿ) ಪುರಸ್ಕರಿಸಿ ಪರಿಹಾರ ನೀಡಿಕೆಗಾಗಿ 2013ರ ನವೆಂಬರ್ 13ರಂದು ಆದೇಶಿಸಿತ್ತು.

ಈ ಪರಿಹಾರ ನೀಡಿಕೆ ಮೊತ್ತವನ್ನು ಪ್ರಶ್ನಿಸಿದ್ದ ಐಸಿಐಸಿಐ ಇನ್ಶೂರೆನ್ಸ್ ಕಂಪನಿ 2014ರಲ್ಲಿ ಹೈಕೋರ್ಟ್ ಮೆಟ್ಟಿಲೇರಿತ್ತು. ಈ ವೇಳೆ ಪ್ರಕರಣವನ್ನು ಲೋಕ ಅದಾಲತ್‌ನಲ್ಲಿ ಬಗೆಹರಿಸಿಕೊಳ್ಳಲು ಶಿಫಾರಸು ಮಾಡಲಾಗಿತ್ತು. ಧಾರವಾಡ ಪೀಠದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ, ಹೈಕೋರ್ಟ್ ಕಾನೂನು ಸೇವೆಗಳ ಪ್ರಾಧಿಕಾರ ಸಮಿತಿಯು ಪರಿಹಾರದ ₹9,18,600 ಮೊತ್ತವನ್ನು ₹7,82,000ಕ್ಕೆ ಇಳಿಸಿ ಅಂತಿಮಗೊಳಿಸಿತ್ತು.

ಈ ತೀರ್ಪಿನ ವಿರುದ್ಧ ರಿಟ್ ಅರ್ಜಿ ಸಲ್ಲಿಸಿದ್ದ ಶೈಲಾ ಮತ್ತು ಅವರ ಮಗ, ‘ಲೋಕ ಅದಾಲತ್ ಮುಂದೆ ಪರಿಹಾರದ ಮೊತ್ತವನ್ನು ಕಡಿಮೆ ಮಾಡುವಾಗ ನಮ್ಮ ಕಡೆಯ ವಕೀಲರು ಇತ್ಯರ್ಥಕ್ಕೆ ಒಪ್ಪಿಕೊಂಡಿದ್ದಾರೆ ಎಂಬುದು ಮತ್ತು ಇದಕ್ಕಾಗಿ ಸಲ್ಲಿಸಲಾದ ಜಂಟಿ ಮೆಮೊಗೆ ಸಹಿ ಹಾಕಿರುವುದು ನಮ್ಮ ಅರಿವಿಗೆ ಬಂದಿರಲಿಲ್ಲ. ಹಾಗಾಗಿ, ಮಿಶ್ರಿತ ಮೊದಲ ಮೇಲ್ಮನವಿಗೆ (ಎಂಎಫ್‌ಎ) ಸಂಬಂಧಿಸಿದಂತೆ ಲೋಕ ಅದಾಲತ್ 2019ರ ಜುಲೈ 13ರಂದು ನೀಡಿರುವ ಆದೇಶವನ್ನು ರದ್ದುಗೊಳಿಸಬೇಕು’ ಎಂದು ಕೋರಿದ್ದರು.

ಉಭಯ ಪಕ್ಷಗಾರರು ಜಂಟಿ ಮೆಮೊಗೆ ಸಹಿ ಹಾಕಿ ಇತ್ಯರ್ಥಗೊಳಿಸಿದ ಮತ್ತು ಜಂಟಿ ಮೆಮೊ ಸಲ್ಲಿಕೆಯ ಮೂಲಕವೇ ಅದಾಲತ್ ಅಂಗೀಕರಿಸಿದ್ದರೆ ಮಾತ್ರ ತೀರ್ಪು ಕಾರ್ಯಗತಗೊಳ್ಳುತ್ತದೆ

ನ್ಯಾ.ಎಂ.ನಾಗಪ್ರಸನ್ನ

ಸೀಮಿತ ಆಧಾರದಡಿ ಪ್ರಶ್ನಿಸಬಹುದು...

‘ಉಭಯ ಪಕ್ಷಗಾರರು ಮಾಡಿಕೊಂಡ ಇತ್ಯರ್ಥ ಅಥವಾ ಒಪ್ಪಂದಕ್ಕೆ ತಮ್ಮ ಸಮ್ಮುಖದಲ್ಲಿ ಮಾತ್ರವೇ ಸಹಿ ಹಾಕುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಲೋಕ ಅದಾಲತ್‌ನ ಸದಸ್ಯರ ಜವಾಬ್ದಾರಿ’ ಎಂದು ತಿಳಿಸಿರುವ ನ್ಯಾಯಪೀಠ, ಪಂಜಾಬ್ ರಾಜ್ಯ ಸರ್ಕಾರ ಮತ್ತು ಜಲೋರ್ ಸಿಂಗ್ ಪ್ರಕರಣದಲ್ಲಿ ಉಲ್ಲೇಖಿಸಿರುವ ತೀರ್ಪನ್ನು ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು, ಭಾರ್ಗವಿ ಕನ್‌ಸ್ಟ್ರಕ್ಷನ್ v/s ಕೊತ್ತಕಾಪು ಮುತ್ತಾಯಮ್ ರೆಡ್ಡಿ ಪ್ರಕರಣದಲ್ಲಿ ಎತ್ತಿಹಿಡಿದಿದೆ ಎಂಬುದನ್ನು ಉಲ್ಲೇಖಿಸಿದೆ.

‘ಉಭಯ ಪಕ್ಷಗಾರರರು ಜಂಟಿ ಮೆಮೊ ಸಲ್ಲಿಸಿ ಇತ್ಯರ್ಥಗೊಂಡ ವಿಷಯದಲ್ಲಿ ಲೋಕ ಅದಾಲತ್ ತೀರ್ಪು ನೀಡಿದರೆ ಅದು ಅಂತಿಮವಾಗುತ್ತದೆ ಮತ್ತು ಇತ್ಯರ್ಥಕ್ಕೆ ಉಭಯ ಪಕ್ಷಗಾರರು ಬದ್ಧವಾಗಿರಬೇಕಾಗುತ್ತದೆ. ಇದು ಸಿವಿಲ್ ನ್ಯಾಯಾಲಯದ ತೀರ್ಪಿನಂತೆ ಕಾರ್ಯಗತಗೊಳ್ಳುತ್ತದೆ. ಇದರ ವಿರುದ್ಧ ಯಾವುದೇ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಒಂದು ವೇಳೆ ಪಕ್ಷಗಾರರಲ್ಲಿ ಯಾರಾದರೊಬ್ಬರು ಇತ್ಯರ್ಥಗೊಂಡ ಈ ತೀರ್ಪನ್ನು ಪ್ರಶ್ನಿಸಲು ಬಯಸಿದರೆ, ಅದನ್ನು ಸಂವಿಧಾನದ 226 ಮತ್ತು 227ನೇ ವಿಧಿಯ ಅಡಿಯಲ್ಲಿ ಬಹಳ ಸೀಮಿತ ಆಧಾರದಡಿ ಪ್ರಶ್ನಿಸಬಹುದು’ ಎಂಬ ಅಂಶಗಳನ್ನು ಮೆಲುಕು ಹಾಕಿದೆ.

ಮಕ್ಕಳಿಂದ ಭಿಕ್ಷಾಟನೆ: ತಡೆಗೆ ಸಮಿತಿ ರಚನೆ

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳಿಗೆ ನೆರವಾಗಲು ಕ್ರಿಯಾ ಯೋಜನೆ ಸಲ್ಲಿಸುವಂತೆ 2026ರ ಜನವರಿ 22ರಂದು ನೀಡಿರುವ ನಿರ್ದೇಶನ ಪಾಲನೆಗೆ ಕೈಗೊಂಡಿರುವ ಕ್ರಮದ ಬಗ್ಗೆ ವಿವರಣೆ ನೀಡಿ’ ಎಂದು ನಿರ್ದೇಶಿಸಿ ವಿಚಾರಣೆಯನ್ನು ಜೂನ್ 17ಕ್ಕೆ ಮುಂದೂಡಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪುತ್ತಿಗೆ ರಮೇಶ್ ವಾದ ಮಂಡಿಸಿದರು.

ಕೋರಿಕೆ: ‘ನಗರದ ಬೀದಿಗಳಲ್ಲಿ ಮತ್ತು ವಿಶೇಷವಾಗಿ ಸಂಚಾರ ಜಂಕ್ಷನ್‌ಗಳಲ್ಲಿ ಆಟಿಕೆಗಳು, ಇಯರ್ ಬಡ್‌ಗಳು, ಹೂವುಗಳು... ಮುಂತಾದ ವಸ್ತುಗಳನ್ನು ಮಾರಾಟ ಮಾಡಲು ಮಕ್ಕಳಿಗೆ ಅನುಮತಿ ಇಲ್ಲ ಎಂಬುದನ್ನು ರಾಜ್ಯ ಸರ್ಕಾರಕ್ಕೆ ಮನವರಿಕೆ ಮಾಡಬೇಕು ಮತ್ತು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಬರುವ ಮಕ್ಕಳಿಗೆ ಪ್ರವೇಶವನ್ನು ನಿರಾಕರಿಸದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲು ಪ್ರಾಥಮಿಕ ಶಿಕ್ಷಣ ಇಲಾಖೆಗೆ ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಬಿರು ಬೇಸಿಗೆ: ಹಂಪಿ ಮೃಗಾಲಯದಲ್ಲಿ ಪ್ರಾಣಿಗಳ ಆರೈಕೆ

ಝಳ ತಣಿಸಲು ಮಣ್ಣಿನ ಸ್ನಾನ

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): ಬೇಸಿಗೆಯ ಬಿಸಿಲಿನ ಝಳ ಹೆಚ್ಚಾಗುತ್ತಿದ್ದು, ಹಂಪಿ ಸಮೀಪದ ಅಟಲ್ ಬಿಹಾರಿ ವಾಜಪೇಯಿ ಮೃಗಾಲಯದಲ್ಲಿ (ಹಂಪಿ ಮೃಗಾಲಯ) ಪ್ರಾಣಿಗಳನ್ನು ತಂಪಾಗಿ ಇಡಲು, ರೋಗ ಬರದಂತೆ ತಡೆಯಲು ಮಣ್ಣಿನ ಸ್ನಾನ (ಮಡ್‌ಬಾತ್), ಸ್ಪ್ರಿಂಕ್ಲರ್ ನೀರಿನ ಸ್ನಾನದಂತಹ ವ್ಯವಸ್ಥೆ ಮಾಡಲಾಗಿದೆ.

ಸದ್ಯ ಹಂಪಿ ಭಾಗದಲ್ಲಿ ಉಷ್ಣಾಂಶ 39 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಬಿಸಿಲಿನ ಝಳ ತೀವ್ರವಾಗಿದೆ. ಮಣ್ಣಿನ ಸ್ನಾನದಂತಹ ಕ್ರಮಗಳಿಂದ ಪ್ರಾಣಿಗಳನ್ನು ತಂಪಾಗಿ ಇಡುವುದು, ಅವುಗಳಿಗೆ ರೋಗ ಬರದಂತೆ ತಡೆಯಬಹುದು ಎಂಬುದನ್ನು ಪರಿಣತರು ಕಂಡುಕೊಂಡಿದ್ದಾರೆ.

‘ಕಪ್ಪು ಮಣ್ಣಿನ ರಾಶಿಗೆ ನೀರು ಹಾಯಿಸಿದರೆ ಅದರಲ್ಲಿ ನೀರಿನ ಅಂಶ ಬಹಳ ದಿನ ಉಳಿಯುತ್ತದೆ. ಕೃಷ್ಣಮೃಗ, ಸಾರಂಗ, ಜಿಂಕೆಗಳಂತಹ ಪ್ರಾಣಿಗಳು ತೇವಭರಿತ ಮಣ್ಣಿನಲ್ಲಿ ಹೊರಳಾಡಿ ಸೆಖೆ ತಣಿಸಿಕೊಳ್ಳುತ್ತವೆ, ಈ ಮಣ್ಣಿಗೆ ಕೆಲವು ಔಷಧಗಳನ್ನೂ ಸೇರಿಸಿದರೆ ಪ್ರಾಣಿಗಳಿಗೆ ಅಂಟಿಕೊಂಡಿರಬಹುದಾದ ಸೋಂಕು ನಿವಾರಣೆಯಾಗುತ್ತದೆ. ಹೀಗಾಗಿ ಮಣ್ಣಿನ ಸ್ನಾನ ಉಪಕಾರಿ’ ಎಂದು ಹಂಪಿ ಮೃಗಾಲಯದ ಡಿಸಿಎಫ್ ರಾಜೇಶ್ ನಾಯ್ಕ್ ತಿಳಿಸಿದರು.

‘ಸುಮಾರು 350 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಮೃಗಾಲಯದಲ್ಲಿ 15ಕ್ಕೂ ಅಧಿಕ ನೀರಿನ ಹೊಂಡಗಳಿದ್ದು, ಅವುಗಳಲ್ಲಿಯೂ ಪ್ರಾಣಿಗಳು ಬಂದು ಮಲಗುತ್ತವೆ. ಹೀಗಾಗಿ ನೀರಿನ ಹೊಂಡಗಳಲ್ಲಿ ಸದಾ ನೀರು ಇರುವಂತೆ ನೋಡಿಕೊಳ್ಳಲಾಗುತ್ತಿದೆ’ ಎಂದು ಅವರು ಹೇಳಿದರು.

‘ಸಫಾರಿ ನಡೆಯುವ ಸ್ಥಳಗಳಲ್ಲಿ ಸಿಂಹ, ಹುಲಿಗಳಿಗೆ ಸ್ಪ್ರಿಂಕ್ಲರ್ ಮೂಲಕ ನೀರು ಹಾಯಿಸಿ ಅವುಗಳ ತಾಪ ಕಡಿಮೆ ಮಾಡಲಾಗುತ್ತಿದೆ. ಮೃಗಾಲಯದಲ್ಲಿ ಸಹ ಪ್ರಾಣಿಗಳ ದೇಹ ಪ್ರಕೃತಿಗೆ ತಕ್ಕಂತೆ ನೀರು ಹಾಯಿಸುವ, ತಂಪಾಗಿ ಇಡುವ ಯತ್ನ ನಡೆದಿದೆ. ಮೃಗಾಲಯದಲ್ಲಿ ನಾಲ್ಕು ಕೊಳವೆಬಾವಿಗಳಿದ್ದು, ನೀರಿಗೆ ತೊಂದರೆ ಇಲ್ಲ. 2 ಕೊಳವೆಬಾವಿಗಳಿಗೆ ಸೋಲಾರ್ ಪಂಪ್ ಅಳವಡಿಸಿದ್ದು, ವಿದ್ಯುತ್ ಕೈಕೊಟ್ಟರೆ ಸಮಸ್ಯೆ ಇಲ್ಲ’ ಎಂದು ಹೇಳಿದರು.





ಮೃಗಾಲಯದಲ್ಲಿ ಸ್ಪ್ರಿಂಕ್ಲರ್‌ಗೆ ಮೈಯೊಡ್ಡಿದ ಹುಲಿ (ಎಡಚಿತ್ರ) ನೀರಿನ ಹೊಂಡದಲ್ಲಿ ಮಲಗಿದ್ದ ಕಡವೆ –ಪ್ರಜಾವಾಣಿ ಚಿತ್ರ

‘ಒಳ ಮೀಸಲು ಜಾರಿ ಖಚಿತ’

ದಲಿತ ಸಮುದಾಯದವರು ಯಾವುದೇ ಗೊಂದಲಕ್ಕೆ ಒಳಗಾಗಬಾರದು: ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಳಮೀಸಲು ಜಾರಿಗೆ ರಾಜ್ಯ ಸರ್ಕಾರ ಸಂಪೂರ್ಣ ಬದ್ಧವಾಗಿದೆ. ದಲಿತ ಸಮುದಾಯದವರು ಈ ವಿಷಯವಾಗಿ ಯಾವುದೇ ಗೊಂದಲಕ್ಕೆ ಒಳಗಾಗಬಾರದು’ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಭಾನುವಾರ ಹಮ್ಮಿಕೊಂಡಿದ್ದ ಬಾಬೂ ಜಗಜೀವನ್ ರಾಂ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಒಳಮೀಸಲು ಪ್ರಕ್ರಿಯೆಯಲ್ಲಿ ಸಚಿವ ಎಚ್.ಸಿ. ಮಹದೇವಪ್ಪ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಈ ವಿಚಾರದಲ್ಲಿ ಸಚಿವರಾದ ಜಿ. ಪರಮೇಶ್ವರ, ಪ್ರಿಯಾಂಕ್ ಖರ್ಗೆ, ಶಿವರಾಜ್ ತಂಗಡಗಿ, ಆರ್.ಬಿ. ತಿಮ್ಮಾಪುರ ಸೇರಿದಂತೆ ನಾವೆಲ್ಲರೂ ಒಟ್ಟಾಗಿದ್ದೇವೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ವಿನಾ ಕಾರಣ ಯಾರೂ ಹೋರಾಟಗಳನ್ನು ಮಾಡಿ ಗೊಂದಲ ಸೃಷ್ಟಿಸಬಾರದು. ನಾವೆಲ್ಲರೂ ಮುಂದೆಯೂ ಒಟ್ಟಾಗಿಯೇ ಇರಬೇಕು’ ಎಂದು ಮನವಿ ಮಾಡಿದರು.

‘ಕೆಲವರು ಮಹದೇವಪ್ಪ ಅವರ ಬಗ್ಗೆ ಕೆಟ್ಟದಾಗಿ ಮಾತನಾಡಿರುವುದು ನನಗೆ ನೋವು ತಂದಿದೆ. ಒಳ ಮೀಸಲು ಅನುಷ್ಠಾನ ಮಾಡುವವರು ಮಹದೇವಪ್ಪ ಮತ್ತು ಅವರ ಇಲಾಖೆ. ಅದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಒಗ್ಗಟ್ಟಿನಿಂದ ಇದ್ದರೆ ಮಾತ್ರ ಸಾಧನೆ ಮಾಡಲು ಸಾಧ್ಯ’ ಎಂದರು.

‘ಅಂಬೇಡ್ಕರ್ ಮತ್ತು ಸಂವಿಧಾನದ ಆಶಯಗಳನ್ನು ಮನೆ ಮನಕ್ಕೆ ತಲುಪಿಸುತ್ತಿರುವ, ಸಂವಿಧಾನವನ್ನು ಅರಿಯಿರಿ, ಅದರಂತೆ ನಡೆಯಿರಿ ಎಂದು ಹೇಳಿ ಆ ಪೀಠಿಕೆಯನ್ನು ಓದಿಸುತ್ತಿರುವವರು ಮಹದೇವಪ್ಪ. ಹೀಗಿರುವಾಗ ಈ ಸಮಾಜದ ಸುಧಾರಣೆಗೆ ಒಳಮೀಸಲು ಜಾರಿ ಆಗಲ್ಲ ಅಂತ ಹೇಗೆ ಹೇಳುತ್ತೀರಿ. ಹೀಗಾಗಿ, ಗೊಂದಲಕ್ಕೆ ಒಳಗಾಗಬೇಡಿ’ ಎಂದು ಸಮುದಾಯದವರಿಗೆ ಮನವಿ ಮಾಡಿದರು.

ಸಮಾಜ ಕಲ್ಯಾಣ ಸಚಿವರಾದ ಡಾ. ಎಚ್.ಸಿ. ಮಹದೇವಪ್ಪ ಮಾತನಾಡಿ, ‘ಅಂಬೇಡ್ಕರ್ ಅವರು ಜಾಗತಿಕ ಚಿಂತಕ, ಜಗಜೀವನ್ ರಾಂ ಅವರು ರಾಜನೀತಿಜ್ಞ. ಇಂತಹ ನಾಯಕರು ಇರುವ ಸಮಾಜ ಇಂದು ಅಡ್ಡದಾರಿಗೆ ಹೋಗುತ್ತಿದೆ ಎಂದರೆ ಹೇಗೆ? ನಮ್ಮಲ್ಲಿ ವ್ಯತ್ಯಾಸ, ಅಭಿಪ್ರಾಯ ಭೇದ, ಸಣ್ಣಪುಟ್ಟ ಸಮಸ್ಯೆಗಳು ಇರಬಹುದು. ಆದರೆ, ಅನುಮಾನ ಮತ್ತು ಗೊಂದಲಗಳಿಗೆ ಅವಕಾಶ ನೀಡದೆ ಚರ್ಚೆಗಳ ಮೂಲಕ ಎಲ್ಲವನ್ನೂ ಬಗೆಹರಿಸಿಕೊಳ್ಳಬೇಕು’ ಎಂದರು.

‘ದಲಿತರ ಒಗ್ಗಟ್ಟು ಕಾಪಾಡಬೇಕು. ಯಾವುದೇ ಕಾಲಕ್ಕೂ ಅಸ್ಪೃಶ್ಯರಲ್ಲಿ ಒಡಕು ಉಂಟಾಗಿ ಅನುಮಾನಕ್ಕೆ ಅವಕಾಶ ಆಗದಂತೆ ಜೀವನ ಸಾಗಿಸಲು ನಮ್ಮ ಬುದ್ಧಿಜೀವಿಗಳು, ಸಂಘಟನೆಗಳು ಮತ್ತು ನಾಯಕರು ಕುಳಿತು ಚರ್ಚಿಸಿ, ಸಮಾಜವನ್ನು ಮುನ್ನಡೆಸುವ ಕೆಲಸಕ್ಕೆ ಮುಂದಾಗಬೇಕು’ ಎಂದು ಆಶಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಸಂವಿಧಾನದ ಆಶಯ, ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದಾರೆ. ಅವರನ್ನು ಬಳಸಿಕೊಂಡು ನಾವು ಸಮಾಜವನ್ನು ಸದೃಢವಾಗಿ ಕಟ್ಟುವ ಜತೆಗೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ಕಡೆಗೆ ಗಮನ ಹರಿಸಬೇಕು. ಸಂಯಮ, ಶಿಸ್ತಿನಿಂದ, ಸಂಘಟಿತರಾಗಿ ಒಗ್ಗಟ್ಟಿನಿಂದ ಸವಾಲುಗಳನ್ನು ಎದುರಿಸಬೇಕು’ ಎಂದರು.

ಲೇಖಕಿ ಇಂದಿರಾ ಕೃಷ್ಣಪ್ಪ, ಸಮಾಜ ಕಲ್ಯಾಣ ಇಲಾಖೆಯ ಸಲಹೆಗಾರ ವೆಂಕಟಯ್ಯ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.



ವಿಧಾನಸೌಧದಲ್ಲಿ ಬಾಬೂ ಜಗಜೀವನ್ ರಾಮ್ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಲಾರ್ಪಣೆ ಮಾಡಿ ನಮಿಸಿದರು. ಸಚಿವರಾದ ಎಚ್.ಸಿ. ಮಹದೇವಪ್ಪ ಮತ್ತು ಕೆ.ಎಚ್. ಮುನಿಯಪ್ಪ ಇದ್ದರು

> **ಒಳ ಮೀಸಲು ಸಮಸ್ಯೆ ಬಗೆಹರಿಸುವುದು ದೊಡ್ಡ ವಿಷಯವೇನೂ ಅಲ್ಲ. ಎಲ್ಲರೂ ಸಮವಾಗಿ ಹಂಚಿ ತಿನ್ನಬೇಕು**
> **ಡಾ.ಎಚ್.ಸಿ. ಮಹದೇವಪ್ಪ** ಸಮಾಜ ಕಲ್ಯಾಣ ಸಚಿವ

> **ಒಳ ಮೀಸಲು ಜಾರಿ ಕುರಿತು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಈಗಾಗಲೇ ಭರವಸೆ ನೀಡಿದ್ದಾರೆ. ಉಪ ಚುನಾವಣೆಯ ಬಳಿಕ ಈ ಪ್ರಕ್ರಿಯೆ ನಡೆಯಲಿದೆ**
> **ಕೆ.ಎಚ್. ಮುನಿಯಪ್ಪ,** ಆಹಾರ ಸಚಿವ

ಅನುಮಾನಾಸ್ಪದ ಓಡಾಟ: ಎಂಟು ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಆರ್‌ಸಿಬಿ ಮತ್ತು ಸಿಎಸ್‌ಕೆ ತಂಡಗಳ ನಡುವಿನ ಐಪಿಎಲ್ ಪಂದ್ಯದ ವೇಳೆ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಎಂಟು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಜಾರ್ಖಂಡ್‌ನ ನಾಲ್ವರು ಸೇರಿ ಒಟ್ಟು 8 ಜನರನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸಿದರು. ದಾಖಲೆ ಪತ್ರ ಮತ್ತು ಟಿಕೆಟ್‌ಗಳನ್ನು ಪರಿಶೀಲಿಸಿದರು.

‘ಶೀಘ್ರ ಒಮ್ಮತದ ತೀರ್ಮಾನ’

ಪ್ರಜಾವಾಣಿ ವಾರ್ತೆ



ಎಂ.ಬಿ. ಪಾಟೀಲ

ದಾವಣಗೆರೆ: ‘ವೀರಶೈವ ಲಿಂಗಾಯತ ಸ್ವತಂತ್ರ ಧರ್ಮ’ ರೂಪಿಸುವ ಸಂಬಂಧ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜೊತೆಗೆ ಚರ್ಚೆನಡೆದಿದ್ದು, ಶೀಘ್ರ ಒಮ್ಮತದ ತೀರ್ಮಾನಕ್ಕೆ ಬರಲಿದ್ದೇವೆ’ ಎಂದು ‘ಪ್ರತ್ಯೇಕ ಧರ್ಮ’ ಹೋರಾಟದಲ್ಲಿ ಗುರುತಿಸಿಕೊಂಡಿರುವ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

‘ಶಾಮನೂರು ಶಿವಶಂಕರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದ ವೀರಶೈವ ಲಿಂಗಾಯತ ಮಹಾ ಅಧಿವೇಶನದಲ್ಲಿ ಸ್ವತಂತ್ರ ಧರ್ಮದ ನಿರ್ಣಯ ಕೈಗೊಳ್ಳಲಾಗಿತ್ತು. ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಹೋರಾಟ ನಡೆಸುತ್ತಿರುವವರ ಜೊತೆಗೆ ಚರ್ಚೆಗಳು ನಡೆಯುತ್ತಿವೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಲಿಂಗಾಯತ ಸ್ವತಂತ್ರ ಧರ್ಮ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ವೀರಶೈವ ಲಿಂಗಾಯತ ಸ್ವತಂತ್ರ ಧರ್ಮ ಎಂಬುದು ಶಾಮನೂರು ಶಿವಶಂಕರಪ್ಪ ಅವರ ಅಭಿಪ್ರಾಯವಾಗಿತ್ತು. ಇದು ಹಿಂದೂ ಧರ್ಮದ ಭಾಗವಲ್ಲ ಎಂಬ ನಿರ್ಣಯವನ್ನು ಮಹಾ ಅಧಿವೇಶನದಲ್ಲಿ ಕೈಗೊಳ್ಳಲಾಗಿತ್ತು ಎಂದು ಹೇಳಿದರು.

‘ಹೊಗೆ’ ಪರೀಕ್ಷೆಗೆ ತಂತ್ರಾಂಶ

2,700 ತಪಾಸಣಾ ಕೇಂದ್ರ •700 ಕೇಂದ್ರದಲ್ಲಿ ಅನುಷ್ಠಾನ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಾಹನಗಳ ಹೊಗೆ ತಪಾಸಣೆ ನಡೆಸಿ ಪ್ರಮಾಣಪತ್ರ ಪಡೆದಿದ್ದರೂ ‘ವಾಹನ್‌-4’ ತಂತ್ರಾಂಶದಲ್ಲಿ ಕಾಣದೇ ಹೊರ ರಾಜ್ಯಗಳಲ್ಲಿ ವಾಹನಗಳ ಮಾಲೀಕರು ದಂಡ ಕಟ್ಟಬೇಕಾದ ಸಂಕಷ್ಟಕ್ಕೆ ಇದೀಗ ತೆರೆ ಬಿದ್ದಿದೆ.

ಹೊಸ ತಂತ್ರಾಂಶವು ಪೊಲ್ಯುಷನ್ ಅಂಡರ್ ಕಂಟ್ರೋಲ್ ಸೆಂಟರ್‌ನಲ್ಲಿ (ಪಿಯುಸಿಸಿ) ಅನುಷ್ಠಾನಗೊಂಡಿದೆ.

ಮಾಲಿನ್ಯ ತಪಾಸಣೆ ನಡೆಸಿ, ಪ್ರಮಾಣಪತ್ರ ಪಡೆದ ವಾಹನಗಳು ಹೊರ ರಾಜ್ಯಗಳಿಗೆ ಹೋದಾಗ ಹೊಗೆ ತಪಾಸಣೆ ನಡೆಸಿಲ್ಲ ಎಂದು ಅಲ್ಲಿನ ಸಾರಿಗೆ ಅಧಿಕಾರಿಗಳು ಅಥವಾ ಸಂಚಾರ ಪೊಲೀಸರು ದಂಡ ವಿಧಿಸುತ್ತಿದ್ದರು. ಕರ್ನಾಟಕದಲ್ಲಿ ಮಾಡಿದ ಹೊಗೆ ಪರೀಕ್ಷೆ (ಎಮಿಷನ್ ಟೆಸ್ಟ್) ‘ವಾಹನ್‌-4’ ತಂತ್ರಾಂಶದಲ್ಲಿ ತೋರಿಸದೇ ಇರುವುದು ಈ ಸಮಸ್ಯೆಗೆ ಕಾರಣವಾಗಿತ್ತು. ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಹಳೇ ತಂತ್ರಾಂಶವು ಎನ್‌ಐಸಿಯೊಂದಿಗೆ ಸಂಯೋಜನೆಗೊಳ್ಳದೇ ಸಮಸ್ಯೆ ಉಂಟಾಗಿತ್ತು.


ಹೊಸ ತಂತ್ರಾಂಶ ಅಭಿವೃದ್ಧಿಪಡಿಸಿ ಅಳವಡಿಸಲು ಮೂರು ಬಾರಿ ಕರೆದ ಟೆಂಡರ್ ವಿವಿಧ ಕಾರಣಗಳಿಂದ ರದ್ದಾಗಿತ್ತು. ನಾಲ್ಕನೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡರೂ ಅನುಷ್ಠಾನಗೊಂಡಿರಲಿಲ್ಲ. ಇದೀಗ ಸರ್ಕಾರ ಒಪ್ಪಿಗೆ ನೀಡಿದೆ. ಟೆಕ್ ಕಮರ್ಷಿಯಲ್ ಟೆಂಡರ್ ಪಡೆದಿರುವ ‘ಮೇರು ಇನ್ಫೋ ಸೊಲ್ಯುಷನ್’ ಅನುಷ್ಠಾನಗೊಳಿಸುತ್ತಿದೆ’ ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ (ಪರಿಸರ ಮತ್ತು ಇ-ಆಡಳಿತ) ಜ್ಞಾನೇಂದ್ರ ಕುಮಾರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ವಿಶೇಷತೆ: ಹೊಸ ತಂತ್ರಾಂಶವು ‘ವಾಹನ್‌-4’ಕ್ಕೆ ಸಂಯೋಜನೆಗೊಂಡಿರುವುದರಿಂದ ವಾಹನದ ನೋಂದಣಿ ಸಂಖ್ಯೆಯನ್ನು ನಮೂದಿಸಿದ ಕೂಡಲೇ ವಾಯು ಮಾಲಿನ್ಯ ತಪಾಸಣೆ ಯಾವಾಗ ಮಾಡಲಾಗಿದೆ? ಮುಂದೆ ಯಾವಾಗ ಮಾಡಿಸಬೇಕು? ಎಂಜಿನ್‌ನ ಸ್ಥಿತಿ ಏನು? ವಾಹನಕ್ಕೆ ಎಷ್ಟು ವರ್ಷಗಳಾದವು? ಮಾಲೀಕರು ಯಾರು? ಅವರ ದೂರವಾಣಿ ಸಂಖ್ಯೆ ಸಹಿತ ಸಕಲ ವಿವರಗಳು ಲಭ್ಯವಾಗುತ್ತವೆ. ಹೊಗೆ ತಪಾಸಣೆ ನಡೆಸಿದಾಗ ಅದರ ವಿವರಗಳೂ ದಾಖಲಾಗುತ್ತವೆ. ಮಾಲಿನ್ಯ ಮಟ್ಟವೂ (ನಾರ್ಮ್) ದಾಖಲಾಗಲಿದೆ.

‘ಹೊಗೆ ಪರೀಕ್ಷೆ’ ಪ್ರಮಾಣ ಪತ್ರದೊಂದಿಗೆ ಕ್ಯೂಆರ್ ಕೋಡ್ ಕೂಡ ಇರಲಿದ್ದು, ದೇಶದ ಯಾವುದೇ ಮೂಲೆಯಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡಿದರೆ ‘ಎಮಿಷನ್’ ಪರೀಕ್ಷೆ ಸಹಿತ ಎಲ್ಲ ವಿವರಗಳು ಸಿಗಲಿವೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ವರ್ಷದ ಹಿಂದೆಯೇ ಹೊಗೆ ತಪಾಸಣಾ ಕೇಂದ್ರದ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಜಿಯೊ ಫೆನ್ಸಿಂಗ್ ಜಾರಿ



ರಾಮಲಿಂಗಾರೆಡ್ಡಿ

ಹಿಂದೆ ವಾಹನಗಳನ್ನು ಭೌತಿಕವಾಗಿ ಪರಿಶೀಲಿಸದೇ ಪ್ರಮಾಣಪತ್ರ ನೀಡುವ ಪ್ರಕ್ರಿಯೆಗಳು ಕೆಲವು ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳಲ್ಲಿ ನಡೆಯುತ್ತಿದ್ದವು. ಇನ್ನು ಕೆಲವು ಕಡೆಗಳಲ್ಲಿ ಸರಿಯಾಗಿ ಪರಿಶೀಲನೆ ನಡೆಸಿದರೂ ವಾಹನ್‌-4ಕ್ಕೆ ಸಂಯೋಜನೆಯಾಗದೇ ಸಮಸ್ಯೆಯಾಗುತ್ತಿತ್ತು. ಅದಕ್ಕಾಗಿ ಹೊಸ ತಂತ್ರಾಂಶವನ್ನು ಅಳವಡಿಸಿ ಏಪ್ರಿಲ್ 1ರಿಂದಲೇ ಜಾರಿಗೆ ತರಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಜಿಯೊ ಫೆನ್ಸಿಂಗ್ (ವಾಹನಗಳ ಇರುವಿಕೆ ಆನ್‌ಲೈನ್‌ನಲ್ಲಿ ದಾಖಲಾಗುವ ವ್ಯವಸ್ಥೆ) ಜಾರಿ ಮಾಡಿರುವು ದರಿಂದ ವಾಹನಗಳು ಭೌತಿಕವಾಗಿ ಹಾಜರಾಗಲೇಬೇಕು. ಅದರ ವಿಡಿಯೊಗಳನ್ನು ಕೂಡ ಮಾಡಲಾಗುತ್ತದೆ. ವಾಹನ ಇಲ್ಲದೇ ಇದ್ದರೆ ತಂತ್ರಾಂಶದಲ್ಲಿ ಮಾಹಿತಿ ದಾಖಲಿಸಲು ಅವಕಾಶ ಇರುವುದಿಲ್ಲ. ವಾಹನ ಸದೃಢ (ಎಫ್‌ಸಿ) ಪ್ರಮಾಣಪತ್ರ ನೀಡುವಾಗಲೂ ನಡೆಯುವ ಪ್ರಮಾದಗಳು ತಪ್ಪಲಿವೆ ಎಂದು ಅವರು ಮಾಹಿತಿ ನೀಡಿದರು.

ಮಾಲೀಕರಿಗೆ ಎರಡು ಬಾರಿ ಸಂದೇಶ



ಜ್ಞಾನೇಂದ್ರ ಕುಮಾರ್

ಹೊಸ ತಂತ್ರಾಂಶದಲ್ಲಿ ವಾಹನದ ಹೊಗೆ ತಪಾಸಣೆಯ ಅವಧಿ ಮುಗಿಯುವ 15 ದಿನಗಳ ಮೊದಲೇ ‘ಅವಧಿ ಇಂಥ ದಿನಾಂಕಕ್ಕೆ ಮುಗಿಯಲಿದೆ’ ಎಂಬ ಸಂದೇಶ ವಾಹನ ಮಾಲೀಕರಿಗೆ ಹೋಗುತ್ತದೆ. ನಿಗದಿತ ಸಮಯದಲ್ಲಿ ತಪಾಸಣೆ ಮಾಡಿಸದಿದ್ದರೆ ಅವಧಿ ಮುಗಿದ 15 ದಿನಗಳ ಒಳಗೆ ಮತ್ತೆ ಈ ಬಗ್ಗೆ ಸಂದೇಶ ಬರುತ್ತದೆ ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ ತಿಳಿಸಿದರು.

ಎಲ್ಲ ವಾಯುಮಾಲಿನ್ಯ ಕೇಂದ್ರದವರಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಅಲ್ಲದೇ ಕಳೆದ 15 ದಿನಗಳಿಂದ ವಿಡಿಯೊ ಮಾಹಿತಿ ಕಳುಹಿಸಲಾಗಿದೆ. ಏಪ್ರಿಲ್ 1ರಂದು 700 ಕೇಂದ್ರಗಳಲ್ಲಿ ಹೊಸ ತಂತ್ರಾಂಶ ಕೆಲಸ ಶುರು ಮಾಡಿದೆ. ಉಳಿದ 2000 ಕೇಂದ್ರಗಳಲ್ಲಿ ಕೆಲವೇ ದಿನಗಳಲ್ಲಿ ಅನುಷ್ಠಾನಗೊಳ್ಳಲಿದೆ ಎಂದರು.



ಹೊಗೆ ತಪಾಸಣೆ ನಡೆಸಲು ಬಂದಿರುವ ಹೊಸ ತಂತ್ರಾಂಶದ ಸರ್ವರ್ ಕೊಠಡಿ

ಹೋರಾಟ ರೂಪಿಸಲು ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ನಿರ್ಣಯ

ತಿದ್ದುಪಡಿ ಕಾಯ್ದೆಗೆ ಒಕ್ಕೂಟ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ) ತಿದ್ದುಪಡಿ ಕಾಯ್ದೆಯಿಂದಾಗಿ ಲಿಂಗತ್ವ ಅಲ್ಪಸಂಖ್ಯಾತರು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಆದ್ದರಿಂದ ಕೂಡಲೇ ಇದನ್ನು ಹಿಂದಕ್ಕೆ ಪಡೆಯಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಯಿತು.

ಕರ್ನಾಟಕ ರಾಜ್ಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ನಗರದಲ್ಲಿ ಆಯೋಜಿಸಿದ್ದ ಸಾಹಿತಿಗಳು, ಚಿಂತಕರು, ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಸಮಾನ ಮನಸ್ಕರ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಯಿತು.

‘ತಿದ್ದುಪಡಿ ಮಸೂದೆಗೆ ಸಂಸತ್ತಿನ ಉಭಯ ಸದನಗಳಲ್ಲಿ ಒಪ್ಪಿಗೆ ನೀಡಲಾಗಿದೆ. ರಾಷ್ಟ್ರಪತಿ ಕೂಡ ಮಸೂದೆಗೆ ಅಂಕಿತ ಹಾಕಿದ್ದು, ಇದು ಕಾಯ್ದೆಯಾದರೆ ಅಂತರ್ಲಿಂಗಿ ಮತ್ತು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯವನ್ನು ಅಪರಾಧೀಕರಣಗೊಳಿಸುವ ವ್ಯವಸ್ಥೆಯಾಗಿ ಮಾರ್ಪಡಲಿದೆ‘ ಎಂದು ಆತಂಕ ವ್ಯಕ್ತಪಡಿಸಲಾಯಿತು.

ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯದ ಹಕ್ಕುಗಳ ಹೋರಾಟಗಾರ್ತಿ ಅಕ್ಕೈಪದ್ಮಶಾಲಿ ಮಾತನಾಡಿ, ‘ಸಮುದಾಯದ ಸ್ವಗೌರವ, ಆತ್ಮವಿಶ್ವಾಸ, ಘನತೆಗೆ ವಿರುದ್ಧವಾಗಿರುವ ಈ ಕಾಯ್ದೆಯನ್ನು ತಿರಸ್ಕರಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ದೇಶದಾದ್ಯಂತ ವಿರೋಧ ವ್ಯಕ್ತವಾಗಿದ್ದು, ಕಾಯ್ದೆ ಜಾರಿಗೊಳಿಸಬಾರದು’ ಎಂದು ಆಗ್ರಹಿಸಿದರು.

‘ವೈದ್ಯಕೀಯ ಮಂಡಳಿಯ ಮುಂದೆ ನಗ್ನವಾಗುವ, ಸ್ವಲಿಂಗತ್ವ ನಿರ್ಧರಿಸುವ ಹಕ್ಕನ್ನು ಕಸಿದುಕೊಂಡು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿರುವ ಕೇಂದ್ರ ಸರ್ಕಾರದ ನಡೆಯನ್ನು ಒಪ್ಪಲಾಗದು. ಇದರ ವಿರುದ್ಧ ಪ್ರತಿಭಟನೆ ನಡೆಸುವ ಜತೆಗೆ ಕಾನೂನು ಹೋರಾಟ ಅನಿವಾರ್ಯ’ ಎಂದು ತಿಳಿಸಿದರು.

ನಟಿ ರಮ್ಯಾ ಮಾತನಾಡಿ, ‘ಲಿಂಗತ್ವ ಅಲ್ಪಸಂಖ್ಯಾತರಿಗೆ ಅವರ ಬದುಕಿಗೆ ಪೂರಕವಾಗಿ ಹಕ್ಕುಗಳನ್ನು ನೀಡುವ ಬದಲು ಸರ್ಕಾರ ವಿರುದ್ಧ ರೀತಿಯಲ್ಲಿ ನಡೆದುಕೊಳ್ಳುವಂತೆ ಕಾಯ್ದೆ ಜಾರಿಗೆ ತರಲು ಹೊರಟಿದೆ. ಈ ನಿಟ್ಟಿನಲ್ಲಿ ನಡೆಸಲಾಗುವ ಹೋರಾಟಗಳಿಗೆ ಬೆಂಬಲ ನೀಡುತ್ತೇನೆ’ ಎಂದು ಹೇಳಿದರು.

ನಟ ಚೇತನ್, ಮೇಘನಾ ಚೇತನ್ ಕೂಡ ಮಾತನಾಡಿದರು. ಒಕ್ಕೂಟದ ಅಧ್ಯಕ್ಷರಾದ ಪ್ರಕಾಶಿ, ಕರ್ನಾಟಕ ಅಂತರ್ಲಿಂಗಿ ಅಸೋಸಿಯೇಷನ್ ಅಧ್ಯಕ್ಷರಾದ ಅಬೇದ ಬೇಗಮ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಸುನಂದಮ್ಮ, ವಕೀಲೆ ಜಯ್ನಾ ಕೊಠಾರಿ, ಲೇಖಕಿ ಮಮತಾ ಸಾಗರ್ ಮೊದಲಾದವರು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಒಕ್ಕೂಟ ಆಯೋಜಿಸಿದ್ದ ಸಮಾನ ಮನಸ್ಕರ ಸಭೆಯಲ್ಲಿ ಜಯ್ನಾ ಕೊಠಾರಿ ಮಾತನಾಡಿದರು. ಅಕ್ಕೈ ಪದ್ಮಶಾಲಿ, ರಮ್ಯಾ ಮತ್ತು ಕ್ರಿಸ್ಟಿ ರಾಜ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ನೀಟ್’ Biology


ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

35) The term ‘clone’ cannot be applied to offspring formed by sexual reproduction because:

a) Offspring do not possess exact copies of parental DNA **(….Contd)**
b) DNA of only one parent is copied and passed on to the offspring
c) Offspring are formed at different times
d) DNA of parent and offspring are completely different.

Ans:- a

36) Identify the type of flowers based on the position of calyx, corolla and androecium with respect to the ovary from the given figures (a) and (b)



(a) (b)

(a) (a) Epigynous; (b) Hypogynous
(b) (a) Hypogynous; (b) Epigynous
(c) (a) Perigynous; (b) Epigynous
(d) (a) Perigynous; (b) Perigynous

Ans (d)

Expln:- If gynoecium is situated in the centre and other parts of the flower are located on the rim of the thalamus almost at the same level, it is called perigynous. Both diagram shows perigynous condition.

37) Given below are two statements:

Statement I: Ligaments are dense irregular tissue
Statement II: Cartilage is dense regular tissue. In the light of above statements **choose the correct answer from the option given below:**

a) Statement I is false but Statement II is true.
b) Both Statement I and II are true
c) Both Statement I and II are false
d) Statement I is true but Statement II is false

Ans:- (c) Ligaments are dense regular connective tissue that connect bone to bone. Cartilage is one of the types of specialised connective tissues

38) Consider the following :

A. The reductive division for the human female gametogenesis starts earlier than that of the male gametogenesis.
B. The gap between the first meiotic division and the second meiotic division is much shorter for males compared to females.
C. The first polar body is associated with the formation of the primary oocyte.
D. Luteinizing Hormone (LH) surge leads to disintegration of the endometrium and onset of menstrual bleeding.

Choose the correct answer from the options given below:

a) B and C are true   b) A and B are true
c) A and C are true   d) B and D are true

Ans: (b)

Expln:- . Statements A and B are true while statements C and D are false.

The first polar body is associated with the formation of the secondary oocyte LH surge leads to ovulation. Decreased levels of progesterone during late luteal phase leads to degeneration of the endometrium and onset of menstrual bleeding.

39) Amoeba and yeast reproduce asexually by fission and budding respectively, because they are:

a) Microscopic organisms
b) Heterotrophic organisms
c) Unicellular organisms
d) Uninucleate organisms

Ans:- c

40) A few statements with regard to sexual reproduction are given below;

i. Sexual reproduction does not always require two individuals
ii. Sexual reproduction generally involves gametic fusion
iii. Meiosis never occurs during sexual reproduction
iv. External fertilization is a rule during sexual reproduction

Choose the correct statements from the options below:

a) i and iv   b) i and ii
c) ii and iii   d) i and iv

Ans:- b

41) Lecithin, a small molecular weight organic compound found in living tissues, is an example of:

(a) Amino acids   (b) Phospholipids
(c) Glycerides   (d) Carbohydrates

Ans (b)

Expln:- Some lipids have phosphorous and a phosphorylated organic compound in them. These are phospholipids. They are found in cell membrane. Lecithin is one example. Option (c) is incorrect as glycerides are another group of lipids in which both glycerol and fatty acids are present. Option (a) and (d) are incorrect as amino acids and carbohydrates are separate groups of biomol

(Contd………)

ಸಿಇಟಿ MATHS

MULTIPLE CHOICE QUESTIONS

32) Three dice are rolled once. The chance of getting a score of 5 is.........................

(a) $\frac{5}{216}$ (b) $\frac{1}{6}$
(c) $\frac{1}{36}$ (d) $\frac{1}{7^2}$

Ans : (C) $\frac{1}{36}$

Expln:- Since three dice are thrown, the total number of points in the sample space S is $6\times6\times6 = 216$.
E = Event of getting a total of 5.
E= {(1, 1, 3), (1, 3, 1), (3, 1, 1), (1, 2, 2), (2, 1, 2), (2, 2, 1)}

n(E) = 6. ∴ Required probability $= \frac{6}{216} = \frac{1}{36}$.

33) A die has two face each with number ‘1’, three faces each with number ‘2’ and one face with number ‘3’. If the die is rolled once, then P(1 or 3) is

a) 2/3   b) ½
c) 1/3   d) 1/6

Ans:- b

Expln:-

$$p(1)=\frac{2}{6} \qquad \Rightarrow p(1\cup3)=p(1)+p(3)$$
$$p(2)=\frac{3}{6} \qquad =\frac{2}{6}+\frac{1}{6}$$
$$p(3)=\frac{1}{6} \qquad =\frac{1}{2}$$

34) If $|x + 5| \geq 10$ then

a) $x \in (-15, 5]$ b) $x \in (-5, 5]$
c) $x \in (-\infty, -15] \cup [5, \infty)$
d) $x \in [-\infty, -15] \cup [5, \infty)$

Ans: (c)

$$\Rightarrow |x + 5| \geq 10$$
$$\Rightarrow x + 5 \leq -10 \text{ or } x + 5 \geq 10$$
$$\Rightarrow x \leq -15 \text{ or } x \geq 5$$
$$\Rightarrow x \in (-\infty, -15] \cup [5, \infty)$$

35) The constant term in the expansion of $(x^2 - [1 / x^2])^{16}$ is ……..

a) ${}^{16}C_8$ b) ${}^{16}C_7$
c) ${}^{16}C_9$ d) ${}^{16}C_{10}$

Ans: (a)

Let T_{r+1} be the constant term.

$$\Rightarrow T_{r+1} = {}^{16}C_r (x^2)^{16-r} (1 / x^2)^r$$
$$= {}^{16}C_r\, x^{32 - 4r}$$

For constant term $32 - 4r = 0$

$$\Rightarrow 4r = 32$$
$$\Rightarrow r = 8$$
$$\Rightarrow T_{8+1} = {}^{16}C_8$$

36) A bag contains 3 white, 4 black, 2 red balls. If 2 balls are drawn at random, then the probability that both the balls are white is.........

(A) $\frac{1}{18}$ (B) $\frac{1}{36}$
(C) $\frac{1}{12}$ (D) $\frac{1}{24}$

Ans : (C) $\frac{1}{12}$

Expln:- Total no. of balls = 9.
Any two can be chosen in $9C_2$ ways.
From 3 white, any 2 white balls can be chosen in $3C_2$ ways.

$$\therefore \text{Required probability} = \frac{3C_2}{9C_2} = \frac{3}{\frac{9.8}{1.2}} = \frac{3}{36} = \frac{1}{12}.$$

37) The Contrapositive statement of the statement `` If *x* is a prime number, then *x* is odd’’ is

a) If *x* is not a Prime number, then *x* is not odd
b) If *x* is a Prime number, then *x* is not odd
c) If *x* is not a Prime number, then *x* is odd
d) If *x* is not odd, then *x* is not a prime number

Ans:-d

Expln:- Let P : x is a prime number
Q : let x be odd
Contrapositive statement is $\sim q \rightarrow \sim p$
i.e. if x is not an odd number then x is not a prime number

38) The distance of the point(-2, 4, -5) from the line $\frac{x+3}{3} = \frac{y-4}{5} = \frac{z-4}{6}$ is

(a) $\frac{\sqrt{37}}{10}$ (b) $\sqrt{\frac{37}{10}}$
(c) $\frac{37}{\sqrt{10}}$ (d) $\frac{37}{10}$

Ans : (b) $\sqrt{\frac{37}{10}}$

Expln : –Any point on the line given is of the form $3r-3,\ 5r+4,\ 6r-8$

Let R be the foot of ⊥r from $P(-2, 4, -5)$ on the line given Then $R = (3r-3,\ 5r+4,\ 6r-8)$

$\therefore 3(3r-1) + 5r + 4, 6r - 8$

The direction cosinnes of the line PR are proportional to $3r-`1,\ 5r,\ 6r-3$ PR is ⊥r to the line given

$$\therefore 3(3r-1) + 5 \text{ x } 5r + 6(6r-3) = 0$$

ie $9r - 3 + 25r + 36r - 18 = 0$

$70r = 21 \therefore r = \frac{21}{70} = \frac{3}{10}$

$\therefore$ The coordinates of R are $\left(\frac{9}{10} - 3,\ \frac{15}{10} + 4,\ \frac{18}{10} - 8\right)$

i.e, $R = \left(-\frac{21}{10},\ \frac{55}{10}, \frac{62}{10}\right)$

The distance between $P(-2, 4, -5)$ and $R\left(-\frac{21}{10},\ \frac{55}{10}, \frac{62}{10}\right)^2$

is given by $PR^2 = \left(\frac{21}{10} + 2\right)^2 + \left(\frac{55}{10} - 4\right)^2 + \left(-\frac{62}{10} + 5\right)^2$

$$= \frac{1}{100} + \frac{15^2}{100} + \frac{12^2}{100} = \frac{1 + 225 + 144}{100} = \frac{370}{100} = \frac{37}{10}$$

$$PR = \sqrt{\frac{37}{10}}$$

ಹುಬ್ಬಳ್ಳಿಯಲ್ಲಿ ಶೈಕ್ಷಣಿಕ ಮೇಳ

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಆಯೋಜಿಸುವ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಹುಬ್ಬಳ್ಳಿಯಲ್ಲಿ ನಡೆಯಲಿರುವ ಮೇಳಕ್ಕಾಗಿ ದಿನಗಣನೆ ಆರಂಭವಾಗಿದೆ. ‘ಪಿಯುಸಿ ನಂತರ ಮುಂದೇನು?’ ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳು, ಪೋಷಕರು ಮೇಳದಲ್ಲಿ ಉತ್ತರ ಪಡೆಯಬಹುದು.


ಪಾಲ್ಗೊಳ್ಳಲಿರುವ ಸಂಸ್ಥೆಗಳು: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ರೇವಾ, ಪ್ರೆಸಿಡೆನ್ಸಿ ಸಿಎಂಆರ್ ಹಾಗೂ ಸಪ್ತಗಿರಿ ಎನ್‌ಪಿಎಸ್ ಯೂನಿವರ್ಸಿಟಿಗಳು, ಕೆಎಲ್‌ಇ ವೈದ್ಯಕೀಯ ವಿಶ್ವವಿದ್ಯಾಲಯ, ವಿಐಟಿ, ಈಸ್ಟ್ ಪಾಯಿಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜು, ಈಸ್ಟ್ ವೆಸ್ಟ್ ಸಮೂಹ ಸಂಸ್ಥೆ, ಸಂಭ್ರಮ್ ಇನ್‌ಸ್ಟಿಟ್ಯೂಷನ್ಸ್, ಎಂಎಸ್ ಎಂಜಿನಿಯರಿಂಗ್ ಕಾಲೇಜು, ಎಬಿಬಿಎಸ್–ಆಚಾರ್ಯ ಬೆಂಗಳೂರು ಬಿ ಸ್ಕೂಲ್, ಎಐಎಂಎಸ್, ಅಮೃತ ವಿಶ್ವ ವಿದ್ಯಾಪೀಠಂ, ಎಸಿಎಸ್ ಎಂಜಿನಿಯರಿಂಗ್ ಕಾಲೇಜು, ಡಾ. ಎಸ್. ಆರ್.ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಐಡಿಯಾ ಸ್ಮಾರ್ಟ್ ಲರ್ನಿಂಗ್ (ವಿಷನ್ ಅಕಾಡೆಮಿ), ಪಿಇಎಸ್ ಯೂನಿವರ್ಸಿಟಿ, ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿ-ಟ್ಯೂಷನ್ಸ್, ಆರ್‌ಆರ್ ಇನ್‌ಸ್ಟಿಟ್ಯೂ-ಷನ್ಸ್ ಎಂಜಿನಿಯರಿಂಗ್ ಕಾಲೇಜಸ್, ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು (ಮೈಸೂರು), ಕೆಳದಿ ಶಿವಪ್ಪ ನಾಯಕ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಆ್ಯಂಡ್ ಹಾರ್ಟಿಕಲ್ಚರಲ್ ಸೈನ್ಸಸ್ (ಇರುವಕ್ಕಿ), ಎಂಐಟಿ ವರ್ಲ್ಡ್ ಪೀಸ್ ಯೂನಿವರ್ಸಿಟಿ (ಪುಣೆ), ಐಎಎಸ್ ಬಾಬಾ, ಅಮಿಟಿ ಯೂನಿವರ್ಸಿಟಿ, ಬಿರ್ಲಾ ಗ್ಲೋಬಲ್ ಯೂನಿವರ್ಸಿಟಿ, ಐಎಸ್‌ಬಿಆ್ಯಂಡ್‌ಎಂ, ಐಸಿಎಫ್‌ಎಐ, ದಿ ಆಕ್ಸ್‌ಫರ್ಡ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಎಸ್‌ಆರ್‌ಎನ್ ಆದರ್ಶ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಎಸ್‌ಡಿಎಂ ಎಜುಕೇಷನ್ ಸೊಸೈಟಿ (ಉಜಿರೆ), ಪಾರುಲ್ ಯೂನಿವರ್ಸಿಟಿ, ಆರ್‌ವಿ ಯೂನಿವರ್ಸಿಟಿ, ಮಾಹೆ, ಎಸ್‌ಆರ್‌ಎಂ ಯೂನಿವರ್ಸಿಟಿ, ಕಮ್ಮವಾರಿ ಸಂಘಂ, ಸಾಯಿ ವಿದ್ಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಡೆಕ್ಕನ್ ಪಿಯು ಕಾಲೇಜು, ಶೇಷಾದ್ರಿಪುರಂ ಕಾಲೇಜು, ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ...

ಯಾವಾಗ?
ಏಪ್ರಿಲ್ 11 ಮತ್ತು 12
ನೆಹರೂ ಕ್ರೀಡಾಂಗಣ ಬೆಳಿಗ್ಗೆ 9ರಿಂದ

ಸಿಇಟಿ ಮತ್ತು ನೀಟ್ ಅಣಕು ಪರೀಕ್ಷೆ ಬರೆಯಲು ಇಚ್ಛಿಸುವವರು ಈ ಕ್ಯುಆರ್ ಕೋಡ್ ಮೂಲಕ ಹೆಸರು ನೋಂದಾಯಿಸಬೇಕು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಪ್ರೀತಿ ಬಹಳ ಪ್ರಬಲವಾದ ಶಕ್ತಿ ಆಗಿದೆ. ಆದರೂ, ಅದು ನಮ್ಮ ಕಲ್ಪನೆಗೂ ಬಾರದಷ್ಟೆ ವಿನಮ್ರವಾಗಿದೆ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ವಿಶ್ವಾಸಾರ್ಹ ದತ್ತಾಂಶ ಸಂಗ್ರಹ ಜನಗಣತಿ 2027ರ ಗುರಿಯಾಗಲಿ

ಈಗಾಗಲೇ ಬಹಳ ತಡವಾಗಿರುವ ಜನಗಣತಿ ಕಾರ್ಯವು ದೇಶದಾದ್ಯಂತ ಶುರುವಾಗಿದೆ. ಇದು ದೇಶವ್ಯಾಪಿ ನಡೆಯುತ್ತಿರುವ 16ನೆಯ ಜನಗಣತಿ, ಸ್ವಾತಂತ್ರ್ಯಾನಂತರ ನಡೆಯುತ್ತಿರುವ ಎಂಟನೆಯ ಜನಗಣತಿ. ಈ ಕಾರ್ಯವು 2027ರ ಮಾರ್ಚ್‌ಗೆ ಮೊದಲು ಪೂರ್ಣಗೊಳ್ಳಲಿದೆ. ಜನಗಣತಿ ನಡೆಸುವ ವಿಧಾನ ಹಾಗೂ ಈ ಪ್ರಕ್ರಿಯೆಯಲ್ಲಿ ಬಳಕೆಯಾಗುವ ಹಲವು ಮಾನದಂಡಗಳು ಬದಲಾವಣೆ ಕಂಡಿದ್ದರೂ, ಜನಗಣತಿಯು ದೇಶದ ಜನಸಂಖ್ಯೆಯ ಸ್ವರೂಪವನ್ನು ದಾಖಲಿಸುವಲ್ಲಿ ಅತ್ಯಂತ ಹೆಚ್ಚು ವಿಶ್ವಾಸಾರ್ಹ ಪ್ರಕ್ರಿಯೆಯಾಗಿ ಉಳಿದುಬಂದಿದೆ. ಜನಗಣತಿಯ ಮೂಲಕ ಸಂಗ್ರಹಿಸುವ ದತ್ತಾಂಶವನ್ನು ಸರ್ಕಾರಗಳು ಆಡಳಿತಾತ್ಮಕ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಹಲವು ನೀತಿಗಳನ್ನು ರೂಪಿಸಲು ಆಧಾರವಾಗಿ ಬಳಕೆ ಮಾಡಿಕೊಳ್ಳುತ್ತಿವೆ. ದೇಶದಲ್ಲಿ ಕಡೆಯ ಬಾರಿಗೆ ಜನಗಣತಿ ನಡೆದಿದ್ದು 2011ರಲ್ಲಿ. ನಂತರದ ದಶವಾರ್ಷಿಕ ಜನಗಣತಿಯು 2021ರಲ್ಲಿ ನಡೆಯಬೇಕಿತ್ತು. ಆದರೆ ಅದು ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಮುಂದೂಡಿಕೆ ಆಯಿತು. ಅಷ್ಟೇ ಅಲ್ಲ, ಈ ಸಾಂಕ್ರಾಮಿಕ ಕೊನೆಗೊಂಡ ನಂತರದಲ್ಲಿಯೂ ಜನಗಣತಿ ಪ್ರಕ್ರಿಯೆಯು ಆರಂಭವಾಗಿರಲಿಲ್ಲ. ಅದಕ್ಕೆ ಕಾರಣಗಳು ಏನು ಎಂಬುದು ಸ್ಪಷ್ಟವಾಗಿಲ್ಲ. ಈಗ ಶುರುವಾಗಿರುವ ಜನಗಣತಿ ಬಗ್ಗೆ ಕೇಂದ್ರ ಸರ್ಕಾರವು 2025ರ ಜೂನ್‌ನಲ್ಲಿ ಅಧಿಸೂಚನೆ ಹೊರಡಿಸಿತು. ನಂತರದಲ್ಲಿ ಕೇಂದ್ರ ಸರ್ಕಾರವು ಆಡಳಿತ ಯಂತ್ರವನ್ನು ಈ ಬೃಹತ್ ಕಾರ್ಯಕ್ಕಾಗಿ ಸಜ್ಜಾಗಿಸಿದೆ. ಜನಗಣತಿಯು ಒಟ್ಟು ಎರಡು ಹಂತಗಳಲ್ಲಿ ನಡೆಯಲಿದೆ.



ದೇಶದ ಜನಸಂಖ್ಯೆಯ ಸ್ವರೂಪ ದಾಖಲಿಸುವಲ್ಲಿ ಜನಗಣತಿ ನಿರ್ಣಾಯಕ. ಈ ಪ್ರಕ್ರಿಯೆ ಮೂಲಕ ಲಭ್ಯವಾಗುವ ದತ್ತಾಂಶವು ಖಾಸಗಿ ವಲಯಕ್ಕೂ, ಸಂಶೋಧನಾ ಸಂಸ್ಥೆಗಳಿಗೂ ಮಹತ್ವದ್ದಾಗಲಿದೆ.

ಹಲವು ಕಾರಣಗಳಿಂದಾಗಿ ಈ ಬಾರಿಯ ಜನಗಣತಿಯು ಮಹತ್ವದ್ದಾಗುತ್ತದೆ. ಡಿಜಿಟಲ್ ಸೌಲಭ್ಯವನ್ನು ಬಳಸಿಕೊಂಡು ನಡೆಯುವ ಈ ಬಾರಿಯ ಜನಗಣತಿಯು ಹೆಚ್ಚು ದಕ್ಷವಾಗಿರಲಿದೆ, ಸಮಯವನ್ನು ಉಳಿತಾಯ ಮಾಡಲಿದೆ ಎಂದು ಹೇಳಲಾಗಿದೆ. ಡಿಜಿಟಲ್ ಕಾಲಘಟ್ಟದ ಅನುಕೂಲಗಳನ್ನು ಬಳಸಿಕೊಳ್ಳುತ್ತಿರುವ ದೇಶದಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಸಾಮರ್ಥ್ಯವನ್ನು ಅತ್ಯುತ್ತಮ ಮಟ್ಟದಲ್ಲಿ ಬಳಸಿಕೊಳ್ಳಲು ಒಂದು ಅವಕಾಶವನ್ನು ಜನಗಣತಿ ಪ್ರಕ್ರಿಯೆಯು ಒದಗಿಸಿಕೊಟ್ಟಿದೆ. ಜನಗಣತಿ ನಡೆಸುವವರು ಮನೆಮನೆಗೆ ಭೇಟಿ ನೀಡುವ ಕೆಲಸ ಶುರು ಮಾಡುವ ಮೊದಲೇ, ವೆಬ್ ಆಧಾರಿತ ಸೌಲಭ್ಯವನ್ನು ಬಳಸಿಕೊಂಡು ಜನರು ತಮ್ಮ ಮಾಹಿತಿಯನ್ನು ತಾವೇ ಒದಗಿಸಬಹುದು. ಮಾಹಿತಿಯನ್ನು 16 ಭಾಷೆಗಳಲ್ಲಿ ನೀಡುವ ಅವಕಾಶ ಇದೆ. ಜನಗಣತಿ ನಡೆಸುವವರು ದತ್ತಾಂಶವನ್ನು ತಮ್ಮ ಸ್ಮಾರ್ಟ್‌ಫೋನ್‌ನಲ್ಲಿರುವ ಆ್ಯಪ್ ಒಂದರ ಮೂಲಕ ಸಂಗ್ರಹಿಸಲಿದ್ದಾರೆ, ಆ್ಯಪ್ ಮೂಲಕವೇ ದತ್ತಾಂಶವನ್ನು ಸಲ್ಲಿಸಲಿದ್ದಾರೆ. ಜನಗಣತಿಯ ಮೊದಲ ಹಂತದಲ್ಲಿ 33 ಪ್ರಶ್ನೆಗಳು ಇವೆ, ಇವುಗಳಲ್ಲಿ ವಯಸ್ಸು, ಶೈಕ್ಷಣಿಕ ಅರ್ಹತೆ, ಉದ್ಯೋಗ, ಮನೆಯ ಸ್ಥಿತಿ, ಆಸ್ತಿ ವಿವರದ ಬಗ್ಗೆ ಪ್ರಶ್ನೆಗಳು ಇರಲಿವೆ. ಜನಗಣತಿಯ ಎರಡನೆಯ ಹಂತದಲ್ಲಿ ಜಾತಿ ವಿವರವನ್ನು ಸಂಗ್ರಹಿಸಲಾಗುತ್ತದೆ. 1931ರ ನಂತರ ಇದೇ ಮೊದಲ ಬಾರಿಗೆ ಜಾತಿ ವಿವರ ಸಂಗ್ರಹಿಸಲಾಗುತ್ತಿದೆ. ಇದು ರಾಜಕೀಯವಾಗಿಯೂ ಪರಿಣಾಮಗಳನ್ನು ಬೀರಲಿದೆ, ದೇಶದ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ವಿಶ್ಲೇಷಿಸಲು ನೆರವಾಗಲಿದೆ. ಜನರ ಸಂಖ್ಯೆಯನ್ನು ಲೆಕ್ಕ ಹಾಕುವುದಷ್ಟೇ ಅಲ್ಲದೆ ಇದು ದೇಶದಲ್ಲಿನ ಬಹುತ್ವವನ್ನು ದಾಖಲಿಸುತ್ತದೆ. 2027ರ ಜನಗಣತಿಯಲ್ಲಿ 30 ಲಕ್ಷಕ್ಕೂ ಹೆಚ್ಚು ಮಂದಿ ಗಣತಿದಾರರು, ಮೇಲ್ವಿಚಾರಕರು ಹಾಗೂ ಇತರ ಅಧಿಕಾರಿಗಳು ಭಾಗಿಯಾಗಲಿದ್ದಾರೆ.

ಜನಗಣತಿಯು ವಿಳಂಬವಾದ ಕಾರಣದಿಂದಾಗಿ ಮಾಹಿತಿ ನಿರ್ವಾತವೊಂದು ಸೃಷ್ಟಿಯಾಗಿತ್ತು. ಇದರಿಂದಾಗಿ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ದಕ್ಷವಾಗಿ ರೂಪಿಸಲು ಅಡ್ಡಿಯಾಗಿತ್ತು. ಈಗಿನ ಹಾಗೂ ವಿಶ್ವಾಸಾರ್ಹವಾದ ದತ್ತಾಂಶವನ್ನು ಆಧರಿಸಿ ಸಂಪನ್ಮೂಲಗಳ ಹಂಚಿಕೆ ಆಗಬೇಕು. ಹಾಗೆ ಮಾಡುವಾಗ ಯಾವ ಪ್ರದೇಶದಲ್ಲಿ ಎಷ್ಟು ಜನ ಇದ್ದಾರೆ, ಸಾಮಾಜಿಕವಾಗಿ-ಆರ್ಥಿಕವಾಗಿ ಯಾರ ಸ್ಥಿತಿ ಹೇಗಿದೆ ಎಂಬುದನ್ನೆಲ್ಲ ಗಮನಿಸಿ ಸಂಪನ್ಮೂಲ ಹಂಚಿಕೆ ಆಗಬೇಕು. ಇಂಥ ಕೆಲಸಗಳಿಗೆ ಜನಗಣತಿಯು ನೆರವಾಗಲಿದೆ. ಜನಗಣತಿಯ ಮೂಲಕ ಲಭ್ಯವಾಗುವ ದತ್ತಾಂಶವು ಖಾಸಗಿ ವಲಯಕ್ಕೂ, ಸಂಶೋಧನಾ ಸಂಸ್ಥೆಗಳಿಗೂ ಮಹತ್ವದ್ದಾಗಲಿದೆ. ಜನಗಣತಿ ಮತ್ತು ಶಾಸನಸಭೆಗಳ ಕ್ಷೇತ್ರ ಮರುವಿಂಗಡಣೆಗೆ ನೇರ ನಂಟು ಇದೆ. ಹೀಗಾಗಿ ಈ ಬಾರಿಯ ಜನಗಣತಿಗೆ ರಾಜಕೀಯ ಆಯಾಮವೂ ಇದೆ. 2011ರ ಜನಗಣತಿಯ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಕೇಂದ್ರ ಸರ್ಕಾರ ಆಲೋಚನೆ ನಡೆಸಿದೆ ಎಂದು ಕೆಲವು ವರದಿಗಳು ಹೇಳುತ್ತಿವೆ. ಆದರೆ ಮಹಿಳಾ ಮೀಸಲಾತಿಯ ಅನುಷ್ಠಾನದ ವಿಚಾರವಾಗಿ, ಈಗಿನ ಜನಗಣತಿಯ ದತ್ತಾಂಶವನ್ನು ಬಳಸಿಕೊಂಡು ಇನ್ನೊಂದು ಬಾರಿ ಕ್ಷೇತ್ರ ಮರುವಿಂಗಡಣೆ ಕಾರ್ಯ ನಡೆಯಲಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

ಶಿಕ್ಷಣ ನೀತಿ: ಎಚ್ಚರ ಅಗತ್ಯ



ನಿರಂಜನಾರಾಧ್ಯ ವಿ.ಪಿ.

> ಶಿಕ್ಷಣ ನೀತಿ ಎನ್ನುವುದು ಭವಿಷ್ಯದ ನೀಲನಕ್ಷೆ. ಅದನ್ನು ಆಗಾಗ್ಗೆ ಬದಲಾಯಿಸುವುದು ಶೈಕ್ಷಣಿಕ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಹಾಗೂ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ. ವ್ಯಕ್ತಿ ಅಥವಾ ಕೆಲವರ ನಂಬಿಕೆಗಳ ಆಧಾರದಲ್ಲಿ ರಾಜ್ಯ–ದೇಶದ ನೀತಿಗಳನ್ನು ರೂಪಿಸುವುದು ಪ್ರಜಾಸತ್ತಾತ್ಮಕ ನಡೆಯಲ್ಲ.

ಶಿಕ್ಷಣ ನೀತಿಗಳನ್ನು ಏಕಪಕ್ಷೀಯ ನೆಲೆಯಲ್ಲಿ, ತಾತ್ಕಾಲಿಕ ರಾಜಕೀಯ ಲೆಕ್ಕಾಚಾರಗಳ ಆಧಾರದ ಮೇಲೆ ಸಮಗ್ರ ಸಮಾಲೋಚನೆಯಿಲ್ಲದೆ ರೂಪಿಸುವ ಪ್ರವೃತ್ತಿಯ ಬಗ್ಗೆ ಯುನೆಸ್ಕೊ ಸೇರಿದಂತೆ ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳು ಅಸಮಾಧಾನ, ಆತಂಕ ವ್ಯಕ್ತಪಡಿಸಿವೆ. ಶಿಕ್ಷಣ ಬರೀ ಆಡಳಿತಾತ್ಮಕ ಆದೇಶಗಳ ವಿಷಯವಲ್ಲ; ಅದು ವಿದ್ಯಾರ್ಥಿಗಳ, ಶಿಕ್ಷಕರ, ಪೋಷಕರ, ಸಮುದಾಯಗಳ, ತಜ್ಞರ ಹಾಗೂ ಸ್ಥಳೀಯ ಸರ್ಕಾರಗಳ ಸಕ್ರಿಯ ಭಾಗವಹಿಸುವಿಕೆಯಿಂದ ಸಾಮಾಜಿಕ-ಆರ್ಥಿಕ ವಾಸ್ತವದ ನೆಲೆಯಲ್ಲಿ, ಸಾರ್ವಜನಿಕ ನೀತಿಯ ಮೂಲಕ ರೂಪುಗೊಳ್ಳುವ ವ್ಯವಸ್ಥೆ ಎಂದು ಯುನೆಸ್ಕೊ ನೀತಿ ಪರಾಮರ್ಶೆಗಳು (2025) ಒತ್ತಿ ಹೇಳಿವೆ.

ಅಭಿಪ್ರಾಯಗಳನ್ನು ರೂಪಿಸಲು ಸಾಮರ್ಥ್ಯ ಇರುವ ಮಕ್ಕಳು ತಮ್ಮ ಬದುಕಿನ ಮೇಲೆ ಪರಿಣಾಮ ಬೀರುವ ವಿಷಯಗಳಲ್ಲಿ ಮುಕ್ತ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಹೊಂದಿದ್ದಾರೆ. ಸರ್ಕಾರಗಳು ನೀತಿ ನಿರೂಪಣೆಯಲ್ಲಿ ಮಕ್ಕಳ ಅಭಿಪ್ರಾಯಗಳಿಗೆ ಮಹತ್ವ ಹಾಗೂ ಮನ್ನಣೆ ನೀಡಬೇಕೆಂದು ವಿಶ್ವಸಂಸ್ಥೆಯ ಮಕ್ಕಳ ಒಡಂಬಡಿಕೆ ಸೂಚಿಸುತ್ತದೆ (ಆರ್ಟಿಕಲ್ 12, ಯುಎನ್‌ಸಿಆರ್‌ಸಿ). ಹೀಗಾಗಿ, ಏಕಪಕ್ಷೀಯತೆಯ ಶಿಕ್ಷಣ ನೀತಿ ಜನತಾಂತ್ರಿಕ ಮೌಲ್ಯಗಳಿಗೆ ವಿರುದ್ಧವಾದುದು. ಅಲ್ಲದೆ, ಶಿಕ್ಷಣದ ಗುಣಮಟ್ಟ, ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕೆ ಧಕ್ಕೆ ತರುವ ಅಪಾಯಕಾರಿ ಪ್ರವೃತ್ತಿಯಾಗಿದೆ. ಶಿಕ್ಷಣ ಸುಧಾರಣೆಗಳು ಬಹು-ಹಿತಾಸಕ್ತಿ ಹಾಗೂ ಸಹ-ಸೃಜನಾತ್ಮಕ ಪ್ರಕ್ರಿಯೆಗಳಾಗಬೇಕು; ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು, ನೀತಿ ನಿರೂಪಕರು, ತಜ್ಞರು ಮತ್ತು ಸಾಮಾಜಿಕ ಪಾಲುದಾರರ ಒಳಗೊಳ್ಳುವಿಕೆ ಮುಖ್ಯವೆಂದು ಯುನಿಸೆಫ್ (2024) ಒತ್ತಿ ಹೇಳುತ್ತದೆ

ಶಿಕ್ಷಣ ನೀತಿಗಳು ವ್ಯಕ್ತಿ ಅಥವಾ ಅಧಿಕಾರಶಾಹಿ ನೆಲೆಯಲ್ಲಿ ರೂಪಿಸುವ ಏಕಪಕ್ಷೀಯ ತೀರ್ಮಾನ ಆಗಬಾರದು. ಬದಲಿಗೆ, ಕೋಟ್ಯಂತರ ಮಕ್ಕಳ ಕನಸುಗಳಿಗೆ ದೀರ್ಘಕಾಲಿಕ ನೆಲೆಯಲ್ಲಿ ಭವಿಷ್ಯದ ಭಾಷ್ಯವನ್ನು ಬರೆಯುವ ಮುಂಗಾಣ್ಕೆಯ ನೀಲಿನಕ್ಷೆ ಆಗಬೇಕು. ಶಿಕ್ಷಣ ಕ್ಷೇತ್ರವನ್ನು ಕ್ಷಣಿಕ ಪ್ರತಿಕ್ರಿಯೆಗಳ ವೇದಿಕೆಯಾಗಿಸಿದರೆ, ಮಕ್ಕಳ ಭವಿಷ್ಯವನ್ನು ನಿರ್ಲಕ್ಷಿಸಿದಂತಾಗುತ್ತದೆ. ನಮ್ಮ ದೇಶದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಕ್ಷಣ ನೀತಿ, ಭಾಷೆ, ಪಠ್ಯಕ್ರಮ, ಪಠ್ಯಪುಸ್ತಕ, ಕಲಿಸುವ ವಿಷಯ, ಶಿಕ್ಷಕರ ನೇಮಕಾತಿ–ವರ್ಗಾವಣೆ, ಶಾಲಾ ದಾಖಲಾತಿಗೆ ಮಕ್ಕಳ ವಯಸ್ಸು, ಪರೀಕ್ಷೆ, ಇತ್ಯಾದಿಗಳೆಲ್ಲವೂ ಕ್ಷಣಾರ್ಧದಲ್ಲಿ ತೀರ್ಮಾನ ಆಗುತ್ತವೆ. ನಂತರ ಈ ತೀರ್ಮಾನಗಳು ರಾಜಕೀಯ ಸ್ವರೂಪ ಪಡೆದುಕೊಳ್ಳುತ್ತವೆ. ಈ ಸಿಕ್ಕಿನಲ್ಲಿ ಮಕ್ಕಳ ಬದುಕು–ಭವಿಷ್ಯ ಮಸುಕಾಗುತ್ತದೆ.

ನಮ್ಮ ಶಿಕ್ಷಣ ವ್ಯವಸ್ಥೆಯ ದೊಡ್ಡ ದುರಂತವೆಂದರೆ, ಶಿಕ್ಷಣಕ್ಕೆ ಸಂಬಂಧಿಸಿದ ನೀತಿಗಳನ್ನು ಹಕ್ಕು ಆಧಾರಿತ ನೆಲೆಯಲ್ಲಿ ಶಿಕ್ಷಣಶಾಸ್ತ್ರ, ಸಂಶೋಧನೆ, ಸಮಾಜದ ಅಗತ್ಯಗಳು ಮತ್ತು ಸಾಮಾಜಿಕ ಒಳಿತಿನ ನೆಲೆಯಿಂದ ಎಲ್ಲರನ್ನೊಳಗೊಳ್ಳುವ ಬಲಿಷ್ಠ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ರೂಪಿಸುವಂತೆ ಚರ್ಚಿಸುವ ಬದಲು–ವ್ಯಕ್ತಿಪ್ರತಿಷ್ಠೆ, ಅಧಿಕಾರಶಾಹಿಯ 'ಅಹಂ ಬ್ರಹ್ಮಾಸ್ಮಿ' ಮನೋಧೋರಣೆ ಹಾಗೂ ತಾತ್ಕಾಲಿಕ ರಾಜಕೀಯ ಪ್ರತಿಕ್ರಿಯೆಗಳ ನೆಲೆಯಲ್ಲಿ ಎಳೆದಾಡುವ ಪ್ರವೃತ್ತಿ ಬಲಗೊಂಡಿರುವುದು. ಸರ್ಕಾರಗಳು ಬದಲಾದಾಗ ನೀತಿಗಳನ್ನು ಬದಲಾಯಿಸುವುದು ಅಥವಾ ಹೊಸ ಯೋಜನೆಗಳನ್ನು ಘೋಷಿಸುವುದು ಚಟವಾಗಿದೆ. ಈ ಹುಚ್ಚಾಟದಲ್ಲಿ ಮಾನವ ಹಕ್ಕುಗಳು, ಸಂವಿಧಾನ, ಶಿಕ್ಷಣ ಹಕ್ಕು ಕಾಯ್ದೆ, ಶಿಕ್ಷಣ ಸಂಬಂಧಿ ನೀತಿ–ನಿಯಮಗಳನ್ನು ಗಾಳಿಗೆ ತೂರಲಾಗುತ್ತಿದೆ. ಇಂಥ ಮೋಜಿನಾಟದಲ್ಲಿ ಶಾಲೆಗಳು, ಶಿಕ್ಷಕರು, ಪಾಲಕರು, ಕೆಳಹಂತದ ಅಧಿಕಾರಿವರ್ಗ, ಸ್ಥಳೀಯ ಸರ್ಕಾರಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಮೂಲ ವಾರಸುದಾರರು ಬಲಿಪಶುವಾಗುತ್ತಾರೆ. ಕೆಳಹಂತದ ಸಿಬ್ಬಂದಿ ಹೇಗೆ ಮುಂದೆ ಸಾಗಬೇಕೆಂಬ ಮುನ್ನೋಟವನ್ನೇ ಕಳೆದುಕೊಳ್ಳುತ್ತಾರೆ. ಪಾಲಕರು–ಪೋಷಕರು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಂಡು ದೂರ ಸರಿಯಲಾರಂಭಿಸುತ್ತಾರೆ. ಸ್ಥಳೀಯವಾಗಿ ತೀರ್ಮಾನಿಸಿ ಆಡಳಿತ ನಡೆಸಬೇಕಾದ ಸ್ಥಳೀಯ ಆಡಳಿತ ವ್ಯವಸ್ಥೆ ಮೂಕ ಪ್ರೇಕ್ಷಕ ಆಗುತ್ತದೆ. ನಮ್ಮ ಶಾಲೆ ಮತ್ತು ಶಿಕ್ಷಣ ವ್ಯವಸ್ಥೆ ಪ್ರಯೋಗಗಳ ತಾಣವಾಗುತ್ತವೆ. ಇದು ಬದಲಾಗಬೇಕು.

ಶಿಕ್ಷಣ ಕ್ಷೇತ್ರವನ್ನು ನಿರಂತರವಾಗಿ ಅಸ್ಥಿರಗೊಳಿಸುವುದು ಅಪಾಯಕಾರಿ. ಸಂಚಾರ ನಿಯಮಗಳನ್ನು ದಿನವೂ ಬದಲಾಯಿಸಿದರೆ ಸಂಚಾರ ವ್ಯವಸ್ಥೆ ಅವ್ಯವಸ್ಥೆಯಾಗುತ್ತದೆ. ನ್ಯಾಯದ ಮಾನದಂಡಗಳನ್ನು ಆಗಾಗ ಬದಲಾಯಿಸಿದರೆ ನ್ಯಾಯಾಂಗದ ಮೇಲಿನ ನಂಬಿಕೆ ಕುಸಿಯುತ್ತದೆ. ಅದೇ ರೀತಿ ಶಿಕ್ಷಣದಲ್ಲಿ ನಿರಂತರ ಬದಲಾವಣೆಗಳು ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತವೆ. ಶಿಕ್ಷಕರಿಗೆ ಪ್ರತಿನಿತ್ಯ ಕಲಿಕೇತರ ಕೆಲಸವನ್ನು ವಹಿಸುವುದು ಕಲಿಕೆಯನ್ನು ಪಲ್ಲಟಗೊಳಿಸುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಹೊಸ ನೀತಿಗಳ ಫಲಿತಾಂಶಗಳು ತಕ್ಷಣಕ್ಕೆ ಕಾಣಿಸುವುದಿಲ್ಲ. ಉದಾಹರಣೆಗೆ, ವ್ಯವಸ್ಥೆಯಲ್ಲಿನ ಸಾಂಸ್ಥಿಕ ಪುನರ್‌ರಚನೆಯಾಗಲಿ, ಕಲಿಕಾ ಮಾಧ್ಯಮವಾಗಲಿ, ಆಂಗ್ಲ ಭಾಷಾ ಕಲಿಕೆಯಾಗಲಿ, ಪಠ್ಯಕ್ರಮ ಬದಲಾವಣೆಯಾಗಲಿ, ಮೌಲ್ಯಮಾಪನ ಕ್ರಮವಾಗಲಿ ಅಥವಾ ಮಕ್ಕಳ ಸುರಕ್ಷತಾ ಕ್ರಮಗಳಾಗಲಿ, ಪರಿಣಾಮ ಕಾಣಲು ವರ್ಷಗಳೇ ಬೇಕಾಗುತ್ತವೆ. ನೀತಿ ಜಾರಿಯಾದ ಐದು–ಹತ್ತು ವರ್ಷಗಳ ನಂತರ ಅದರ ಪರಿಣಾಮ ಕುರಿತಾದ ಅಧ್ಯಯನಗಳನ್ನು ನಡೆಸಿ ನೀತಿಯನ್ನು ಮುಂದುವರಿಸುವ, ಮಾರ್ಪಡಿಸುವ ಅಥವಾ ಬದಲಾಯಿಸುವ ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಯುಡೈಸ್ (2024–25) ಮಾಹಿತಿ ಪ್ರಕಾರ, ಪ್ರೌಢ ಮತ್ತು ಉನ್ನತ ಪ್ರೌಢ ಹಂತ ಹೊರತುಪಡಿಸಿದರೆ ಭಾರತದಲ್ಲಿ ಪ್ರಾಥಮಿಕ (ತರಗತಿ 1–5) ಮತ್ತು ಉನ್ನತ ಪ್ರಾಥಮಿಕ (ತರಗತಿ 6–8) ಹಂತದ ನಿವ್ವಳ ದಾಖಲಾತಿ ಸುಧಾರಿಸಿದೆ. ಆದರೆ, ದಾಖಲಾತಿ ಎಷ್ಟು ಮುಖ್ಯವೋ ದಾಖಲಾತಿ ಆಚೆಯ ಪ್ರಶ್ನೆಯೂ ಅಷ್ಟೇ ಮುಖ್ಯ. ಮಕ್ಕಳು ಕಲಿಯುತ್ತಿದ್ದಾರೆಯೆ ಎನ್ನುವ ಪ್ರಶ್ನೆಯದು. ಅಗತ್ಯ ಭಾಷಾ ಸಾಮರ್ಥ್ಯ ಗಳಿಸಿದ್ದಾರೆಯೆ? ಓದಿ ಅರ್ಥಮಾಡಿಕೊಳ್ಳುತ್ತಾರೆಯೆ? ಯೋಚಿಸಲು, ಪ್ರಶ್ನಿಸಲು, ವಿಶ್ಲೇಷಿಸಲು, ಸಮಾಜದ ಸಂಕೀರ್ಣತೆಗಳನ್ನು ಅರಿಯಲು ಶಿಕ್ಷಣ ನೆರವಾಗುತ್ತಿದೆಯೆ? ಉತ್ತಮ ನಾಗರಿಕರಾಗಿದ್ದಾರೆಯೆ? ಇತ್ಯಾದಿ ಪ್ರಶ್ನೆಗಳು ನೀತಿ ನಿರೂಪಣೆಯ ಜೀವಾಳವಾಗುತ್ತವೆ.

ದಾಖಲಾತಿ ಮತ್ತು ಹಾಜರಾತಿ ಚೆನ್ನಾಗಿದ್ದರೂ, ಕಲಿಕೆ ಗುಣಮಟ್ಟದಲ್ಲಿ ದೊಡ್ಡ ಕೊರತೆಗಳಿವೆ ಎಂಬುದನ್ನು ಅಧ್ಯಯನಗಳು ತೋರಿಸಿವೆ. ಪ್ರಾಥಮಿಕ ಶಿಕ್ಷಣ ಮುಗಿಸಿದ ಬಹುತೇಕ ಮಕ್ಕಳಿಗೆ ಕನಿಷ್ಠ ಓದಲು, ಬರೆಯಲು ಮತ್ತು ಗ್ರಹಿಸಲು ಬರುತ್ತಿಲ್ಲವೆಂಬುದು ಈಗ ಗುಟ್ಟಾಗಿ ಉಳಿದಿಲ್ಲ. ಪ್ರಾಥಮಿಕ ಶಿಕ್ಷಣವೇಕೆ, ಪದವಿ ಶಿಕ್ಷಣ ಪಡೆದವರಿಗೂ ನಿರ್ದಿಷ್ಟ ವಿಷಯದಲ್ಲಿ ಪುಟದಷ್ಟು ಬರವಣಿಗೆ ಮಾಡುವ ಸಾಮರ್ಥ್ಯ ಇಲ್ಲವೆಂಬುದನ್ನು ಅಧ್ಯಯನಗಳು ನಿರೂಪಿಸಿವೆ. ಕನ್ನಡ ಪ್ರಾಧ್ಯಾಪಕರೊಬ್ಬರು ವಿದ್ಯಾರ್ಥಿಗಳಿಗೆ 'ಕನ್ನಡ ಕಾಗುಣಿತ' ಹೇಳಿಕೊಡುತ್ತಿರುವ ವಿಷಯ ಕೇಳಿ ದಿಗ್ಭ್ರಮೆಯಾಯಿತು. ಇದರರ್ಥ ಸ್ಪಷ್ಟ. ನಮಗೆ ಬೇಕಿರುವುದು ಘೋಷಣಾತ್ಮಕ ಶಿಕ್ಷಣ ಸುಧಾರಣೆ ಅಲ್ಲ. ಅಗತ್ಯವಿರುವುದು, ಈಗಿನ ಕಲಿಕಾ ಸಂಕಷ್ಟ ಸುಧಾರಿಸಿ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಖಾತರಿಗೊಳಿಸುವ ದೀರ್ಘಕಾಲಿಕ ಪರಿಹಾರ.

ಯುನೆಸ್ಕೊ ಮುಂತಾದ ಅಂತರರಾಷ್ಟ್ರೀಯ ಸಂಸ್ಥೆಗಳು ಬಹುಕಾಲದಿಂದ ಹೇಳುತ್ತಿರುವ ಮಾತನ್ನು ನಾವು ಮತ್ತೆ ಮತ್ತೆ ಕೇಳಿಸಿಕೊಳ್ಳಬೇಕಾಗಿದೆ. ಶಿಕ್ಷಣ ನೀತಿ ಎಂದರೆ ಸಾಕ್ಷ್ಯಾಧಾರಿತ ನಿರ್ಧಾರ. ಸಂಶೋಧನೆ, ಅಂಕಿ–ಅಂಶ, ಕಲಿಕೆಯ ಸಮೀಕ್ಷೆಗಳು, ಶಿಕ್ಷಕರ ಸ್ಥಿತಿ, ಭಾಷಾ ಹಿನ್ನೆಲೆ, ಪ್ರಾದೇಶಿಕ ಅಸಮಾನತೆ, ಮತ್ತು ಮಕ್ಕಳ ವಾಸ್ತವ ಅನುಭವ – ಇವೆಲ್ಲದರ ಆಧಾರದ ಮೇಲೆ ರೂಪುಗೊಳ್ಳುವ ನಿರಂತರ ಪ್ರಕ್ರಿಯೆ. ಸುದ್ದಿ ಶೀರ್ಷಿಕೆ ನೋಡಿ ತಕ್ಷಣ ನೀತಿ ಬದಲಾಯಿಸುವುದು ಶಿಕ್ಷಣ ಸುಧಾರಣೆ ಅಲ್ಲ. ಒತ್ತಡಗಳಿಗೆ ಮಣಿದು ಪಠ್ಯಕ್ರಮ ತಿದ್ದುವುದು ದೂರದೃಷ್ಟಿಯಲ್ಲ. ಆಂಗ್ಲ ಮಾಧ್ಯಮ ಮಾಡಿದರೆ ಇಂಗ್ಲಿಷ್ ಕಲಿಯುತ್ತಾರೆಂಬುದು ನಿಜವಲ್ಲ. ಕಣ್ಗಾವಲು ವ್ಯವಸ್ಥೆಯ ಮೂಲಕ ಪರೀಕ್ಷೆ ನಡೆಸುವುದು ಮಕ್ಕಳಿಗೆ ನೈತಿಕತೆಯನ್ನು ಕಲಿಸುವುದಿಲ್ಲ. ವ್ಯಕ್ತಿ ಅಥವಾ ಕೆಲವೇ ವ್ಯಕ್ತಿಗಳ ವೈಯಕ್ತಿಕ ನಂಬಿಕೆಯ ನೆಲೆಯಲ್ಲಿ ರಾಷ್ಟ್ರ–ರಾಜ್ಯದ ನೀತಿಗಳನ್ನು ರೂಪಿಸುವುದು ಪ್ರಜಾಸತ್ತಾತ್ಮಕವಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಅಗತ್ಯ ಸಂಖ್ಯೆಯ ಶಿಕ್ಷಕರ ಲಭ್ಯತೆಯಿಲ್ಲದೆ ಯಾವುದೇ ಸುಧಾರಣೆ ಪೂರ್ಣವಾಗದು. ದೇಶದಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ 9,86,565. ಪ್ರಾಥಮಿಕ ಹಂತದಲ್ಲಿ 7,47,565, ಸೆಕೆಂಡರಿ ಹಂತದಲ್ಲಿ 1,46,334 ಮತ್ತು ಉನ್ನತ ಸೆಕೆಂಡರಿ ಹಂತದಲ್ಲಿ 92,666 ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ಸಂಸತ್ತಿನ ಸ್ಥಾಯಿ ಸಮಿತಿ ವರದಿ ದಾಖಲಿಸಿದೆ (2025, ಪ್ಯಾರಾ 3.4.32). ಕರ್ನಾಟಕದಲ್ಲಿ ಇತ್ತೀಚೆಗಷ್ಟೆ ಕೊನೆಗೊಂಡ ವಿಧಾನಸಭಾ ಅಧಿವೇಶನದಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತವಾಗಿ ಉತ್ತರಿಸಿರುವಂತೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿನ ಒಟ್ಟು ಖಾಲಿ ಹುದ್ದೆಗಳು 79,694. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವಾಗ ಗುಣಾತ್ಮಕ ಶಿಕ್ಷಣ ಸಾಧ್ಯವೆ?

ಪದೇ ಪದೇ ನೀತಿ ಬದಲಾಯಿಸಿ, ಪಠ್ಯಕ್ರಮ ಪರಿಷ್ಕರಿಸಿ, ವರ್ಷದಲ್ಲಿ ಹಲವು ಬಾರಿ ಬೋರ್ಡ್ ಪರೀಕ್ಷೆ ನಡೆಸಿ, ಇರುವ ಶಿಕ್ಷಕರು ಕಲಿಸಲಾಗದ ರೀತಿಯಲ್ಲಿ ಮೇಲಿಂದ ಮೇಲೆ ಕಲಿಕೇತರ ಕೆಲಸಗಳ ಆದೇಶಗಳನ್ನು ಹೊರಡಿಸಿದರೆ ಗುಣಮಟ್ಟದ ಶಿಕ್ಷಣ ಹೇಗೆ ಸಾಧ್ಯ? ಶಿಕ್ಷಣ ನೀತಿ ಕ್ಷಣಿಕ ಪ್ರತಿಕ್ರಿಯೆಯಲ್ಲ. ಅದು, ಸಾಕ್ಷ್ಯಾಧಾರಿತ ಸಂಶೋಧನೆಯನ್ನಾಧರಿಸಿದ ದೀರ್ಘಕಾಲಿಕ ಮುಂಗಾಣ್ಕೆ, ಭವಿಷ್ಯದ ನೀಲನಕ್ಷೆ.



ವಾಚಕರ ವಾಣಿ

ರಾಜ್ಯದ ಋಣಭಾರ: ರಾಜ್ಯಪಾಲರ ಮೌನ

ರಾಜ್ಯಪಾಲರು ದಿಲ್ಲಿ ಸರ್ಕಾರಿ ದರ್ಬಾರಿನ ಚರಣಸೇವೆ ಮಾಡುವ ಆತುರದಲ್ಲಿ ಕರ್ನಾಟಕದ ನೆಲಕ್ಕೆ ಅಪಚಾರ ಎಸಗುತ್ತಿರುವುದು ದುರಂತವೇ ಸರಿ. ರಾಜ್ಯಪಾಲರಿಗೆ ತಾವು ಬಿಡಾರ ಹೂಡಿರುವುದು ಕರ್ನಾಟಕದಲ್ಲಿ ಎಂಬ ಪರಿವೆ ಇದ್ದಂತಿಲ್ಲ. ಕುಡಿಯುತ್ತಿರುವ ನೀರು ಕರ್ನಾಟಕದಲ್ಲಿ ಹರಿಯುವ ನದಿಗಳದ್ದು ಎಂಬ ಋಣಭಾವ ಎಳ್ಳಷ್ಟಾದರೂ ಇದ್ದಿದ್ದರೆ ಹಿಂದಿಯ ಪರವಾಗಿ, ಕನ್ನಡದ ವಿರೋಧಿಯಾಗಿ ರಾಜ್ಯದ ಆಂತರಿಕ ನೀತಿಯಲ್ಲಿ ಮೂಗು ತೂರಿಸುತ್ತಿರಲಿಲ್ಲ. ರಾಜ್ಯ ಸರ್ಕಾರವು ಶಾಲೆಗಳಲ್ಲಿ ಹಿಂದಿಗೆ ಸಿಗುತ್ತಿರುವ ಮಾನ್ಯತೆ ರದ್ದುಪಡಿಸಬೇಕು. ಜೊತೆಗೆ, ಹಿಂದಿ ಹೇರುವ ಮಂದಿಯನ್ನು ತರಾಟೆಗೆ ತೆಗೆದುಕೊಳ್ಳಬೇಕಿದೆ. ರಾಜ್ಯಪಾಲ ಥಾವರಚಂದ್ ಅವರು ರಾಜ್ಯದ ತಾವರೆಕೆರೆ ಅಥವಾ ತಾವರೆಕೊಪ್ಪದವರೋ ಆದ ದಿನ ಕೇಂದ್ರದಿಂದ ರಾಜ್ಯಕ್ಕೆ ಆಗುತ್ತಿರುವ ಆಡಳಿತಾತ್ಮಕ ಅನ್ಯಾಯ ಎದುರಿಸಲು ಸಾಧ್ಯ ಆಗಬಹುದು.

ಶ್ರೀಕಂಠ, ಬೆಂಗಳೂರು

ಉಚಿತ ಟಿಕೆಟ್ ಮತ್ತು ಅಸಂಬದ್ಧ ಪ್ರಲಾಪ

ಶಾಸಕರಿಗೆ ಉಚಿತವಾಗಿ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಟಿಕೆಟ್‌ಗಳ ನೀಡಿಕೆಗೆ ಸಂಬಂಧಿಸಿದಂತೆ ವೃಥಾ ಚರ್ಚೆ ನಡೆಯುತ್ತಿದೆ. 564 ಟಿಕೆಟ್‌ಗಳಲ್ಲಿ 9 (ಮೂವರು ಶಾಸಕರ ಪಾಲು) ಟಿಕೆಟ್‌ಗಳು ಇನ್ನೂ ವಿತರಣೆಯಾಗಿಲ್ಲವೆಂದು ಸಭಾಧ್ಯಕ್ಷರ ಕಚೇರಿ ತಿಳಿಸಿದೆ. ಆದರೆ, ಉಚಿತ ಟಿಕೆಟ್ ವಿರೋಧಿಸಿ ಅನೇಕ ಶಾಸಕರು ಮಾತನಾಡುತ್ತಿದ್ದಾರೆ. ಜೆಡಿಎಸ್‌ನ ಎಲ್ಲ ಶಾಸಕರೂ ಟಿಕೆಟ್ ಪಡೆದಿದ್ದಾರೆ. ಆದರೆ, ಆ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿಯವರು ಅಸಂಬದ್ಧವಾಗಿ ಮಾತನಾಡಿದ್ದಾರೆ. ವಿಪಕ್ಷದ ನಾಯಕರೇ ಟಿಕೆಟ್ ಪಡೆದಿದ್ದರೂ ಅವರ ಪಕ್ಷದ ಕೆಲವು ಶಾಸಕರು ಸಂತರಂತೆ ಮಾತನಾಡುತ್ತಿರುವುದು ವ್ಯಂಗ್ಯವೇ ಸರಿ.

ಪ್ರಮೋದ ನಾಯ್ಕ, ಬೆಂಗಳೂರು

ಬಸ್ ಪ್ರಯಾಣಿಕರ ಮೇಲೆ ದಯೆ ಇರಲಿ

ಸರ್ಕಾರಿ ಬಸ್ಸಿನಲ್ಲಿ ಪ್ರಯಾಣಿಸುವಾಗ 'ಪ್ರಾಣಿಗಳ ಮೇಲೆ ದಯೆ ಇರಲಿ' ಎಂಬ ವಾಕ್ಯ ಸಾಮಾನ್ಯವಾಗಿ ಕಣ್ಣಿಗೆ ಬೀಳುತ್ತದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಪ್ರತಿದಿನವೂ ಜನಜಂಗುಳಿಯಿಂದ ಸಾಗುವ ಬಸ್‌ಗಳು ಸರ್ವೇಸಾಮಾನ್ಯ. ಹಳ್ಳಿಗಳಿಗೆ ದಿನಕ್ಕೆರಡು ಅಥವಾ ಮೂರು ಸಲ ಮಾತ್ರ ಚಲಿಸುವ ಬಸ್‌ಗಳಲ್ಲಿ ವಿದ್ಯಾರ್ಥಿಗಳು, ಕೂಲಿಕಾರರು, ಹಿರಿಯರು ಸದಾ ಕಾಲ ನಿಂತೇ ಪ್ರಯಾಣಿಸುವಂಥ ಪರಿಸ್ಥಿತಿ ಇರುತ್ತದೆ. ಬಾಗಿಲಿನಲ್ಲೇ ನಿಂತು ಪ್ರಯಾಣಿಸುವ ಸ್ಥಿತಿಯೂ ಸರ್ವೇಸಾಮಾನ್ಯ. ಬಸ್‌ಗಳಲ್ಲಿ ಪ್ರಾಣಿಗಳ ಮೇಲೆ ದಯೆ ತೋರುವ ಸ್ಟಿಕರ್ ಅಂಟಿಸುವ ಜೊತೆಗೆ ಪ್ರಯಾಣಿಕರ ಸುರಕ್ಷತೆಗೂ ಗಮನ ಹರಿಸಲಿ.

ನಾಗಾರ್ಜುನ ಹೊಸಮನಿ, ಕಲಬುರಗಿ

ಕೌಶಲ ಜ್ಞಾನ ಹೊಂದಿದ ಶಿಕ್ಷಕರ ಕೊರತೆ

ಪ್ರಸಕ್ತ ಶೈಕ್ಷಣಿಕ ಸಾಲಿನ ಪೂರ್ವ ತಯಾರಿಗಾಗಿ ರಾಜ್ಯದಲ್ಲಿ ಖಾಸಗಿ ಶಾಲೆಗಳು ಶಿಕ್ಷಕರ ನೇಮಕಾತಿಯಲ್ಲಿ ತೊಡಗಿವೆ. ಆದರೆ, ರಾಜ್ಯದಲ್ಲಿ ಗುಣಮಟ್ಟದ ಶಿಕ್ಷಕರ ಕೊರತೆ ತಲೆದೋರಿದೆ. ಟಿಇಟಿ, ಪದವಿ ಇತ್ಯಾದಿ ಅರ್ಹತೆಗಳೇನೋ ಪಡೆದಿರುತ್ತಾರೆ ನಿಜ. ಆದರೆ, ಕನ್ನಡದ ಸರಳ ವ್ಯಾಕರಣವಾಗಲಿ, ಗಣಿತದ ಮೂಲಭೂತ ಪರಿಕಲ್ಪನೆಗಳ ಜ್ಞಾನವಾಗಲಿ ಅಭ್ಯರ್ಥಿಗಳಲ್ಲಿ ಕಾಣಸಿಗುತ್ತಿಲ್ಲ. ವಿಶೇಷ ಎಂದೆನಿಸುವ ಕೌಶಲಗಳಿಲ್ಲ. ಹೀಗಾಗಿ ಬಹುತೇಕ ಖಾಸಗಿ ಶಾಲೆಗಳು ಪಕ್ಕದ ಕೇರಳ, ಆಂಧ್ರಪ್ರದೇಶದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ಥಿತಿ ಬಂದೊದಗಿದೆ. ಆದರೆ, ಅವರಿಗೆ ಭಾಷೆ, ವಿಷಯ ಜ್ಞಾನ ಚೆನ್ನಾಗಿದ್ದರೂ ಗ್ರಾಮೀಣ ಭಾಗದ ಮಕ್ಕಳ ಬಗ್ಗೆ ಒಲವು ಇರುವುದಿಲ್ಲ. ರಾಜ್ಯದಲ್ಲಿ 200ಕ್ಕೂ ಹೆಚ್ಚು ಶಿಕ್ಷಕರ ತರಬೇತಿ ಸಂಸ್ಥೆಗಳಿದ್ದರೂ ಗುಣಮಟ್ಟದ ಶಿಕ್ಷಕರನ್ನು ತರಬೇತಿಗೊಳಿಸುವಲ್ಲಿ ಸೋಲುತ್ತಿರುವುದು ಏಕೆ?

ಸುರೇಂದ್ರ ಪೈ, ಭಟ್ಕಳ

ಸಿಬಿಎಸ್‌ಸಿ ಶಾಲೆ: ಕನ್ನಡ ಕಡ್ಡಾಯಗೊಳಿಸಿ

ಪ್ರಸಕ್ತ ಸಾಲಿನಿಂದ ಸಿಬಿಎಸ್‌ಇ ಪಠ್ಯಕ್ರಮ ಅನುಸರಿಸುವ ಶಾಲೆಗಳಲ್ಲಿ 6ನೇ ತರಗತಿಯಿಂದ ತ್ರಿಭಾಷಾ ಸೂತ್ರ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು ಆದೇಶಿಸಿದೆ. ಕಳೆದ ವರ್ಷದ ಮೇ ತಿಂಗಳಲ್ಲಿ ಸಿಬಿಎಸ್‌ಇ ಶಾಲೆಗಳಲ್ಲಿ ಒಂದರಿಂದ ಐದನೇ ತರಗತಿವರೆಗೆ ಮಾತೃಭಾಷಾ ಮಾಧ್ಯಮದಲ್ಲಿ ಕಲಿಕೆಗೆ, ಅದು ಸಾಧ್ಯವಾಗದಿದ್ದರೆ ಆಯಾ ರಾಜ್ಯದ ಪ್ರಾದೇಶಿಕ ಭಾಷಾ ಮಾಧ್ಯಮದಲ್ಲಿ ಕಲಿಕೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿತ್ತು. ಈ ಸೂಚನೆಗಳನ್ನು ಸಿಬಿಎಸ್‌ಇ ಶಾಲೆಗಳು ಅಳವಡಿಸಿಕೊಂಡಿರುವ ಬಗ್ಗೆ ಪರಿಶೀಲಿಸಬೇಕಿದೆ. ಅದನ್ನು ಖಾತರಿಪಡಿಸಿಕೊಂಡು ಆರನೇ ತರಗತಿಗೆ ಮೂರನೇ ಭಾಷೆ ಕಲಿಕೆ ಅಳವಡಿಸುವುದನ್ನು ಕಡ್ಡಾಯಗೊಳಿಸಬೇಕು. ಆಯಾ ರಾಜ್ಯ ಭಾಷೆ ಕಡ್ಡಾಯವಾಗಿ ತ್ರಿಭಾಷಾ ಸೂತ್ರದ ಭಾಗವಾಗಿ ಇರುವುದನ್ನೂ ಖಚಿತಗೊಳಿಸಬೇಕಿದೆ. ಜೊತೆಗೆ ಕರ್ನಾಟಕದಲ್ಲಿರುವ ಈ ಶಾಲೆಗಳಲ್ಲಿ ಆರಂಭಿಕ ಹಂತದ ಶಿಕ್ಷಣವು ಕನ್ನಡ ಮಾಧ್ಯಮದಲ್ಲಿ ಇರುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯು ರಾಜ್ಯ ಸರ್ಕಾರದ ಮೇಲಿದೆ.

ವೆಂಕಟೇಶ ಮಾಚಕನೂರ, ಧಾರವಾಡ

ಕಾರ್ಖಾನೆಗಳ ದೂಳಿಗೆ ಕಪ್ಪಾದ ಬದುಕು

'**ಬದುಕು** ನುಂಗಿದ ಕರಿದೂಳು' ವರದಿಯು (ಒಳನೋಟ, ಪ್ರ.ವಾ., ಏ. 5) ಕೊಪ್ಪಳ ಜಿಲ್ಲೆಯ ಜನರು ಅನುಭವಿಸುತ್ತಿರುವ ನರಕಯಾತನೆಯನ್ನು ತೆರೆದಿಟ್ಟಿದೆ. 'ಕೋರ್ಟು ಯಾರಿಗೋ ದಯಾಮರಣ ಕೊಟ್ಟೈತಂತಲ್ರೀ ನಮಗೂ ಸಿಗುತ್ತೇನ್ರಿ' – ಯಪ್ಪಾ, ಹಳ್ಳಿಗರು ಈ ಮಾತು ಹೇಳಬೇಕಾದರೆ ಆ ಜೀವಗಳು ಎಷ್ಟು ನೊಂದಿರಬೇಕು? ಗಾಳಿ, ನೀರು, ಮಣ್ಣು ಎಲ್ಲವೂ ಕಲುಷಿತಗೊಂಡರೆ ಬದುಕು ಉಳಿಯುವುದಾದರೂ ಹೇಗೆ? ಅಲ್ಲಿನವರ ಒಬ್ಬೊಬ್ಬರ ಬದುಕು ನೋವು-ಸಂಕಟಗಳ ಮೂಟೆ ಆಗಿದೆ. ಮಾರಣಾಂತಿಕ ರೋಗಗಳು ಆವರಿಸಿಕೊಂಡು ನರಳಾಡುತ್ತಿರುವ ಜೀವಗಳ ಸಂಕಟ ಯಾರಿಗೂ ತಟ್ಟುತ್ತಿಲ್ಲವೇ? ಇನ್ನೆಷ್ಟು ದಿನ ಜನರು ಹೋರಾಟ ಮಾಡಬೇಕು. ಜೀವಪರ ಕಾಳಜಿಗೆ ಇಷ್ಟೊಂದು ನಿರ್ಲಕ್ಷ್ಯವೇ? ಈ ಗ್ರಾಮಗಳಲ್ಲಿನ ವೇದನೆ, ನೋವು, ಸಂಕಟ ಯುದ್ಧಪೀಡಿತ ಪ್ರದೇಶಗಳಿಗಿಂತಲೂ ಭೀಕರ.

ಪ್ರಾಣೇಶ್ ಪೂಜಾರ್, ಗಿಣಿಗೇರ

ಕನ್ನಡ ನೆಲಕ್ಕೆ ಅಪಾಯ



ಇಡೀ ದೇಶದ ಜನರು ಕರ್ನಾಟಕದಲ್ಲಿ ಪವಡಿಸಿ ಅವರದೇ ಸಾಮ್ರಾಜ್ಯ ಸೃಷ್ಟಿ ಮಾಡುತ್ತಿದ್ದಾರೆ. ಅವರ ಭಾಷೆಯನ್ನೇ ಕಲಿಸುತ್ತಾ ನಮ್ಮವರ ನಡುವೆ ಹುಸಿಭಾವನೆ ಬಿತ್ತುತ್ತಿದ್ದಾರೆ. ಕನ್ನಡಿಗರ ದೌರ್ಬಲ್ಯ ತಿಳಿದು ಸವಾರಿ ಮಾಡುತ್ತಿದ್ದಾರೆ. ನಾಳೆ ನಮ್ಮದೇ ರಾಜ್ಯ ಎಂದರೂ ಆಶ್ಚರ್ಯವಿಲ್ಲ.

ನಾಗಸ್ವಾಮಿ ಮುತ್ತಿಗೆ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಜನರನ್ನು ಸಂಕಷ್ಟದಿಂದ ಮುಕ್ತರನ್ನಾಗಿಸುವ ಬದಲು, ಸಂಕಷ್ಟವನ್ನೇ ಸಾಲುಗಟ್ಟಿ ನಿಲ್ಲಿಸುವ ವ್ಯವಸ್ಥೆಯಾಗಿ ಪರಿವರ್ತಿಸಿದ್ದೇ ಪ್ರಧಾನಿ ನರೇಂದ್ರ ಮೋದಿಯವರ ಸಾಧನೆಯಾಗಿದೆ. ಬಿಜೆಪಿಯ ದುರಾಡಳಿತದ 'ಮಾಸ್ಟರ್ ಸ್ಟ್ರೋಕ್'ಗಳಿಗೆ ದೇಶದ ಜನ ತತ್ತರಿಸುವಂತಾಗಿದೆ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

ಚುರುಮುರಿ

ಬದುಕಿನ ಭಾಷೆ



• ಸುಮಂಗಲಾ

'**ನಾವು** ಹೈಸ್ಕೂಲಿನಲ್ಲಿದ್ದಾಗ ಮೂರನೇ ಭಾಷೆ ಹಿಂದಿ ಉರು ಹೊಡೆದು ಕಷ್ಟಬಿದ್ದು ಪಾಸಾಗಿದ್ದವಿ. ಸದ್ಯ... ಈಗ ಅದೇನೋ ಗ್ರೇಡಿಂಗ್ ವ್ಯವಸ್ಥೆ ಮಾಡ್ಯಾರಂತೆ' ಎಂದೆ ಸುದ್ದಿ ಓದುತ್ತ.

'ಹಿಂದಿ ಕಲೀದಿದ್ದವರು ಹಿಂದುಳಿತಾರೆ, ತಿಳಕೋ!' ಎಂದು ಬೆಕ್ಕಣ್ಣ ಮೂತಿ ಮುರಿಯಿತು.

'ಹೋಗಲೇ... ಮಾತೃಭಾಷೆ ಕನ್ನಡ, ಹೊರಗಿನ ವ್ಯವಹಾರಕ್ಕೆ ಇಂಗ್ಲಿಷ್, ಎರಡು ಸಾಕು. ಹುಡುಗ್ರು ಬದುಕಿನ ಭಾಷೆ ಕಲೀಬಕು' ಎಂದೆ.

'ನಮ್ ಹುಡುಗ್ರು ಐಎಎಸ್, ಐಪಿಎಸ್ ಹಿಂತಾದೆಲ್ಲ ಮಾಡಿ, ಉತ್ತರ ಭಾರತದ ಕಡಿಗಿ ಕೆಲಸ ಮಾಡಕ್ಕೆ ಹೋದ್ರೆ ಹಿಂದಿ ಬರಲಿಕ್ಕಂದ್ರ ಏನು ಕಥಿ? ಅಲ್ಯಾವ ಭಾಷೆ ಮಾತಾಡತಾರೆ?' ಬೆಕ್ಕಣ್ಣ ಜೋರಾಗಿ ವಾದಿಸಿತು.

'ಅವ್ರು ಐಎಎಸ್, ಐಪಿಸ್ಸಿಗೆ ಕೋಚಿಂಗ್ ತಗಳೂವಾಗ ಹಿಂದಿನೂ ಕಲಿತಾರೇಳು. ಉತ್ತರ ಭಾರತದ ಕಡಿಂದ ಪ್ರತಿವರ್ಷ ಲಕ್ಷಗಟ್ಟಲೆ ಮಂದಿ ಬೆಂಗಳೂರಿಗೆ ಕೆಲಸ ಮಾಡಕ್ಕೆ ಬರತಾರೆ. ಬಂದೋರು ಇಲ್ಲೆ ಸೆಟಲ್ ಆಗತಾರೆ. ಹಿಂಗಾಗಿ ಅಲ್ಲಿ ಸಾಲಿವಳಗೆ ಕನ್ನಡ ಕಲಿಸಬಕು' ಎಂದೆ.

'ಹಿಂದಿ ರಾಷ್ಟ್ರಭಾಷೆ... ನೆಹರೂ, ಇಂದಿರಾಗಾಂಧಿ ಎಲ್ಲಾರೂ ತ್ರಿಭಾಷಾ ಸೂತ್ರ ಹೇಳಿದ್ದರು' ಬೆಕ್ಕಣ್ಣ ಗುರುಗುಟ್ಟಿತು.

'ಉಳಿದೆಲ್ಲ ವಿಚಾರಕ್ಕೆ ನೆಹರೂ, ಇಂದಿರಾಗಾಂಧಿಗೆ ಬೈತಾ ಇರತೀಯ. ತ್ರಿಭಾಷಾ ಸೂತ್ರಕ್ಕೆ ಮಾತ್ರ ಅವರು ನೆನಪಾಗತಾರೇನು? ಉತ್ತರದವರು ದಕ್ಷಿಣ ಭಾರತದ ಒಂದು ಭಾಷೆ ಕಲಿಬಕು ಅಂತನೂ ನೆಹರೂ ಹೇಳಿದ್ದರು.' ನಾನು ನೆನಪಿಸಿದೆ.

'ಅಲ್ಲಿ ದಕ್ಷಿಣ ಭಾರತದ ಭಾಷೆ ಮಾತಾಡೋರು ಯಾರೂ ಇಲ್ಲವಲ್ಲ!' ಬೆಕ್ಕಣ್ಣ ನಕ್ಕಿತು.

'ಮತ್ತ ಇಲ್ಲಿ ಹಿಂದಿ ಮಾತಾಡೋರು ಯಾರದಾರೆ? ಉತ್ತರದವ್ರಿಗೆ ದ್ವಿಭಾಷೆ, ಕರುನಾಡಿಗೆ ತ್ರಿಭಾಷೆ! ಇದ್ಯಾವ ನ್ಯಾಯ? ಅಲ್ಲಿಯ ಸಾಲಿವಳಗೆ ದಕ್ಷಿಣ ಭಾರತದ ಒಂದು ಭಾಷೆ ಕಲಿಸಿದರೆ ಅವ್ರಿಗೇ ಲಾಭ. ಎದಕ್ಕಂದ್ರ ಸಾಲಿ ಕಲಿತ ಅರ್ಧಕ್ಕರ್ಧ ಮಂದಿ ದಕ್ಷಿಣದ ಕಡಿಗಿ ಕೆಲಸಕ್ಕೆ ಬರತಾರೆ.' ನಾನು ಪಟ್ಟುಬಿಡದೇ ವಾದಿಸಿದೆ.

ಬೆಕ್ಕಣ್ಣ ಬಾಲಮುದುರಿ ಗಪ್ಪಾಯಿತು!

25 ವರ್ಷಗಳ ಹಿಂದೆ

ಶುಕ್ರವಾರ, 6-4-2001

• **ಬಾಬೂಜಿ ಜನ್ಮ ದಿನಾಚರಣೆ ಸಭೆಯಲ್ಲಿ ಗದ್ದಲ; ಇರಿತ**

ಮೈಸೂರು, ಏ. 5– ಮಾಜಿ ಉಪ ಪ್ರಧಾನಿ ದಿವಂಗತ ಬಾಬೂ ಜಗಜೀವರಾಂ ಅವರ 94ನೇ ಜನ್ಮ ದಿನಾಚರಣೆ ಪ್ರಯುಕ್ತ ಜಿಲ್ಲಾಡಳಿತ ಇಂದು ಪುರಭವನದಲ್ಲಿ ಏರ್ಪಡಿಸಿದ್ದ ಸಮಾರಂಭದ ವೇಳೆ ಗೊಂದಲ, ತಳ್ಳಾಟ, ಹೊಡೆದಾಟ ಹಾಗೂ ಕೊನೆಗೆ ಹೊರಗೆ ಕಾಂಗ್ರೆಸ್ ಕಾರ್ಯಕರ್ತರೊಬ್ಬರಿಗೆ ಇರಿದ ಪ್ರಸಂಗವೂ ಸಂಭವಿಸಿತು.

ಪುರಭವನದ ಹೊರ ಆವರಣದ ಗಾಂಧೀಚೌಕದ ಬಳಿ ದಲಿತರ ಎರಡು ಗುಂಪುಗಳ ನಡುವೆ ಘರ್ಷಣೆ ಉಂಟಾಯಿತು. ಸಮಾರಂಭಕ್ಕೆ ಸರಿಯಾದ ಪ್ರಚಾರ ನೀಡಿಲ್ಲ ಎಂಬ ಕಾರಣದಿಂದ ಕೆರಳಿದ 'ಮಾದಿಗರ ಹೋರಾಟ ಸಮಿತಿ' ನೇತೃತ್ವದ ಒಂದು ಗುಂಪು ಮತ್ತು ಅದರ ವಿರೋಧಿ ಗುಂಪಿನ ನಡುವೆ ಘರ್ಷಣೆ ನಡೆಯಿತು.

• **ಜೆಡಿ(ಯು)ನಿಂದ ನೀರಾ ಇಳಿಸುವ ಆಂದೋಲನ**

ಬೆಂಗಳೂರು, ಏ. 5– ನುಸಿಪೀಡಿತ ತೆಂಗಿನ ಮರದಿಂದ ನೀರಾ ಇಳಿಸಲು ಅನುಮತಿ ಕೋರಿ ಜನತಾದಳ (ಯು) ಏಪ್ರಿಲ್ 16ರಂದು ಚಿಕ್ಕನಾಯಕನಹಳ್ಳಿಯಲ್ಲಿ ಬಹಿರಂಗವಾಗಿ ಹೆಂಡ ಇಳಿಸುವ ಆಂದೋಲನವನ್ನು ಆರಂಭಿಸಲಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ. ಭೈರೇಗೌಡ ಇಂದು ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 6-4-1951

• **'ನಾನೊಬ್ಬ ಕಸ ಗುಡಿಸುವವ'**

ದೆಹಲಿ, ಏ. 5– ಭಾರತ ಸರ್ಕಾರದ ಗೃಹ ಸಚಿವ ಸಿ. ರಾಜಗೋಪಾಲಚಾರಿಯವರು ತಮ್ಮ ಪದವಿಯನ್ನು ಜಾಡಮಾಲಿಯ ಕೆಲಸಕ್ಕೆ ಹೋಲಿಸಿಕೊಂಡರು.

ಪಾರ್ಲಿಮೆಂಟ್‌ನಲ್ಲಿಂದು ಗೃಹ ಸಚಿವ ಶಾಖೆಯ ಬೇಡಿಕೆಗಳ ಬಗ್ಗೆ ನಡೆದ ಚರ್ಚೆಗೆ ಉತ್ತರ ಕೊಡುತ್ತಿದ್ದಾಗ ಅವರು, ಗೊತ್ತಾದ ಕಾಲಕ್ಕಿಂತಲೂ 15 ನಿಮಿಷ ಹೆಚ್ಚಾಗಿ ಉಪಯೋಗಿಸಿಕೊಂಡರೆಂದೂ ಅದರ ಪರಿಣಾಮವಾಗಿ ಕಾರ್ಮಿಕ ಸಚಿವ ಶಾಖೆಯ ಬೇಡಿಕೆ ಬಗ್ಗೆ ಸಚಿವರ ಉತ್ತರಕ್ಕೆ ಹೆಚ್ಚು ಕಾಲವನ್ನು ಉಪಯೋಗಿಸಿಕೊಳ್ಳಲು ಪ್ರೋತ್ಸಾಹಿಸಿದಂತಾಯಿತೆಂದೂ ಕೆಲವು ಸದಸ್ಯರು ಆಕ್ಷೇಪಿಸಿದರು.

ಸಂಗತ

ಸಾಫ್ಟ್ ಪಿಆರ್ ಎಂಬ ಸಮಾಜೋ-ರಾಜಕೀಯ

ರೀಲ್ಸ್ ರಂಜನೆಗೆ ಮಾತ್ರವಲ್ಲ, ರಾಜಕೀಯ ಕಾರಣಗಳಿಗೂ ಬಳಕೆಯಾಗುತ್ತಿದೆ. ಜನಪ್ರಿಯತೆಯ ತಂತ್ರಗಾರಿಕೆಯಲ್ಲಿ ಅಸಲಿ ಸಮಸ್ಯೆಗಳು ಹಿನ್ನೆಲೆಗೆ ಸರಿಯುತ್ತಿವೆ.

• ವಿಶಾಖ ಎನ್.

ಘರ್ಷಣೆ ಕ್ರಿಯಾಶೀಲತೆಗೆ ಅನಿವಾರ್ಯ ಎಂದು ಡಿ.ಆರ್. ನಾಗರಾಜ್ ದಶಕಗಳ ಹಿಂದೆಯೇ ಬರೆದಿದ್ದರು. ಆಡಳಿತ ಪಕ್ಷ ಅಥವಾ ಒಕ್ಕೂಟ ಹಾಗೂ ವಿರೋಧ ಪಕ್ಷಗಳ ನಡುವಿನ ಮಾತಿನ ಘರ್ಷಣೆ ನಿಜದ ಅರ್ಥದಲ್ಲಿ ಕ್ರಿಯಾಶೀಲತೆಗೆ ಇಂಬುಗೊಡಬೇಕು. ಆದರೆ, ಈಗ ಘರ್ಷಣೆಯನ್ನು ಮರೆಮಾಚುವಂತಹ ಸಾಫ್ಟ್ ಪಿಆರ್ (ಸಾಫ್ಟ್ ಪಬ್ಲಿಕ್ ರಿಲೇಷನ್ಸ್ - ಲಘುವಾದ ಧಾಟಿಯಲ್ಲಿಯೇ ಜನಪ್ರಿಯ ಸಂಗತಿಗಳನ್ನು ಪ್ರಸ್ತಾಪಿಸುತ್ತಾ ಅಸಲಿ ಸಮಸ್ಯೆಗಳ ಮೇಲೆ ಮುಸುಕೆಳೆಯುವುದು) ಎಂಬ ವಾಸ್ತವವು ಗಮನಸೆಳೆಯುತ್ತಿದೆ.

ಆಮ್‌ಆದ್ಮಿ ಪಾರ್ಟಿಯು (ಎಎಪಿ) ರಾಜ್ಯಸಭೆಯ ತನ್ನ ಉಪನಾಯಕನ ಸ್ಥಾನದಿಂದ ರಾಘವ್ ಛಡ್ಡಾ ಅವರನ್ನು ವಜಾಗೊಳಿಸಿದೆ. ಈ ಹಿನ್ನೆಲೆಯಲ್ಲಿ, ಆ ಪಕ್ಷದ ಅನೇಕ ಮುಖಂಡರು ಸಾಫ್ಟ್ ಪಿಆರ್ ಪ್ರಸ್ತಾಪ ಮಾಡಿದ್ದಾರೆ. ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ, ಪಶ್ಚಿಮ ಏಷ್ಯಾ ಯುದ್ಧ, ನಿರುದ್ಯೋಗ ಸಮಸ್ಯೆ, ರಾಜಕೀಯ ಪ್ರಾತಿನಿಧ್ಯದಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವ ಸಲುವಾಗಿ ದಿಢೀರನೆ ವಿಶೇಷ ಸಂಸತ್ ಕಲಾಪವನ್ನು ನಡೆಸಲು ತೀರ್ಮಾನಿಸುವುದು... ಇಂತಹ ಪ್ರಮುಖ ವಿಷಯಗಳನ್ನು ಪ್ರತಿಪಕ್ಷಗಳು ಸರ್ಕಾರದ ವಿರುದ್ಧ ಚರ್ಚೆಗೆ ಗುರಾಣಿ ಮಾಡಿಕೊಳ್ಳುವುದು ನಿರೀಕ್ಷಿತ. ಪಕ್ಷದ ಮುಖಂಡರಿಂದ ಸದನದಲ್ಲಿ ಇಂತಿಂಥ ವಿಷಯಗಳ ಕುರಿತು ಚರ್ಚಿಸಬೇಕು ಎಂದು ಸಂದೇಶವೂ ಸಂಸದರಿಗೆ ದಾಟಿರುತ್ತದೆ. ರಾಘವ್ ಛಡ್ಡಾ ಅವರು ಅಂತಹ ವಿಷಯಗಳನ್ನು ಪ್ರಸ್ತಾಪಿಸದೆ ತಮ್ಮ ಜನಪ್ರಿಯತೆಗೆ ಪೂರಕವಾದ, ಸರ್ಕಾರವನ್ನು ತುಸುವೂ ಕೆಣಕದ ಧಾಟಿಯಲ್ಲಿ ರಾಜ್ಯಸಭೆಯಲ್ಲಿ ಮಾತನಾಡಿದರು ಎಂದು ಎಎಪಿ ಮುಖಂಡರಾದ ಆತಿಶಿ ಸೇರಿ ಕೆಲವರು ಟೀಕಿಸಿದ್ದಾರೆ.



ಈ ವಿದ್ಯಮಾನವನ್ನು ಇಡೀ ರಾಜಕೀಯ ವ್ಯವಸ್ಥೆಗೆ ಅನ್ವಯಿಸಿ ನೋಡಿದರೆ, 2014ರಿಂದ ಇಲ್ಲಿಯವರೆಗೆ ಸಾಮಾಜಿಕ ಮಾಧ್ಯಮವನ್ನು ಬಿಜೆಪಿ ತನ್ನ ಜನಪ್ರಿಯತೆ ಕಟ್ಟಿಕೊಳ್ಳಲು ಹೇಗೆಲ್ಲ ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಾ ಬಂದಿದೆ ಎನ್ನುವುದು ಸ್ಪಷ್ಟವಾಗುತ್ತದೆ. ವಾಸ್ತವದಲ್ಲಿ ಇದೂ ಸಾಫ್ಟ್ ಪಿಆರ್ ಎನ್ನುವುದರಲ್ಲಿ ಅನುಮಾನವಿಲ್ಲ. ಪ್ರಧಾನಿ ತಿಂಗಳಿಗೊಮ್ಮೆ ನಡೆಸುವ 'ಮನದ ಮಾತು' ರೇಡಿಯೊ ಕಾರ್ಯಕ್ರಮವನ್ನು ಆಯ್ದ ನಗರ/ ಪಟ್ಟಣ/ ಹಳ್ಳಿಗಳಲ್ಲಿ ಶಾಮಿಯಾನ ಹಾಕಿ, ಜನರನ್ನು ಕೂರಿಸಿ ಕೇಳಿಸುವ ಪರಿಪಾಟವೂ ಇದೆ. ಸರ್ಕಾರಿ ಆಡಳಿತ ಯಂತ್ರವನ್ನು ಅನೇಕ ಕಡೆ ಬಳಸಿಕೊಂಡು ನಡೆಸುವ ಪಿಆರ್ ಚಟುವಟಿಕೆ ಇದು ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಈಗ ಪ್ರತಿಪಕ್ಷದವರೇ ಆದ ರಾಘವ್ ಛಡ್ಡಾ ರಾಜ್ಯಸಭೆಯಲ್ಲಿ ತಾವೆತ್ತಿದ ಕೆಲವು ಪ್ರಶ್ನೆಗಳು ಸಾಮಾಜಿಕ ಮಾಧ್ಯಮದಲ್ಲಿ ರೀಲ್ಸ್ ಆಗಿ ಹರಿದಾಡುವಂತೆ ತಾಂತ್ರಿಕ ತಂಡವೊಂದನ್ನು ಸಮರ್ಥವಾಗಿ ಬಳಸಿಕೊಂಡಿರುವ ಅಭಿಪ್ರಾಯ ವ್ಯಕ್ತಗೊಂಡಿದೆ. ಇದಕ್ಕೆ ಅವರು ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿದ್ದಾರೆ ಎಂಬ ವಾದವೂ ಇದೆ. ರಾಘವ್ ಅವರ ರೀಲ್ಸ್ ನೋಡಿದ ಅಸಂಖ್ಯ ಜನರು ಅವರಿಗೆ ಎಎಪಿ ಅನ್ಯಾಯ ಮಾಡಿದೆ ಎಂದೇ ವಕಾಲತ್ತು ವಹಿಸಿ, ಅಭಿಪ್ರಾಯಗಳನ್ನು ದಾಖಲಿಸುತ್ತಿದ್ದಾರೆ. ಅವರ ರಾಜಕೀಯ ಹುನ್ನಾರ ಅಥವಾ ಆಡಳಿತ ಪಕ್ಷಗಳನ್ನು ಕೆಡವಿಕೊಳ್ಳದ ಅವಕಾಶವಾದಿ ಜಾಣತನದ ಕುರಿತು ದಾಖಲಾಗುತ್ತಿರುವ ವಿಶ್ಲೇಷಣೆಗಳು ಕಡಿಮೆ.

ಹೊಸ ತಲೆಮಾರಿನ ಯುವಕ/ಯುವತಿಯರಿಗೆ ಈಗ ಮೊಬೈಲ್ ಪ್ರಮುಖ ವಾಹಕ. ರಾಜಕೀಯ ಅಭಿಪ್ರಾಯ ರೂಪಿಸುವ ರೀಲ್ಸ್ ಅಥವಾ ವಾಟ್ಸ್‌ಆ್ಯಪ್ ಫಾರ್ವರ್ಡ್‌ಗಳನ್ನು ಮಿದುಳುಗಳು ಥಟ್ಟನೆ ಸ್ವೀಕರಿಸಿಬಿಡುತ್ತವೆ. ರೀಲ್ಸ್ ಮೂಲಕ ಪದೇ ಪದೇ ಕಾಣಿಸಿಕೊಳ್ಳುವ ಬಿಜೆಪಿಯ ತೇಜಸ್ವಿ ಸೂರ್ಯ, ಹಿಂದೆ ಕಾಂಗ್ರೆಸ್‌ನಲ್ಲಿದ್ದು, ಈಗ ಶಿವಸೇನಾ ಪಕ್ಷದವರಾದ ಪ್ರಿಯಾಂಕಾ ಚತುರ್ವೇದಿ, ಟಿಎಂಸಿ ಪಕ್ಷದ ಮಹುವಾ ಮೊಯಿತ್ರಾ, ಕರ್ನಾಟಕದ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಇಂತಹವರೆಲ್ಲ ಯುವಜನರಿಗೆ ಹೆಚ್ಚು ಪರಿಚಿತರಾಗಿರುವುದೇ ರೀಲ್ಸ್ ಮುಖಾಂತರ. ಪ್ರತಿಪಕ್ಷದಲ್ಲಿ ಸದಾ ಮಾತನಾಡುವ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಜೈರಾಮ್ ರಮೇಶ್, ಮಲ್ಲಿಕಾರ್ಜುನ ಖರ್ಗೆ ಅವರಂತಹವರು ರೀಲ್ಸ್ ಮುಖಂಡರಲ್ಲ. ವಾಸ್ತವದಲ್ಲಿ ವಸ್ತುಸ್ಥಿತಿಯನ್ನು ಮುಂದಿಟ್ಟು ಸರ್ಕಾರವನ್ನು ಪ್ರಶ್ನಿಸುವ ಕೆಲಸವನ್ನು ಇಂತಹ ನಾಯಕರು ಅವಿರತವಾಗಿ ಮಾಡುತ್ತಿರುತ್ತಾರೆ.

ಸಾಫ್ಟ್ ಪಿಆರ್ ಎನ್ನುವುದನ್ನು ಈ ಕಾಲಮಾನದಲ್ಲಿ ಖಂಡಿತ ಉಪೇಕ್ಷಿಸಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರವು ತನಗೆ ಪೂರಕವಾದ ಸಂಕಥನಗಳು ಸಾಮಾಜಿಕ ಮಾಧ್ಯಮದಲ್ಲಿ ಹೆಚ್ಚು ಉಳಿಯುವಂತೆ ಮಾಡುವುದು ಸಹಜವೇ ಆಗಿಬಿಟ್ಟಿದೆ. ಈಗೀಗ ಬುಡ ಅಲ್ಲಾಡಿಸಬಲ್ಲ ಪ್ರಶ್ನೆಗಳನ್ನು ಥಟ್ಟನೆ ಅಳಿಸಬಲ್ಲ ಐ.ಟಿ ಕಾಯ್ದೆ ಅಸ್ತ್ರ ಪ್ರಯೋಗ ಕೂಡ ಯಥಾವಕಾಶ ಬಳಕೆಯಾಗುತ್ತಿದೆ. ಹೀಗಿರುವಾಗ, ರಾಘವ್ ಛಡ್ಡಾ ಎತ್ತಿದ- ವಿಮಾನನಿಲ್ದಾಣದಲ್ಲಿ ಸಿಗುವ ಸಮೋಸಾ ಬೆಲೆ ದುಬಾರಿ ಏಕೆ, ಬಳಸದೇ ಉಳಿಯುವ ಡೇಟಾ ಮುಂದಿನ ತಿಂಗಳಿಗೂ ಸೇರ್ಪಡೆಯಾಗುವುದಿಲ್ಲ ಏಕೆ ಎಂಬಂತಹ ಪ್ರಶ್ನೆಗಳು ರೀಲ್ಸ್ ಮೂಲಕ ಯಾಕೆ ಜನಪ್ರಿಯವಾಗುತ್ತವೆ ಎಂದು ಊಹಿಸುವುದು ಕಷ್ಟವೇನೂ ಅಲ್ಲ.

ಕೆಲವೇ ನಿಮಿಷಗಳಲ್ಲಿ ಥಟ್ಟನೆ ಜನಾಕರ್ಷಿಸುವ ಮೇಲುಸ್ತರದ ಸಂಗತಿಗಳ ಅರುಹುವ ರೀಲ್ಸ್ ಸ್ವೀಕೃತಿ ಹೆಚ್ಚಾಗುತ್ತಿರುವುದು ನಿಸ್ಸಂಶಯ. ಅರಿವಿನ ಪರಿಧಿ ವಿಸ್ತರಿಸುವ ವಿವೇಚನಾ ಸಂವಾದಗಳನ್ನು ಚುಟುಕು ರೀಲ್ಸ್‌ಗಳಲ್ಲಿ ತಲಪಿಸುವುದು ಸಾಧ್ಯವಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪೂರ್ಣ ಜಾರಿಯಾಗದ ಹೋಟಾ ಸಮಿತಿ ಶಿಫಾರಸು

ಕೆಪಿಎಸ್‌ಸಿ ಸುಧಾರಣೆ ಇಚ್ಛಾಶಕ್ತಿಯ ಕೊರತೆ



• ಎ.ಎಂ.ಸುರೇಶ

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿಗಳಲ್ಲಿ ನಡೆಯುವ ಭ್ರಷ್ಟಾಚಾರ, ಹಗರಣಗಳಿಗೆ ಕಡಿವಾಣ ಹಾಕಿ, ಪಾರದರ್ಶಕತೆ ತರುವ ದಿಸೆಯಲ್ಲಿ ಪಿ.ಸಿ.ಹೋಟಾ ಸಮಿತಿ 13 ವರ್ಷಗಳ ಹಿಂದೆಯೇ ಹಲವು ಶಿಫಾರಸುಗಳನ್ನು ಮಾಡಿದೆ. ಆದರೆ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಆ ಶಿಫಾರಸುಗಳು ಇಂದಿಗೂ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿಲ್ಲ.

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಬಗ್ಗೆ ವ್ಯಾಪಕವಾಗಿ ದೂರುಗಳು ಬಂದಿದ್ದವು. ಇದಾದ ಬಳಿಕ ಸಿವಿಲ್ ಸರ್ವಿಸ್ ಹುದ್ದೆಗಳ ನೇಮಕಾತಿಯಲ್ಲಿ ಪಾರದರ್ಶಕತೆಗೆ ಒತ್ತು ನೀಡಿ, ಮುಕ್ತ ಹಾಗೂ ನಿಷ್ಪಕ್ಷಪಾತ ಪ್ರಕ್ರಿಯೆ ನಡೆಸುವ ಸಲುವಾಗಿ ಶಿಫಾರಸುಗಳನ್ನು ಮಾಡಲು 2013ರಲ್ಲಿ ಕೇಂದ್ರ ಲೋಕಸೇವಾ ಆಯೋಗದ ನಿವೃತ್ತ ಅಧ್ಯಕ್ಷ ಹೋಟಾ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯು ಸಾಕಷ್ಟು ಅಧ್ಯಯನ ಮಾಡಿ, ಕೆಪಿಎಸ್‌ಸಿಯಲ್ಲಿರುವ ವ್ಯವಸ್ಥೆ, ನೇಮಕಾತಿ ಪ್ರಕ್ರಿಯೆಗಳನ್ನು ಪರಿಷ್ಕರಿಸುವ ಸಂಬಂಧ ಹಲವು ಶಿಫಾರಸುಗಳನ್ನು ಒಳಗೊಂಡ ವರದಿಯನ್ನು 2013ರ ಆಗಸ್ಟ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಿತ್ತು.

ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಕೆಲವು ಆದೇಶಗಳನ್ನೂ ಹೊರಡಿಸಿದೆ. ಆದರೆ, ಅವುಗಳ ಅನುಷ್ಠಾನ ಸರಿಯಾಗಿ ಆಗುತ್ತಿಲ್ಲ. ರಾಜಕೀಯ ಹಸ್ತಕ್ಷೇಪ ಮತ್ತು ಜಾತಿ ಆಧಾರಿತ ನೇಮಕಾತಿ ವ್ಯವಸ್ಥೆಯೇ ಇದಕ್ಕೆ ಕಾರಣ ಎಂದು ಗೊತ್ತಿದ್ದರೂ, ಇದಕ್ಕೆ ಕಡಿವಾಣ ಹಾಕುವ ಕೆಲಸ ಪರಿಣಾಮಕಾರಿಯಾಗಿ ಆಗಿಲ್ಲ.

ಶಿಫಾರಸಿನ ಬಳಿಕವೂ ಆಯೋಗ ಹಲವು ನೇಮಕಾತಿಗಳನ್ನು ನಡೆಸಿದ್ದು, ಅವು ಕೂಡ ಭ್ರಷ್ಟಾಚಾರ ಮತ್ತು ಹಗರಣಗಳ ಆರೋಪದಿಂದ ಮುಕ್ತವಾಗಿಲ್ಲ. ಗೆಜೆಟೆಡ್ ಪ್ರೊಬೇಷನರಿ ಸೇರಿದಂತೆ ಯಾವುದೇ ಆಯ್ಕೆ ಪಟ್ಟಿ ಪ್ರಕಟವಾದರೂ, ಅಕ್ರಮ ನಡೆದಿದೆ ಎಂಬ ದೂರುಗಳು ಕೇಳಿಬರುತ್ತಲೇ ಇವೆ.

ಗ್ರೂಪ್ 'ಎ' ಮತ್ತು 'ಬಿ' ಹಾಗೂ 'ಸಿ' ಶ್ರೇಣಿಯ ಹುದ್ದೆಗಳನ್ನು ಪ್ರತಿ ವರ್ಷ ಕಾಲ ಮಿತಿಯಲ್ಲಿ ಭರ್ತಿ ಮಾಡಬೇಕು, ನೇಮಕಾತಿಗಳಲ್ಲಿ ಆಗುತ್ತಿರುವ ವಿಳಂಬವನ್ನು ತಡೆಯಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ಈ ಕುರಿತು 2019ರ ಮೇ ತಿಂಗಳಲ್ಲಿ ಆದೇಶವಾಗಿದ್ದು, ಆ ಪ್ರಕಾರ ಒಂದು ವರ್ಷದೊಳಗೆ ಗೆಜೆಟೆಡ್ ಪ್ರೊಬೇಷನರಿಗಳ ನೇಮಕಾತಿ ಪೂರ್ಣಗೊಳ್ಳಬೇಕು. ಆದರೆ, ಆದೇಶವಾಗಿ ಏಳು ವರ್ಷವಾದರೂ ಇದರ ಪಾಲನೆ ಆಗಿಲ್ಲ.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಪ್ರತಿ ವರ್ಷ ಅಧಿಸೂಚನೆ ಹೊರಡಿಸುತ್ತಿಲ್ಲ. ಗ್ರೂಪ್ 'ಸಿ' ಹುದ್ದೆಗಳ ಭರ್ತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಪ್ರತಿ ವರ್ಷ ನೇಮಕಾತಿ ಮಾಡುತ್ತೇವೆ ಎಂದು ಸರ್ಕಾರ ಹೇಳುತ್ತಲೇ ಬರುತ್ತಿದೆ. ಈ ಕುರಿತು ಆದೇಶವೂ ಆಗಿದೆ. ಆದರೆ, ನೇಮಕಾತಿ ಪ್ರಕ್ರಿಯೆಗೆ ಸರ್ಕಾರದಿಂದಲೇ ಚಾಲನೆ ಸಿಕ್ಕಿಲ್ಲ.

ಆಗಿರುವ ಬದಲಾವಣೆಗಳು...

- ಹೋಟಾ ಸಮಿತಿಯ ಶಿಫಾರಸಿನಂತೆ ಗ್ರೂಪ್ 'ಸಿ' ಹುದ್ದೆಗಳಿಗೆ ಸಂದರ್ಶನ ರದ್ದು
- ಗೆಜೆಟೆಡ್ ಪ್ರೊಬೇಷನರಿಗಳ ನೇಮಕಾತಿಗೆ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:15 ಅನುಪಾತ ಪಾಲನೆ
- ಮುಖ್ಯ ಪರೀಕ್ಷೆಯ ಅಂಕಗಳನ್ನು ಸಂದರ್ಶನಕ್ಕೂ ಮೊದಲೇ ಪ್ರಕಟಿಸದಿರುವುದು
- 1:3ರ ಅನುಪಾತದಲ್ಲಿ ಸಂದರ್ಶನಕ್ಕೆ ಆಹ್ವಾನ
- ಪರೀಕ್ಷಾ ನಿಯಂತ್ರಕರ ಹುದ್ದೆ ಸೃಷ್ಟಿ, ನೇಮಕ
- ಅಧ್ಯಕ್ಷರು, ಸದಸ್ಯರ ನೇಮಕ ಸಂಬಂಧ ಶೋಧನಾ ಸಮಿತಿ ರಚನೆ

13 ವರ್ಷಗಳಲ್ಲಿ 13 ಪರೀಕ್ಷಾ ನಿಯಂತ್ರಕರು, ಕಾರ್ಯದರ್ಶಿಗಳ ಬದಲಾವಣೆ

ಸ್ವಚ್ಛವಾಗಲಿ

ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು

ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆ ಒಪ್ಪಿಗೆ ನೀಡಿದರೂ, ಸಂಬಂಧಪಟ್ಟ ಇಲಾಖೆಗಳು ನೇಮಕಾತಿಯ ಪ್ರಸ್ತಾವಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸಲ್ಲಿಸುವುದಿಲ್ಲ. ಅಲ್ಲಿಂದ ಆಯೋಗಕ್ಕೆ ಬರುವುದಿಲ್ಲ. ಇದೆಲ್ಲ ಸರ್ಕಾರದ ಹಂತದಲ್ಲಿ ಆಗುವ ಪ್ರಕ್ರಿಯೆ. ಈ ಹಂತದಲ್ಲೇ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಗ್ರೂಪ್ 'ಸಿ' ಹುದ್ದೆಗಳ ಭರ್ತಿಗೆ ಆಯೋಗಕ್ಕೆ ಹೊಸದಾಗಿ ಯಾವುದೇ ಪ್ರಸ್ತಾವಗಳು ಬಂದಿಲ್ಲ.

ನೇಮಕಾತಿ ಆರಂಭಿಸಿದ ಕ್ಯಾಲೆಂಡರ್ ವರ್ಷದಲ್ಲೇ ಪ್ರಕ್ರಿಯೆ ಪೂರ್ಣಗೊಳಿಸಿದ ಉದಾಹರಣೆಯೇ ಇಲ್ಲ. ಇದಕ್ಕೆ ಆಯೋಗ ಅಷ್ಟೇ ಅಲ್ಲ, ಸರ್ಕಾರದ ವೈಫಲ್ಯವೂ ಕಾರಣ. ಕೆಲವೊಮ್ಮೆ ಪ್ರಸ್ತಾವ ಸಲ್ಲಿಸುವಾಗಲೇ ಮೀಸಲಾತಿ ನಿಗದಿ ವಿಚಾರದಲ್ಲಿ ಲೋಪಗಳು ಆಗಿರುತ್ತವೆ. ಅದನ್ನು ಸರಿಪಡಿಸಿಕೊಡಿ ಎಂದು ಆಯೋಗವು ಕಡತವನ್ನು ವಾಪಸ್ ಕಳುಹಿಸುತ್ತದೆ. ಒಮ್ಮೆ ಕಡತ ವಾಪಸ್ ಹೋದರೆ, ಮತ್ತೆ ಹಿಂತಿರುಗಿಸಲು ಆರು ತಿಂಗಳು, ವರ್ಷ ಹಿಡಿಯುತ್ತದೆ. ಅಷ್ಟು ಹೊತ್ತಿಗೆ ಕೆಲವರು ಕೋರ್ಟ್ ಮೊರೆ ಹೋಗಿರುತ್ತಾರೆ.

ಆಯೋಗದಲ್ಲಿ ಪರೀಕ್ಷಾಪೂರ್ವ ಪ್ರಕ್ರಿಯೆಗಳು ಆನ್‌ಲೈನ್ ಮೂಲಕವೇ ಆಗುತ್ತವೆ. ಆದರೆ, ಪರೀಕ್ಷಾ ನಂತರದ ಪ್ರಕ್ರಿಯೆಗೆ ಆಟೊಮೇಷನ್ ಇಲ್ಲ. ಸದ್ಯ ಹಳೆಯ ಪದ್ಧತಿ ಪ್ರಕಾರವೇ ಆಗುತ್ತಿದೆ. ಇಲ್ಲೂ ಆಟೊಮೇಷನ್ ಜಾರಿ ಮಾಡುವ ಪ್ರಕ್ರಿಯೆಗಳು ನಡೆದಿವೆ. ಇದಕ್ಕಾಗಿ ಹೊಸ ಸಾಫ್ಟ್‌ವೇರ್ ಸಿದ್ಧವಾಗಿದ್ದು, ಪರೀಕ್ಷಾ ಹಂತದಲ್ಲಿದೆ. ಇದು ಜಾರಿಯಾದರೆ ನೇಮಕಾತಿ ಪ್ರಕ್ರಿಯೆ ವೇಗ ಪಡೆದುಕೊಳ್ಳಬಹುದು.

50ರಷ್ಟು ಸಿಬ್ಬಂದಿ ಬದಲಾವಣೆ ಆಗಿಲ್ಲ: ಹೋಟಾ ಸಮಿತಿಯು ಆಯೋಗದಲ್ಲಿನ ಶೇ 50ರಷ್ಟು ಸಿಬ್ಬಂದಿಯನ್ನು ನಿಯೋಜನೆ ಮೇಲೆ ಹೊರಗೆ ಕಳುಹಿಸಬೇಕು. ಈ ಸ್ಥಾನಗಳಿಗೆ ಬೇರೆ ಬೇರೆ ಇಲಾಖೆ/ಸಂಸ್ಥೆಗಳಿಂದ ಸಿಬ್ಬಂದಿಯನ್ನು ತರಬೇಕು ಎಂದು ಶಿಫಾರಸು ಮಾಡಿತ್ತು. 'ಈ ಸಂಬಂಧ ಆದೇಶವಾಗಿದ್ದರೂ, ಅದು ಅನುಷ್ಠಾನವಾಗಿಲ್ಲ. ಪಟ್ಟಭದ್ರ ಹಿತಾಸಕ್ತಿಗಳು ಇದು ಜಾರಿಯಾಗದಂತೆ ಸರ್ಕಾರದ ಮೇಲೆ ಒತ್ತಡ ತಂದಿದ್ದು, ಬದಲಾವಣೆ ಮಾಡಲು ಸರ್ಕಾರಕ್ಕೂ ಆಸಕ್ತಿ ಇಲ್ಲ' ಎಂಬ ಮಾತುಗಳು ಕೇಳಿಬರುತ್ತಿವೆ.

ಸ್ಪರ್ಧಾತ್ಮಕ ಪರೀಕ್ಷೆ, ಸಂದರ್ಶನ ವಿಷಯಗಳ ಗೋಪ್ಯತೆ ಪಾಲನೆ ಉದ್ದೇಶದಿಂದ ಪರೀಕ್ಷಾ ನಿಯಂತ್ರಕರ ಹುದ್ದೆಯನ್ನು ಸೃಜಿಸಿ, ಹಿರಿಯ ವೇತನ ಶ್ರೇಣಿಯ ಐಎಎಸ್ ಅಧಿಕಾರಿಯನ್ನು ನೇಮಕ ಮಾಡಲಾಗಿದೆ. ಆದರೆ, ಸಮಿತಿಯ ಶಿಫಾರಸಿನಂತೆ ಆ ಹುದ್ದೆಯಲ್ಲಿ ಕನಿಷ್ಠ ಮೂರು ವರ್ಷ ಮುಂದುವರಿಸುವ ಕೆಲಸ ಆಗಿಲ್ಲ. 13 ವರ್ಷಗಳಲ್ಲಿ 13 ಮಂದಿ ಪರೀಕ್ಷಾ ನಿಯಂತ್ರಕರು ಬದಲಾಗಿದ್ದಾರೆ. ಈ ರೀತಿ ಆದರೆ ಕಾಲಮಿತಿಯಲ್ಲಿ ನೇಮಕಾತಿಗಳನ್ನು ಮುಗಿಸುವುದು ಹೇಗೆ ಎಂಬ ಪ್ರಶ್ನೆ ಕೇಳಿಬರುತ್ತಿದೆ.

ಪರೀಕ್ಷಾ ನಿಯಂತ್ರಕರನ್ನು ಆ ಹುದ್ದೆಯಿಂದ ವರ್ಗಾಯಿಸಿ, ಆದೇಶವನ್ನು ಕಾರ್ಯಗತಗೊಳಿಸುವ ಮೊದಲು ಕನಿಷ್ಠ ಮೂರು ತಿಂಗಳ ಕಾಲ ಒಬ್ಬರನ್ನು ಅಧ್ಯಯನದಲ್ಲಿ ಇರಿಸಬೇಕು ಎಂದು ಶಿಫಾರಸು ಮಾಡಲಾಗಿತ್ತು. ಅಂದರೆ ಹಾಲಿ ಇರುವ ನಿಯಂತ್ರಕರು ಹೊರಹೋಗುವ ಮೊದಲೇ, ಅಲ್ಲಿನ ವ್ಯವಸ್ಥೆ ಬಗ್ಗೆ ತಿಳಿದುಕೊಳ್ಳಲು ಹೊಸಬರಿಗೆ ಅನುಕೂಲವಾಗುತ್ತದೆ ಎಂಬುದು ಇದರ ಉದ್ದೇಶ. ಇದರ ಪಾಲನೆಯಂತೂ ಆಗಿಯೇ ಇಲ್ಲ. ರಾತ್ರೋರಾತ್ರಿ ನಿಯಂತ್ರಕರನ್ನು ಎತ್ತಂಗಡಿ ಮಾಡುವುದು ಮುಂದುವರಿದಿದೆ. ನಾಲ್ಕು, ಐದು, ಆರು, ಎಂಟು, ಹತ್ತು ತಿಂಗಳಿಗೆ ಪರೀಕ್ಷಾ ನಿಯಂತ್ರಕರನ್ನು ವರ್ಗಾಯಿಸಲಾಗಿದೆ.

ಪರೀಕ್ಷಾ ನಿಯಂತ್ರಕರು (2013ರಿಂದ)

ಹೆಸರು	ಅವಧಿ
ವೆಂಕಟೇಶ್ ಕುಮಾರ್	09-10-2013ರಿಂದ 17-06-2015
ವಾಸಿರೆಡ್ಡಿ ವಿಜಯ ಜ್ಯೋತ್ಸ್ನಾ	22-06-2015ರಿಂದ 21-06-2016
ಕೃಷ್ಣಭಾಜಪೇಯಿ	21-06-2016ರಿಂದ 27-02-2019
ವಾಸಿರೆಡ್ಡಿ ವಿಜಯ ಜ್ಯೋತ್ಸ್ನಾ	27-02-2019ರಿಂದ 22-07-2019
ಜಿಆರ್‌ಜೆ ದಿವ್ಯಪ್ರಭು	22-07-2019ರಿಂದ 24-03-2021
ಎಂ.ಕನಗವಲ್ಲಿ	24-03-2021ರಿಂದ 04-02-2022
ನಲಿನಿ ಅತುಲ್	04-02-2022ರಿಂದ 05-11-2022
ಭಂವರ್ ಸಿಂಗ್ ಮೀನಾ	05-11-2022ರಿಂದ 20-02-2023
ಬಿ.ಫೌಜಿಯಾ ತರನ್ನುಮ್	20-02-2023ರಿಂದ 21-06-2023
ಗಿರೀಶ್ ದಿಲೀಪ್ ಬದೋಲೆ	21-06-2023ರಿಂದ 26-12-2023
ಕೆ.ಎಸ್.ಲತಾ ಕುಮಾರಿ	26-12-2023ರಿಂದ 05-02-2024
ಜ್ಞಾನೇಂದ್ರ ಕುಮಾರ್ ಗಂಗ್ವಾರ್	06-02-2024ರಿಂದ 20-03-2026
ದಿಗ್ವಿಜಯ್ ಬೋಡ್ಕೆ	20-03-2026ರಿಂದ

ಕಾರ್ಯದರ್ಶಿಗಳು (2013ರಿಂದ)

ಹೆಸರು	ಅವಧಿ
ಮನೋಜ್ ಕುಮಾರ್ ಮೀನಾ	03-10-2013ರಿಂದ 25-06-2016
ಸುಬೋಧ್ ಯಾದವ್	25-06-2016ರಿಂದ 22-12-2016
ಎನ್.ಎಸ್.ಪ್ರಸನ್ನಕುಮಾರ್	22-12-2016ರಿಂದ 01-01-2018
ಆರ್.ಆರ್.ಜನ್ನು	01-01-2018ರಿಂದ 18-07-2019
ಜಿ.ಸತ್ಯವತಿ	18-07-2019ರಿಂದ 01-06-2022
ರಿಚರ್ಡ್ ವಿನ್ಸೆಂಟ್ ಡಿಸೋಜಾ	01-06-2022ರಿಂದ 21-07-2022
ಸುರಳ್ಕರ್ ವಿಕಾಸ್ ಕಿಶೋರ್	21-07-2022ರಿಂದ 14-09-2023
ಕೆ.ಎಸ್.ಲತಾ ಕುಮಾರಿ	14-09-2023ರಿಂದ 07-02-2024
ಕೆ.ರಾಕೇಶ್ ಕುಮಾರ್	07-02-2024ರಿಂದ 15-07-2024
ರಮಣ್‌ದೀಪ್ ಚೌಧರಿ	23-10-2024ರಿಂದ 31-05-2025
ಆರ್.ವೆಂಕಟೇಶ್ ಕುಮಾರ್	31-05-2025ರಿಂದ 04-06-2025
ಆರ್.ವಿಶಾಲ್	04-06-2025ರಿಂದ 18-12-2025
ಜ್ಯೋತಿ.ಕೆ	18-12-2025ರಿಂದ

ತಜ್ಞರ ಸಮಿತಿ ರಚಿಸಬೇಕು

ಕೇಂದ್ರ ಲೋಕಸೇವಾ ಆಯೋಗ ಅಸ್ತಿತ್ವಕ್ಕೆ ಬಂದಾಗಿನಿಂದ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿದೆ. ನೇಮಕಾತಿಗಳಲ್ಲಿ ಎಲ್ಲ ವರ್ಗದವರೂ ಆಯ್ಕೆಯಾಗುತ್ತಾರೆ. 50 ವರ್ಷಗಳ ಹಿಂದೆ ನಾವು ಆಯ್ಕೆಯಾದಾಗ ಇದ್ದ ವ್ಯವಸ್ಥೆ ಈಗಲೂ ಇದೆ. ಅಲ್ಲಿ ಆಯ್ಕೆಯಾಗಲು ಹಣದ ಅಗತ್ಯವಿಲ್ಲ.

ಆದರೆ, ಇಲ್ಲಿ ಎಲ್ಲವೂ ರಾಜಕೀಯ ಮಧ್ಯಪ್ರವೇಶದ ಮೇಲೆಯೇ ನಡೆಯುತ್ತದೆ. ಭ್ರಷ್ಟಾಚಾರ ಜಾಸ್ತಿಯಾಗಿದೆ. ಇದು ಹೋಗಬೇಕು. ಪಕ್ಷಪಾತದಿಂದ ಮುಕ್ತವಾಗಬೇಕು. ಇದನ್ನು ಯಾವ ರೀತಿ ಮಾಡಬೇಕು ಎಂದು ಚರ್ಚೆ ನಡೆಸಿ, ಕಾರ್ಯರೂಪಕ್ಕೆ ತರಲು ತಜ್ಞರ ಸಮಿತಿ ರಚಿಸಬೇಕು.

ಆಯೋಗದ ಬಗ್ಗೆ ವಿಶ್ವಾಸಾರ್ಹತೆ ಬರಬೇಕು. ಅಧ್ಯಕ್ಷರು, ಸದಸ್ಯರ ನೇಮಕ ರಾಜಕೀಯದಿಂದ ಮುಕ್ತವಾಗಬೇಕು. ಆಯೋಗದ ದೈನಂದಿನ ಆಡಳಿತದಲ್ಲಿ ತಲೆ ಹಾಕಬಾರದು. ತಂತ್ರಜ್ಞಾನದಲ್ಲಿ ಸಾಕಷ್ಟು ಬೆಳವಣಿಗೆ ಆಗಿದ್ದು, ಅದನ್ನು ಬಳಸಿಕೊಂಡು ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಬೇಕು. ಕೆಳಹಂತದಿಂದ ಹಿಡಿದು ಹಿರಿಯ ಅಧಿಕಾರಿಗಳವರೆಗೂ ಬದ್ಧತೆ ಇರಬೇಕು.

ಹಲವು ವರ್ಷಗಳ ಹಿಂದೆ ಪ್ರಾಮಾಣಿಕವಾಗಿ ನೇಮಕಾತಿಗಳು ಆಗಿವೆ. ಆದರೆ, ಈಗ ಎಲ್ಲದರಲ್ಲೂ ರಾಜಕೀಯ, ಜಾತಿ ಹಾವಳಿ ಕಾಣುತ್ತಿದ್ದೇವೆ. ಇದನ್ನು ರಾಜಕಾರಣಿಗಳೇ ಮಾಡುತ್ತಿದ್ದಾರೆ. ಇದಕ್ಕೆ ಸಹಕಾರ ಕೊಡದೇ ಇದ್ದರೆ ವರ್ಗಾವಣೆ ಮಾಡುತ್ತಾರೆ. ಮೊದಲಿಗೆ ಇಲ್ಲಿಂದಲೇ ಸುಧಾರಣೆ ಆರಂಭವಾಗಬೇಕು.



ಎಂ.ಆರ್.ಶ್ರೀನಿವಾಸಮೂರ್ತಿ
ನಿವೃತ್ತ ಹೆಚ್ಚುವರಿ ಮುಖ್ಯಕಾರ್ಯದರ್ಶಿ

'ಅಧಿಕಾರ ವಹಿಸಿಕೊಂಡು ಅಲ್ಲಿನ ವ್ಯವಸ್ಥೆಯನ್ನು ಅರ್ಥಮಾಡಿಕೊಂಡು ಕೆಲಸ ಆರಂಭಿಸುತ್ತಿದ್ದಂತೆಯೇ ಎತ್ತಂಗಡಿ ಮಾಡುತ್ತಾರೆ. ಇದಕ್ಕೆ ಕಾರಣ ಏನು ಎಂದೂ ಹೇಳುವುದಿಲ್ಲ. ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆ ಎನ್ನುತ್ತಾರೆ. ಆದರೆ, ವಾಸ್ತವಾಂಶ ಬೇರೆಯಾಗಿರುತ್ತದೆ' ಎನ್ನುತ್ತಾರೆ ಪರೀಕ್ಷೆ ಬರೆದಿರುವ ಉದ್ಯೋಗಾಕಾಂಕ್ಷಿಗಳು.

'ರಾಜಕೀಯ ನಾಯಕರ ತಾಳಕ್ಕೆ ತಕ್ಕಂತೆ ಕುಣಿಯದೆ ಇದ್ದರೆ, ಸದಸ್ಯರು, ಅಧ್ಯಕ್ಷರು ಮತ್ತು ನಿಯಂತ್ರಕರ ನಡುವೆ ಭಿನ್ನಾಭಿಪ್ರಾಯ ಬಂದರೆ ಎತ್ತಂಗಡಿ ಗ್ಯಾರಂಟಿ. ಸಮಿತಿ ವರದಿ ಬಂದ ನಂತರವೂ ಕನಿಷ್ಠ ಮೂರು ವರ್ಷ ನಿಯಂತ್ರಕರನ್ನು ಹುದ್ದೆಯಲ್ಲಿ ಮುಂದುವರಿಸಿದ ಉದಾಹರಣೆ ಇಲ್ಲ' ಎಂದು ಆಯೋಗದ ಒಳಗಿನ ವ್ಯವಸ್ಥೆ ಮತ್ತು ರಾಜಕಾರಣಿಗಳ ಒಳಮರ್ಮವನ್ನು ಬಲ್ಲವರು ಹೇಳುತ್ತಾರೆ.

ಕಾರ್ಯದರ್ಶಿ ಹುದ್ದೆಯೂ ಇದಕ್ಕಿಂತ ಭಿನ್ನವಾಗಿಲ್ಲ. 13 ವರ್ಷಗಳಲ್ಲಿ 13 ಜನ ಕಾರ್ಯದರ್ಶಿಗಳು ಬದಲಾಗಿದ್ದಾರೆ. ಇದಕ್ಕೆ ಮುಂಚೆಯೂ ಪದೇ ಪದೇ ಎತ್ತಂಗಡಿ ಮಾಡಲಾಗಿದೆ.

'ಇದಕ್ಕೆಲ್ಲ ರಾಜಕೀಯ ಹಸ್ತಕ್ಷೇಪವೇ ಕಾರಣ. ರಾಜಕೀಯ ನಾಯಕರು, ಸದಸ್ಯರು, ಅಧ್ಯಕ್ಷರು ಹೇಳಿದ್ದಕ್ಕೆಲ್ಲ ಕಣ್ಣುಮುಚ್ಚಿಕೊಂಡು ಸಹಿ ಹಾಕುತ್ತಿದ್ದರೆ ಯಾವುದೇ ತಕರಾರು ಇರುವುದಿಲ್ಲ. ನಿಯಮಕ್ಕೆ ವಿರುದ್ಧವಾಗಿದೆ, ಆ ರೀತಿ ಮಾಡಲು ಬರುವುದಿಲ್ಲ ಎಂದು ಹೇಳಿದರೆ ಸಂಘರ್ಷ ಶುರುವಾಗುತ್ತದೆ. ಕೊನೆಗೆ ವರ್ಗಾವಣೆ ಮಾಡುತ್ತಾರೆ. ಇದಕ್ಕೆಲ್ಲ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ, ಪಟ್ಟಭದ್ರ ಹಿತಾಸಕ್ತಿಗಳೇ ಕಾರಣ' ಎಂಬುದು ಆಯೋಗದ ಮಾಜಿ ಕಾರ್ಯದರ್ಶಿಯೊಬ್ಬರ ಅಭಿಪ್ರಾಯ.

ಸಾಂವಿಧಾನಿಕ ಹುದ್ದೆಗಳಾದ ಆಯೋಗದ ಅಧ್ಯಕ್ಷ, ಸದಸ್ಯ ಸ್ಥಾನಗಳಿಗೆ ನಿಷ್ಠೆ, ನ್ಯಾಯ, ಬೌದ್ಧಿಕ ಸಾಮರ್ಥ್ಯವಿರುವ ವ್ಯಕ್ತಿಗಳನ್ನು ಗುರುತಿಸಿ ಪಾರದರ್ಶಕವಾಗಿ ನೇಮಕ ಮಾಡುವ ಉದ್ದೇಶದಿಂದ ಸಮಿತಿಯ ಶಿಫಾರಸಿನಂತೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2025ರ ಏಪ್ರಿಲ್‌ನಲ್ಲಿ ಶೋಧನಾ ಸಮಿತಿ ರಚಿಸಲಾಗಿದೆ. ಹೆಚ್ಚುವರಿ ಮುಖ್ಯಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದವರು, ಐಐಟಿ, ಐಐಎಂ ಮೊದಲಾದ ಸಂಸ್ಥೆಗಳ ನಿವೃತ್ತ ಅಥವಾ ಹಾಲಿ ನಿರ್ದೇಶಕರು, ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದವರು ಸದಸ್ಯರಾಗಿರುತ್ತಾರೆ.

ಶೋಧನಾ ಸಮಿತಿ ಆದ ಬಳಿಕ ಆಯೋಗದ ಅಧ್ಯಕ್ಷ, ಸದಸ್ಯರ ನೇಮಕವಾಗಿಲ್ಲ. ಒಮ್ಮೆ ನೇಮಕವಾದರೆ, ಹೊಸ ವ್ಯವಸ್ಥೆಯಡಿ ಬದಲಾವಣೆಯನ್ನು ಕಾಣಬಹುದೊ, ಇಲ್ಲವೊ ಎಂಬುದು ಗೊತ್ತಾಗುತ್ತದೆ.

ಎಲ್ಲ ಅಕ್ರಮಗಳಿಗೆ ಸರ್ಕಾರವೇ ಹೊಣೆ

ಆಯೋಗದಲ್ಲಿ ಜಾತಿಗೊಬ್ಬರಂತೆ ಸದಸ್ಯರ ನೇಮಕವಾಗಿದೆ. ಅಲ್ಲಿರುವ ಸಿಬ್ಬಂದಿಯೂ ಆಳವಾಗಿ ಬೇರುಬಿಟ್ಟಿದ್ದಾರೆ. ಯಾವುದೇ ಸುಧಾರಣೆ ತರಲು ಕೈಹಾಕಿದರೂ, ಸದಸ್ಯರು ಮತ್ತು ಸಿಬ್ಬಂದಿ ಸಹಕಾರ ನೀಡುವುದಿಲ್ಲ. ಕೊನೆಗೆ ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಕರ ವರ್ಗಾವಣೆ ಮಾಡಿಸುತ್ತಾರೆ.

ವ್ಯವಸ್ಥೆಯಲ್ಲಿನ ಲೋಪಗಳನ್ನು ಸರಿಪಡಿಸಿ, ಸುಧಾರಣೆ ತರಲು ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ. ಅಲ್ಲಿ ನಡೆದಿರುವ ಎಲ್ಲ ಅಕ್ರಮಗಳಿಗೆ ಸರ್ಕಾರವೇ ಹೊಣೆ. ಅಧ್ಯಕ್ಷರು, ಸದಸ್ಯರನ್ನು ನೇಮಕ ಮಾಡುವುದು ಸರ್ಕಾರ. ಪ್ರಭಾವಿ ರಾಜಕಾರಣಿಗಳು ಹೇಳಿದಂತೆ ಸದಸ್ಯರು ಕೇಳುತ್ತಾರೆ.

ನೇಮಕಾತಿ ಅಧಿಸೂಚನೆ ಹೊರಡಿಸುತ್ತಿದ್ದಂತೆಯೇ ತನ್ನ ಮಗಳನ್ನೋ, ಅಳಿಯನನ್ನೋ ಉಪ ವಿಭಾಗಾಧಿಕಾರಿ, ಡಿವೈಎಸ್‌ಪಿ ಮಾಡುವುದು ಹೇಗೆ ಎಂದು ನೇರವಾಗಿ ಸದಸ್ಯರ ಜೊತೆ ಸೇರಿ ಕಾರ್ಯತಂತ್ರ ರೂಪಿಸುವ ರಾಜಕಾರಣಿಗಳು ಇದ್ದಾರೆ. ಸದಸ್ಯರು ನಡೆಸುವ ಎಲ್ಲ ಅಕ್ರಮಗಳನ್ನು ಸರ್ಕಾರವೇ ಪೋಷಿಸಿಕೊಂಡು ಬಂದಿದೆ.

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ ಅಕ್ರಮಗಳು ನಡೆದಿವೆ ಎಂಬ ಕಾರಣಕ್ಕೆ ಅಧಿಸೂಚನೆಯನ್ನು ರದ್ದುಪಡಿಸಲಾಗಿತ್ತು. ಕೊನೆಗೆ ಸುಗ್ರೀವಾಜ್ಞೆ ತಂದು ಪಟ್ಟಿಯಲ್ಲಿರುವ ಎಲ್ಲರಿಗೂ ನೇಮಕಾತಿ ಆದೇಶ ಕೊಟ್ಟರು. ಉಪ ವಿಭಾಗಾಧಿಕಾರಿ ಹುದ್ದೆಗೆ ಆಯ್ಕೆಯಾಗದಿದ್ದರೂ, ಒಬ್ಬರಿಗೆ ಆ ಹುದ್ದೆ ನೀಡಲಾಯಿತು.

ಸಂದರ್ಶನದಲ್ಲಿ ಯಾರಿಗೆ ಎಷ್ಟು ಅಂಕ ಬಂದರೆ ಆಯ್ಕೆಯಾಗುತ್ತಾರೆ ಎಂಬ ಪಟ್ಟಿಯನ್ನು ಹಿಂದೊಮ್ಮೆ ಆಯೋಗದ ಸಿಬ್ಬಂದಿ ಸಿದ್ಧಪಡಿಸಿ, ಅದರ ಆಧಾರದ ಮೇಲೆ 'ವ್ಯವಹಾರ' ನಡೆಸುತ್ತಿದ್ದರು. ಇದಕ್ಕಾಗಿ ಅವರದ್ದೇ ಆದ ಪರ್ಯಾಯ ವ್ಯವಸ್ಥೆ, ಸಾಫ್ಟ್‌ವೇರ್ ಇತ್ತು ಎಂಬ ಮಾತುಗಳು ಕೇಳಿಬಂದಿದ್ದವು. ಹಿರಿಯ ಅಧಿಕಾರಿಗಳಿಗೆ ಮುಕ್ತ ಅವಕಾಶ ಕೊಟ್ಟರೆ ಸುಧಾರಣೆ ತರಬಹುದು. ಆದರೆ, ರಾಜಕೀಯ ನಾಯಕರು ಬೇಕಂತಲೇ ಇದಕ್ಕೆ ಅವಕಾಶ ಕೊಡುತ್ತಿಲ್ಲ.



ಜಿ.ಬಿ.ವಿನಯ್ ಕುಮಾರ್
ಇನ್‌ಸೈಟ್ಸ್ ಐಎಎಸ್‌ನ ಸಂಸ್ಥಾಪಕ ಮತ್ತು ನಿರ್ದೇಶಕರು,

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಿರಿಯರೊಬ್ಬರನ್ನು ಭೇಟಿಯಾಗುತ್ತಿರುವ ವಿಡಿಯೊವನ್ನು ಹಲವರು ಫೇಸ್‌ಬುಕ್‌ನಲ್ಲಿ ಹಂಚಿಕೊಳ್ಳುತ್ತಿದ್ದಾರೆ. 'ಭಾರತ ಸರಕಾರದ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ತಂದೆಯನ್ನು ಭೇಟಿಯಾಗಲು ಹೋದಾಗ ಅವರ ಮನೆಯ ಅವಸ್ಥೆ ನೋಡಿ. ನಮ್ಮ ಊರುಗಳ ನಗರ ಸೇವಕರ ಮನೆಗಳೂ ಉಚ್ಚ ಸ್ಥಿತಿಯಲ್ಲಿ ಇರುತ್ತವೆ. ಆದರೆ, ದೇಶದ ಆರ್ಥಿಕ ಧೋರಣೆ ನಿರ್ಧರಿಸುವ ಮೋದಿ ಸರ್ಕಾರದ ಈ ಮಹಿಳಾ ಮಂತ್ರಿಯ ಸಾದಾತನ, ಸಭ್ಯತೆ ಉಳಿದ ರಾಜಕಾರಣಿಗಳಿಗೆ ಮಾದರಿ ಆಗಬೇಕು' ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು.

ವಿಡಿಯೊದ ಸ್ಕ್ರೀನ್‌ಶಾಟ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ, 2023ರಲ್ಲೂ ಇದೇ ಪ್ರತಿಪಾದನೆಯೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಇದೇ ವಿಡಿಯೊ ಮತ್ತು ಫೋಟೊಗಳನ್ನು ಹಂಚಿಕೊಂಡಿದ್ದು ಕಂಡುಬಂತು. ಆ ಸಂದರ್ಭದಲ್ಲಿ 'ನ್ಯೂಸ್‌ಚೆಕರ್' ಈ ಬಗ್ಗೆ ಫ್ಯಾಕ್ಟ್‌ಚೆಕ್ ವರದಿಯನ್ನೂ ಪ್ರಕಟಿಸಿತ್ತು. 2022ರ ಡಿಸೆಂಬರ್ 4ರಂದು ನಿರ್ಮಲ ಸೀತಾರಾಮನ್ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ವಿಡಿಯೊವನ್ನು ಪೋಸ್ಟ್ ಮಾಡಿದ್ದರು. ವಾರಾಣಸಿಯಲ್ಲಿ ತಮಿಳಿನ ಮಹಾಕವಿ ಭಾರತೀಯಾರ್ ಅವರು ಉಳಿದುಕೊಂಡಿದ್ದ ಶಿವ ಮದಮ್‌ಗೆ ಭೇಟಿ ನೀಡಿ, ಅವರ ಸಂಬಂಧಿ 96 ವರ್ಷದ ಕೆ.ವಿ.ಕೃಷ್ಣನ್ ಅವರನ್ನು ಭೇಟಿಯಾಗಿರುವ ಬಗ್ಗೆ ಪೋಸ್ಟ್‌ನಲ್ಲಿ ಅವರು ಉಲ್ಲೇಖಿಸಿದ್ದರು. ನಿರ್ಮಲಾ ಸೀತಾರಾಮನ್ ಅವರು ಭೇಟಿಯಾಗಿರುವ ಹಿರಿಯರು ಅವರ ತಂದೆಯಲ್ಲ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಹಳೆಯ ವಿಡಿಯೊವನ್ನು ಈಗ ಮತ್ತೆ ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ.

ದೊರೆಗಳು ಕ್ರೌರ್ಯ ತೊರೆಯಲಿ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ನಾದಿರ್ ಶಾ ಬದುಕಿದ್ದು ಐವತ್ತೊಂಬತ್ತು ವರ್ಷ ಮಾತ್ರ. ಮೊಗಲರ ದೊರೆ ನಜೀರುದ್ದೀನನ್ನು ಗೆದ್ದು ಕೈಗೊಂಬೆ ಮಾಡಿಕೊಂಡ. ನಿರಂತರ ಅವಮಾನದಿಂದ ತತ್ತರಿಸಿದ್ದ ಮೊಗಲ್ ದೊರೆಯ ಅಸಹಾಯಕತೆ ನಾದಿರ್ ಶಾನಿಗೆ ವಿಚಿತ್ರ ರಂಜನೆ ಕೊಡುತ್ತಿತ್ತು. ಅವನ ಇಬ್ಬರು ದಿವಾನರ ಸಾವಿನಿಂದ ರೋಮಾಂಚನಗೊಂಡಿದ್ದ. ಕ್ರೌರ್ಯವನ್ನು ಪ್ರೀತಿಸುತ್ತಿದ್ದ ನಾದಿರ್ ಶಾ ಜನರ ಕುತಂತ್ರ, ಸುಳ್ಳು ಮತ್ತು ಸೋಗಲಾಡಿತನಗಳನ್ನು ಕಂಡು ಕುದಿಯುತ್ತಿದ್ದ. ಚಕ್ರವರ್ತಿಯ ಎಲ್ಲ ಬಗೆಯ ವರಸೆ ಗೊತ್ತಿದ್ದ ನಾದಿರ್ ಶಾನಿಗೆ ತನ್ನ ಕಾಯಿಲೆ ಏನೆಂದು ತಿಳಿಯುತ್ತಿಲ್ಲ. ನಿತ್ಯದ ನರಳಿಕೆಯಲ್ಲಿ ಕ್ರೋಧಗೊಳ್ಳುತ್ತಿದ್ದ ನಾದಿರ್ ಶಾ ತನ್ನ ಕಾಯಿಲೆಯನ್ನು ಗುಣಪಡಿಸಬಲ್ಲ ಹಕೀಮನಿಗಾಗಿ ಕಾದು ವ್ಯಗ್ರನಾಗುತ್ತಾನೆ. ಉಲ್ಬಣಗೊಳ್ಳುತ್ತಿದ್ದ ತನ್ನ ಕಾಯಿಲೆಯಿಂದಾಗಿ ಸುತ್ತಮುತ್ತ ಇರುವವರೆಲ್ಲರನ್ನೂ ಅನುಮಾನಿಸುತ್ತ ಒಂಟಿಯಾಗುತ್ತಾನೆ. ಚಕ್ರವರ್ತಿಯ ಆಣತಿಗೆ ಮಣಿದು ಬರಲೊಪ್ಪದ ಹಕೀಮ ಅಲಾವಿ ಖಾನ್ ಚಿಕಿತ್ಸೆಯ ಪ್ರಾಥಮಿಕ ತಯಾರಿಯಲ್ಲಿಯೇ ನಾದಿರ್ ಶಾನ ಅಹಂ ಅನ್ನು ಅಲ್ಲಾಡಿಸಿಬಿಡುತ್ತಾನೆ.

ಚಕ್ರವರ್ತಿಯಾದವನು ಯಾರ ಪ್ರಶ್ನೆಗಳಿಗೂ ಉತ್ತರ ಹೇಳಬೇಕಾದ್ದಿಲ್ಲ ಎಂದು ಗರ್ವದಿಂದ ಹೇಳುತ್ತಿದ್ದ ನಾದಿರ್ ಶಾ ಹಕೀಮನ ಎದುರು ದೀನನಾಗುತ್ತಾನೆ. 'ನಿನ್ನ ಹೆಸರೇನು, ನಿನ್ನ ಅಪ್ಪ ಯಾರು' ಎಂಬ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು 'ಎಲ್ಲ ಹೇಳುತ್ತೇನೆ, ಆದರೆ ನನ್ನನ್ನು ಅವಮಾನಿಸಬಾರದು' ಎಂದು ಚಕ್ರವರ್ತಿಯ ಸ್ವಭಾವಕ್ಕೆ ವಿರುದ್ಧವಾಗಿ ಕೋರಿಕೊಳ್ಳುತ್ತಾನೆ. ಅಲಾವಿ ನಿಧಾನಕ್ಕೆ ಚಕ್ರವರ್ತಿಯ ಒಳಗಿದ್ದ ಮನುಷ್ಯನನ್ನು ಹೊರತೆಗೆಯಲು ಪ್ರಯತ್ನಿಸುತ್ತಾನೆ. ತನ್ನ ಕಣ್ಣು, ಕಿವಿ ಮತ್ತು ಹೃದಯವನ್ನು ಚಕ್ರವರ್ತಿಯಾದವನು ಸದಾ ನೈತಿಕ ಎಚ್ಚರದಲ್ಲಿ ಇಟ್ಟುಕೊಳ್ಳುವ ಅಗತ್ಯವನ್ನು ಹೇಳುತ್ತಾನೆ. ಯುದ್ಧ, ಕ್ರೌರ್ಯ ಆದ್ಯತೆಯಾಗುವುದು ಅಥವಾ ಕಟ್ಟಕಡೆಯ ಆಯ್ಕೆಯಾಗುವುದು ಕೂಡ ಸಾಮ್ರಾಟನ ಸೋಲನ್ನು ಸೂಚಿಸುತ್ತದೆ ಎಂದು ಅಲಾವಿಖಾನ್ ಮನದಟ್ಟು ಮಾಡುತ್ತಾನೆ.

ಭೂಮಿಯು ಕಪಟವಿಲ್ಲದ ಪ್ರೇಮದಿಂದ ಕೂಡಿದೆ. ದೇಶದ ಆಳ್ವಿಕೆಗೆ ಇರಬೇಕಾದುದು ಎಲ್ಲರನ್ನೂ ಎಲ್ಲ ಕಾಲಕ್ಕೂ ಅವ್ಯಾಜ ಪ್ರೇಮದಿಂದ ಕಟ್ಟುವ ಮನಸ್ಸು. ದುಷ್ಟರ ಆಳ್ವಿಕೆಯಲ್ಲಿ ನ್ಯಾಯ ಧರ್ಮ ದುರ್ಬಲಗೊಳ್ಳುತ್ತವೆ. ಇಂದಿನ ಜಾಗತಿಕ ಜೀವನ ವಿಧಾನವನ್ನು ಗಮನಿಸಿದರೆ ಭೂಸಂಪತ್ತಿಗಾಗಿ ನಿರಂತರ ಯುದ್ಧ ಮತ್ತು ಹಿಂಸೆಯ ಮೂಲಕ ಗೆದ್ದು ಮೆರೆದಾಳಿದ ಯಾವ ಚಕ್ರವರ್ತಿಯೂ ಈ ಜಗತ್ತನ್ನು ಪ್ರಭಾವಿಸಿಲ್ಲ ಎನ್ನುವುದು ತಿಳಿಯುತ್ತದೆ. ಚರಿತ್ರೆಯಲ್ಲಿ ಅವರ ದರ್ಪ ಮತ್ತು ವೈಭವಗಳನ್ನು ಓದುವಾಗ ಕೂಡ ಇವರೆಲ್ಲ ಜನರನ್ನು ದುಡಿಸಿಕೊಂಡ ಬಗೆಯಿಂದ ಹೆಮ್ಮೆ ಹುಟ್ಟುವ ಬದಲು ಅಸಹ್ಯ ಹುಟ್ಟುತ್ತದೆ. ಉಣ್ಣುವುದು ಪಡಿಯಕ್ಕಿ, ಮಲಗುವುದರ್ಧಮಂಚ, ಕುಡಿಯುವುದು ಒಂದಾವಿನ ಹಾಲು. ಇದರಾಚೆಗೆ ಆನೆ, ಕುದುರೆ, ಒಂಟೆ ಭಂಡಾರಗಳೆಲ್ಲಾ ಯಾತಕ್ಕೆ? ಹಣ ಅಧಿಕಾರಗಳಿಂದ ನೆಮ್ಮದಿ ಅನುಭವಿಸಿದವರು ವಿರಳ. ಸಂತೋಷವನ್ನು ಕಳೆದುಕೊಂಡವರು ಬಹಳ.

ನಮ್ಮ ಪರಂಪರೆಯನ್ನು ನಾವು ಎಷ್ಟೇ ಭವ್ಯ ದಿವ್ಯ ಎಂದು ಗೌರವಿಸಿದರೂ ದಿನದಿನದ ಬದುಕಿಗೆ ನಿಜಕ್ಕೂ ಆಗಿಬರುತ್ತಿರುವುದು ಅರಮನೆಗಳಲ್ಲ, ಕೋಟೆಗಳಲ್ಲ, ವೀರಶಾಸನಗಳಲ್ಲ. ಸಾಮೂಹಿಕ ಹಿಂಸೆಯ ಮೂಲಕ ಪರಾಕ್ರಮ ಸಾಬೀತುಪಡಿಸುವ ಕಾಲಮಾನ ಇದಲ್ಲ. ನಿಜಕ್ಕೂ ಜಗತ್ತನ್ನು ಆಳುತ್ತಿರುವುದು ವೈಜ್ಞಾನಿಕ ಆವಿಷ್ಕಾರಗಳು ಮತ್ತು ಜ್ಞಾನದ ತಾತ್ವಿಕ ದರ್ಶನಗಳು.


ಯುದ್ಧ ಸಾರಿದ ದೊರೆಗಳ ಮುಖಗಳು ಮಾನವೀಯ ಆರ್ದ್ರತೆಯಿಂದ ಕೂಡಿಲ್ಲ. ಈ ಕ್ರೌರ್ಯ ಭಾವ ದ್ವೇಷವೇ ಇಲ್ಲದ ಸೈನಿಕರನ್ನು ನಾಗರಿಕರನ್ನು ಸಾವಿನ ಮನೆಗೆ ತಳ್ಳುತ್ತಿದೆ. ನಾನು, ನನ್ನದು, ನನ್ನಿಂದಲೇ ಎನ್ನುವ ಅವಿವೇಕ ಅಹಂಕಾರವಾಗಿ ಬದಲಾಗಿ ಈ ನೆಲ ಕುಲುಮೆಯಾಗುತ್ತಿದೆ. ನಾವು ಬದುಕುತ್ತಿರುವ ಭೂಮಿ ತಣ್ಣಗಿರಲಿ ಎಂದು ಪೇಪರ್ ಸ್ಟ್ರಾ ಬಳಸುವ ಪುಟ್ಟ ಹೃದಯವಂತನೊಬ್ಬನ ವೇದನೆ ಮೂಕಮರ್ಮರವಾಗಿ ಕಾಡುತ್ತಿದೆ. ಕ್ರೌರ್ಯ ತೊರೆದು ಕರುಳು ಕಣ್ಣು ಪಡೆದ ಮಗುವಿನಂತಾಗಲು ದೊರೆಗಳಿಗೆ ಅಲಾವಿಯಂತಹ ಹಕೀಮ ಸಿಗಲಿ. ❖

ಪದಬಂಧ 6365

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಗ್ಗೊಲೆಯ ಘಟನೆ (4)
3.ಕಾಸು ಇದ್ದಾಗ ತುಸುವೇ ಖರೀದಿಸಿದ ತೋಟಿ (4)
5.ಟಕ ಟಕ ಓಡುತ್ತಿರುವ ಕುದುರೆಯ ಬಂಡಿ (3)
7.ರಕ್ತ ಕೀವುಗಳಿಂದ ತುಂಬಿ ಮೈಮೇಲೆ ಏಳುವ ಗುಳ್ಳೆ (2)
9.ತೇರು ಇಲ್ಲಿದೆ (2)
11.ನಾಯಕನಿಗೆ ಪ್ರಾಪ್ತವಾಗಿರುವ ಸ್ವರ್ಗ (2)
12.ಯೌವ್ವನದಲ್ಲಿ ಪ್ರವೇಶಿಸಿರುವ ಅರಣ್ಯ (2)
14.ಅವನ ಮುಖವಿದು (3)
16.ತಳದಿಂದ ಬಂದಿರುವ ಬುನಾದಿ (4)
17.ಕೊನೆಗೆ ಬರವಿದ್ದಾಗಿನ ಬೆತ್ತಲೆ! (4)

ಮೇಲಿಂದ ಕೆಳಕ್ಕೆ
1.ಹಲಾಲುಕೋರನಿಂದಲೇ ಈ ನಷ್ಟ! (3)
2.ತಿರುಗಿದಾಗ ಕಾಣಿಸಿದ ಆಲಸ್ಯ (2)
3.ಉತ್ತರದವರ ಚಿಕ್ಕಪ್ಪ (2)
4.ಒಳ್ಳೆಯ ಹಾದಿಯಿದು (3)
6.ಪಾಲು ಬೇಕೆಂದು ತಿಳಿಸಿದ ಅಂಚೆ (3)
8.ದುಃಖಾಂತವಾದ ನಾಟಕ (5)
9.ಬೆಳ್ಳಿ ಹಬ್ಬವಿದು (5)
10.ವನದ ಹತ್ತಿರವೇ ಕಾಣಿಸಿದ ತಾರುಣ್ಯ (3)
11.ಪಿತನ ಹತ್ತಿರವಿರುವ ಕ್ಷೌರಿಕ (3)
13.ಕ್ಷಣಿಕವಾದುದು, ನರನಲ್ಲಿದೆ (3)
14.ಪ್ರಾರಂಭ ಇಲ್ಲಿದೆ (2)
15.ಮೌನದಿಂದ ವೀಕ್ಷಿಸಿರುವ ಹೊಳೆ (2)



6364ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಮಲು 3.ಪರಾರಿ
5.ಸುಂಕ 6.ಬದುಕು
7.ರಿಪು 9.ಶಿಹ
11.ಸುಖಾಂತ 13.ಹಸು
14.ಗುಲಾಮ 15.ನಗರ

ಮೇಲಿಂದ ಕೆಳಕ್ಕೆ:
1.ಅಳ್ಳಕ 2.ಲುಯಬ
3.ಪರಾಕು 4.ರಿಪೇರಿ
5.ಸುಂಟರಗಾಳಿ
8.ಪುಸಲಾಯಿಸು 10.ಹಡಗು
11.ಸುಧಾಮ 12.ತಲ್ಲೀನ
13.ಹತ್ತಿರ

ಸುಡೊಕು 6748

ಆಡುವುದು ಹೇಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		3		6				2
							5	
	1	2		5		6		4
	8			1		4		3
3		4	2		7		8	
	9		4		3			6
6		5				8		
				7				1
1		8	9		6		4	

6747 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

06 ಏಪ್ರಿಲ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ಥಿ ಗಂ. 14-11 ನಕ್ಷತ್ರ: ಅನುರಾಧ ಗಂ. 26-57 ಯೋಗ: ಸಿದ್ಧಿ (ಆಸ್ರಿಕ್) ಗಂ. 15-25 ಕರಣ: ಬಾಲವ ಗಂ 14-11 ಮೀನ ಮಾಸದ 23 ನೇ ದಿನ. ಮಳೆ ನಕ್ಷತ್ರ : ರೇವತಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-27 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 17 ಶವ್ವಾಲ್ ಅದೃಷ್ಟ ಸಂಖ್ಯೆ : 10, 7

ಮೇಷ: ಸಹೋದ್ಯೋಗಿಗಳ ಅನಗತ್ಯ ಮಾತಿನಿಂದ ಭಿನ್ನಾಭಿಪ್ರಾಯಗಳು ಸೃಷ್ಟಿಯಾಗುತ್ತವೆ. ಅತಿ ಸರಳತೆಯನ್ನು ಸಹಚರರು ದುರುಪಯೋಗ ಪಡಿಸಿಕೊಳ್ಳುವರು. ವ್ಯಾಪಾರದಲ್ಲಿ ಸಾಧಾರಣ ಲಾಭ ಸಿಗುತ್ತದೆ.

ವೃಷಭ: ವ್ಯವಹಾರದಲ್ಲಿ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ತಂದುಕೊಳ್ಳುವುದು ಅನಿವಾರ್ಯ. ಲೆಕ್ಕ ಪತ್ರಗಳಿಲ್ಲದೇ ಕೇವಲ ನಂಬಿಕೆಯಲ್ಲಿ ಯಾವ ವ್ಯವಹಾರ ಮಾಡಬೇಡಿ.

ಮಿಥುನ: ಧೈರ್ಯ, ಸಾಹಸದ ಬಗ್ಗೆ ಮಿತ್ರರು, ಬಂಧುಗಳು ಟೀಕಿಸುವವರಿದ್ದಾರೆ ಲೆಕ್ಕಿಸದೆ ಮುನ್ನುಗ್ಗಿ. ಕಾರ್ಯರಂಗದಲ್ಲಿ ಉತ್ಸಾಹದಿಂದ ಇರಿ. ಹೊಸ ವಾಹನ ಅಥವಾ ಮನೆ ಖರೀದಿಯ ಯೋಗವಿದೆ.

ಕರ್ಕಾಟಕ: ಸದಾಕಾಲ ಕಾರ್ಯ ಪ್ರವೃತ್ತರಾಗಿ ದುಡಿಯುವವರಿಗೆ ಉತ್ತಮ ಫಲಗಳು ಅನುಭವಕ್ಕೆ ಬರಲಿವೆ. ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ. ಗುಣ ಧರ್ಮ ನಿಮ್ಮ ಬೆಂಬಲಕ್ಕಿರುತ್ತದೆ.

ಸಿಂಹ: ಆಹಾರ ಪದ್ಧತಿಯಲ್ಲಿ ಸರಿಯಾದ ಕ್ರಮ-ನಿಯಮ ಪಾಲಿಸುವುದರಿಂದ ಆರೋಗ್ಯ ವೃದ್ಧಿ. ವಾಹನ, ಯಂತ್ರೋಪಕರಗಳ ವಿಚಾರದಲ್ಲಿ ಧನವ್ಯಯ. ಧಾರ್ಮಿಕ ಶ್ರದ್ಧೆಯನ್ನು ಬೆಳೆಸಿಕೊಳ್ಳುವ ಪ್ರಯತ್ನ ಮಾಡಿರಿ.

ಕನ್ಯಾ: ಬೇರೆಯವರು ಮಾಡಿದ ವಂಚನೆಯ ಕೆಲಸಕ್ಕೆ ಹೊಣೆಗಾರಿಕೆಯನ್ನು ಹೊರುವ ಪರಿಸ್ಥಿತಿ ಬರಬಹುದು. ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯಿರಿ.

ತುಲಾ: ವ್ಯವಸ್ಥಿತವಾಗಿ ದಿನಚರಿ ರೂಪಿಸಿಕೊಂಡರೆ ಕೆಲಸಗಳನ್ನು ಅಂತಿಮ ಹಂತಕ್ಕೆ ತಲುಪಿಸಲು ಸಾಧ್ಯ. ಪಾಲುದಾರಿಕೆಯಲ್ಲಿ ಮೋಸ ಹೋಗುವ ಲಕ್ಷಣಗಳಿರುವುದರಿಂದ ಗಮನವಿರಲಿ.

ವೃಶ್ಚಿಕ: ಸೋಮಾರಿತನ ಇಲ್ಲದೇ ಕರ್ತವ್ಯದ ಕಡೆಗೆ ಅಧಿಕ ಗಮನ ನೀಡಿ. ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ಸ್ನೇಹಿತರ ಬಳಗದಲ್ಲಿ ನಡೆಯಲಿದೆ.

ಧನು: ಸದುದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿವೆ. ಯೋಗಾಭ್ಯಾಸ, ಧ್ಯಾನದಿಂದ ಆರೋಗ್ಯ ಉತ್ತಮ. ಕಂದಾಯ ಅಧಿಕಾರಿಗಳಿಗೆ ಅಲೆದಾಟ ಹೆಚ್ಚಲಿದೆ.

ಮಕರ: ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕವಾಗಬೇಕಾದ ಅವಶ್ಯಕತೆ ಇಲ್ಲ. ಕೌಟುಂಬಿಕವಾಗಿ ಪ್ರಮುಖ ವಿಷಯವೊಂದು ತಿಳಿದು ಬರಲಿದೆ. ಅನ್ಯರಿಗೆ ಸಹಾಯ ಮಾಡುವಾಗ ಪ್ರತಿಫಲ ಅಪೇಕ್ಷಿಸಬೇಡಿ.

ಕುಂಭ: ಚಲನಚಿತ್ರರಂಗದವರಿಗೆ ಖ್ಯಾತಿ, ಗೌರವಾನ್ವಿತ ಅವಕಾಶ ದೊರೆಯಲಿದೆ. ಉದ್ಯೋಗ ವ್ಯವಹಾರದಲ್ಲಿನ ತಲ್ಲೀನತೆಯು ಧನಾರ್ಜನೆಗೆ ಕಾರಣ. ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಸ್ಥಾನಮಾನ ದೊರೆಯಲಿದೆ.

ಮೀನ: ಆಮದು ಆಹಾರ ಪದಾರ್ಥಗಳಿಂದ ಲಾಭ ಸಿಗಲಿದೆ. ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಯಾರಲ್ಲಿಯೂ ಶತ್ರುತ್ವವನ್ನು ವೃದ್ಧಿಸಿಕೊಳ್ಳುವಂತಹ ಘಟನೆಗಳಿಗೆ ಆಸ್ಪದ ನೀಡದಿರಿ.

ಗುಂಡಣ್ಣ



ಜಿಡಿಪಿ ಅಂದಾಜು ತಗ್ಗಿಸಿದ ಮೂಡೀಸ್

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಪರಿಣಾಮವಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರ ಶೇ 6ಕ್ಕೆ ಇಳಿಯಬಹುದು ಎಂದು ಜಾಗತಿಕ ರೇಟಿಂಗ್ ಸಂಸ್ಥೆ ಮೂಡೀಸ್ ಹೇಳಿದೆ.

ದೇಶದ ಜಿಡಿಪಿ ಪ್ರಗತಿ ಶೇ 6.8ರಷ್ಟು ಇರಲಿದೆ ಎಂದು ಸಂಸ್ಥೆಯು ಈ ಮೊದಲು ಅಂದಾಜಿಸಿತ್ತು.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು, ದೇಶದ ಆರ್ಥಿಕತೆಯ ಬೆಳವಣಿಗೆ ದರವನ್ನು ನಿಧಾನವಾಗಿಸಲಿದೆ ಮತ್ತು



ಹಣದುಬ್ಬರವನ್ನು ಹೆಚ್ಚಿಸಲಿದೆ ಎಂದು ಅದು ಅಂದಾಜಿಸಿದೆ.

ಚಿಲ್ಲರೆ ಹಣದುಬ್ಬರವು ಈಗ ಆರ್‌ಬಿಐನ ತಾಳಿಕೆ ಮಟ್ಟದಲ್ಲಿಯೇ ಇದೆ. ಆದರೆ, ಜಾಗತಿಕ ಅನಿಶ್ಚಿತತೆಯಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹಣದುಬ್ಬರ ಶೇ 4.8ಕ್ಕೆ ಹೆಚ್ಚಳವಾಗುವ ನಿರೀಕ್ಷೆ ಇದೆ. ಇದು ಕಳೆದ ಆರ್ಥಿಕ ವರ್ಷದಲ್ಲಿ ಶೇ 2.4ರಷ್ಟಿತ್ತು ಎಂದು ತನ್ನ ವರದಿಯಲ್ಲಿ ತಿಳಿಸಿದೆ.

ಸಂಘರ್ಷವು ದೀರ್ಘಾವಧಿಗೆ ಮುಂದುವರಿದರೆ ಪ್ರಮುಖವಾಗಿ ಎಲ್‌ಪಿಜಿ ಸಾಗಣೆಯಲ್ಲಿ ಅಡಚಣೆ ಉಂಟಾಗಲಿದೆ. ಇಂಧನ ಮತ್ತು ಸಾಗಣೆ ವೆಚ್ಚವು ಸಹ ಹೆಚ್ಚಳವಾಗಲಿದೆ. ದೇಶವು ರಸಗೊಬ್ಬರದ ಆಮದಿನ ಮೇಲೆ ಹೆಚ್ಚಾಗಿ ಅವಲಂಬಿಸಿರುವುದರಿಂದ, ಆಹಾರ ಹಣದುಬ್ಬರ ಏರಿಕೆಯಾಗಬಹುದು ಎಂದು ಹೇಳಿದೆ.

₹1 ಲಕ್ಷ ಕೋಟಿ ದಾಟಿದ ಅಮೂಲ್ ವಹಿವಾಟು

ನವದೆಹಲಿ (ಪಿಟಿಐ): ಹಾಲಿನ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳ ಆಗಿದ್ದರಿಂದಾಗಿ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಅಮೂಲ್ ಬ್ರ್ಯಾಂಡ್‌ನ ಒಟ್ಟು ವಹಿವಾಟು ₹1 ಲಕ್ಷ ಕೋಟಿ ದಾಟಿದೆ ಎಂದು ಕಂಪನಿ ಹೇಳಿದೆ.

2024–25ರ ಆರ್ಥಿಕ ವರ್ಷದಲ್ಲಿ ಕಂಪನಿಯು ₹90 ಸಾವಿರ ಕೋಟಿ ವಹಿವಾಟು ನಡೆಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವಹಿವಾಟು ಪ್ರಮಾಣ ಶೇ 11ರಷ್ಟು ಹೆಚ್ಚಳವಾಗಿದೆ ಎಂದು ಗುಜರಾತ್ ಸಹಕಾರ ಹಾಲು ಮಾರಾಟ ಒಕ್ಕೂಟ (ಜಿಸಿಎಂಎಂಎಫ್) ತಿಳಿಸಿದೆ.

ಕಂಪನಿಯು 1,200ಕ್ಕೂ ಅಧಿಕ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ವಿತರಣಾ ಜಾಲವು ದೊಡ್ಡದಿದೆ. ಗ್ರಾಹಕರ ಅಗತ್ಯಗಳಿಗೆ ತಕ್ಕಂತೆ ಉತ್ಪನ್ನಗಳನ್ನು ಸಿದ್ಧಪಡಿಸಲಾಗುತ್ತಿರುವುದರಿಂದ ವಹಿವಾಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

‘ಆಟೊ ಎಲ್‌ಪಿಜಿ ಪೂರೈಕೆ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಎಲ್‌ಪಿಜಿ ಪೂರೈಕೆಯನ್ನು ರಾಜ್ಯದಲ್ಲಿ ಹೆಚ್ಚಿಸಲಾಗಿದೆ ಎಂದು 'ಇಂಡಿಯನ್ ಆಯಿಲ್ ಕಾರ್ಪೊರೇಷನ್' (ಐಒಸಿ) ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಸಂಘರ್ಷದಿಂದ ಎಲ್‌ಪಿಜಿಗೆ ಬೇಡಿಕೆ ಹೆಚ್ಚಳವಾಗಿದೆ. ಹೀಗಾಗಿ, ತನ್ನ ಕೇಂದ್ರಗಳ ಮೂಲಕ ವಿತರಣೆಯನ್ನು ಹೆಚ್ಚಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು 72 ಆಟೊ ಎಲ್‌ಪಿಜಿ ವಿತರಣಾ ಕೇಂದ್ರಗಳನ್ನು (ಎಎಲ್‌ಡಿಎಸ್) ಹೊಂದಿವೆ. ಈ ಪೈಕಿ ಐಒಸಿ ಕಂಪನಿಯು 55 ಮಳಿಗೆಗಳನ್ನು ಹೊಂದಿದೆ. ಖಾಸಗಿ ಮಾರಾಟಗಾರರು 300ಕ್ಕೂ ಅಧಿಕ ಮಳಿಗೆಗಳನ್ನು ಹೊಂದಿದ್ದಾರೆ. ಇದರಲ್ಲಿ ಶೇ 80ರಷ್ಟು ಮಳಿಗೆಗಳು ಸಂಘರ್ಷದ ಕಾರಣದಿಂದಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಐಒಸಿ ಸೇರಿದಂತೆ ಸರ್ಕಾರಿ ಸ್ವಾಮ್ಯದ ಕಂಪನಿಗಳ ರಿಟೇಲ್ ಮಳಿಗೆಗಳಲ್ಲಿ ಆಟೊ ಎಲ್‌ಪಿಜಿ ದರ ಬೆಂಗಳೂರಿನಲ್ಲಿ ಲೀಟರ್‌ಗೆ ₹89.52 ಇದೆ. ಆದರೆ ಖಾಸಗಿ ಮಾರಾಟಗಾರರು ಲೀಟರ್‌ಗೆ ₹99ರಿಂದ ₹105 ನಡುವೆ ಮಾರಾಟ ಮಾಡುತ್ತಿದ್ದಾರೆ. ಈ ವ್ಯತ್ಯಾಸದಿಂದ ಗ್ರಾಹಕರು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳತ್ತ ಮುಖ ಮಾಡಿದ್ದಾರೆ. ಇದರ ಪರಿಣಾಮವಾಗಿ ಈ ಮಳಿಗೆಗಳಲ್ಲಿ ಗ್ರಾಹಕರಿಂದ ಖರೀದಿ ಪ್ರಮಾಣ ಹೆಚ್ಚಾಗಿದೆ ಎಂದು ಹೇಳಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ ₹455	12 ಕ್ಕೆ ₹72
ಮೈಸೂರು	100 ಕ್ಕೆ ₹460	

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹555-733
ದ್ವಿತಳಿ (ಬಿ.ವಿ)	₹400-812

ತೈಲಕ್ಕೆ ಒಎಂಸಿಗಳಿಂದ ಕಡಿಮೆ ದುಡ್ಡು

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ತಮಗೆ ಪೆಟ್ರೋಲ್, ಡೀಸೆಲ್, ವಿಮಾನ ಇಂಧನ ಮತ್ತು ಸೀಮೆಎಣ್ಣೆ ಪೂರೈಸುವ ತೈಲ ಸಂಸ್ಕರಣಾ ಕಂಪನಿಗಳಿಗೆ ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆ ನೀಡಲಿವೆ.

ದೇಶದಲ್ಲಿ ಇಂಧನ ಬೆಲೆಯನ್ನು ನಿಯಂತ್ರಣ ಮುಕ್ತ ಆಗಿಸಿದ ನಂತರದಲ್ಲಿ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಇದೇ ಮೊದಲ ಬಾರಿಗೆ ಇಂತಹ ಕ್ರಮದ ಮೊರೆ ಹೋಗಿವೆ. ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಮಾರಾಟ ಬೆಲೆಯನ್ನು ಹೆಚ್ಚಿಸಿಲ್ಲದ ಕಾರಣದಿಂದಾಗಿ ತಮಗೆ ಆಗುತ್ತಿರುವ ನಷ್ಟವನ್ನು ಮಿತಿಗೊಳಿಸಲು ಕಂಪನಿಗಳು ಹೀಗೆ ಮಾಡುತ್ತಿವೆ ಎಂದು ಮೂಲಗಳು ಹೇಳಿವೆ.

ತೈಲೋತ್ಪನ್ನಗಳ ಮಾರಾಟ ಕಂಪನಿಗಳು (ಒಎಂಸಿ) ತಾವು ಖರೀದಿಸುವ ಪೆಟ್ರೋಲಿಯಂ ಉತ್ಪನ್ನಗಳಿಗೆ ಪ್ರತಿಯಾಗಿ ಸಂಸ್ಕರಣಾ ಕಂಪನಿಗಳಿಗೆ ಕೊಡ ಬೇಕಿರುವ ಮೊತ್ತವನ್ನು ಮಾರ್ಚ್ 26ರಂದು ಅಂತಿಮಗೊಳಿಸಿವೆ. ಈ ಮೊತ್ತವು ಆಮದು ವೆಚ್ಚಕ್ಕೆ ಹೋಲಿಸಿದರೆ ಲೀಟರ್‌ಗೆ ₹60ರವರೆಗೆ ಕಡಿಮೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಒಎಂಸಿಗಳು ಕಡಿಮೆ ಮೊತ್ತ ಪಾವತಿ ಮಾಡುತ್ತಿರುವುದರಿಂದ ಎಂಆರ್‌ಪಿಎಲ್, ಸಿಪಿಸಿಎಲ್ ಮತ್ತು ಎಚ್‌ಎಂಇಎಲ್‌ನಂತಹ ಸಂಸ್ಕರಣಾ ಕಂಪನಿಗಳಿಗೆ ಹೆಚ್ಚು ತೊಂದರೆ ಆಗುತ್ತಿದೆ.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾಗುವುದಕ್ಕೂ ಮೊದಲು ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್‌ಗೆ 70 ಡಾಲರ್‌ನಷ್ಟಿತ್ತು. ಅದು ಈಗ 100 ಡಾಲರ್ ದಾಟಿದೆ. ಹೀಗಿದ್ದರೂ ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿಲ್ಲ. ಇದರಿಂದಾಗಿ ಒಎಂಸಿಗಳು ನಷ್ಟ ಅನುಭವಿಸುತ್ತಿವೆ.

ಯುದ್ಧವು ತಣ್ಣಗೆ ನಿಲ್ಲುವ ಸೂಚನೆಗಳು ಇಲ್ಲ. ಹೀಗಾಗಿ ಒಎಂಸಿಗಳು ಸಂಸ್ಕರಣಾ ಕಂಪನಿಗಳಿಗೆ ಕಡಿಮೆ ಮೊತ್ತ ನೀಡಲು ತೀರ್ಮಾನಿಸಿವೆ. ಮಾರ್ಚ್ ದ್ವಿತೀಯಾರ್ಧಕ್ಕೆ ಒಎಂಸಿಗಳು ಸಂಸ್ಕರಣಾ ಕಂಪನಿಗಳಿಗೆ ಲೀಟರ್ ಡೀಸೆಲ್‌ಗೆ ₹22.34ರಷ್ಟು ಕಡಿಮೆ ನಿಗದಿ ಮಾಡಿವೆ. ಆದರೆ ಏಪ್ರಿಲ್ ಪ್ರಥಮಾರ್ಧಕ್ಕೆ ನಿಗದಿ ಮಾಡಿರುವ ಬೆಲೆಯು ಲೀಟರ್ ಡೀಸೆಲ್‌ಗೆ ₹60ರಷ್ಟು ಕಡಿಮೆ.

ವಿಮಾನ ಇಂಧನ ಹಾಗೂ ಸೀಮೆಎಣ್ಣೆಗೆ ನೀಡುವ ದರವನ್ನೂ ಒಎಂಸಿಗಳು ಕಡಿಮೆ ಮಾಡಿವೆ ಎಂದು ಗೊತ್ತಾಗಿದೆ. ಈ ವಿಚಾರವಾಗಿ 'ಇಂಡಿಯನ್ ಆಯಿಲ್', 'ಭಾರತ್ ಪೆಟ್ರೋಲಿಯಂ' ಮತ್ತು 'ಹಿಂದುಸ್ತಾನ್ ಪೆಟ್ರೋಲಿಯಂ' ಕಂಪನಿಗಳಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಸಿಕ್ಕಿಲ್ಲ.



ತಲೆನೋವಿಲ್ಲದ ‘ಲೈಫ್ ಸೈಕಲ್ ಫಂಡ್’

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಲೈಫ್ ಸೈಕಲ್ ಫಂಡ್‌ಗಳಲ್ಲಿ ಹೂಡಿಕೆ ಹಂಚಿಕೆ ಹೇಗಿರುತ್ತದೆ? (ಸೆಬಿ ನಿಯಮದಂತೆ)

ಮೆಚ್ಯೂರಿಟಿ ಅವಧಿ	ಈಕ್ವಿಟಿ (ಷೇರು)	ಡೆಟ್ (ಸುರಕ್ಷಿತ)	ಚಿನ್ನ/ಬೆಳ್ಳಿ/ಇತರೆ
15 - 30 ವರ್ಷಗಳು	ಶೇ 65 - 95	ಶೇ 5 - 25	ಶೇ 0 - 10
5 - 10 ವರ್ಷಗಳು	ಶೇ 50 - 65	ಶೇ 5 - 25	ಶೇ 0 - 10
1 ವರ್ಷಕ್ಕಿಂತ ಕಡಿಮೆ	ಶೇ 5 - 20	ಶೇ 25 - 65	ಶೇ 0 - 10

ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ಹೂಡಿಕೆ ಮಾಡಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಆದರೆ, ಮಾರುಕಟ್ಟೆ ಏರಿಳಿತದಲ್ಲಿ ಏನು ಮಾಡುವುದು, ವಯಸ್ಸಾದ ಮೇಲೆ ರಿಸ್ಕ್ ತೆಗೆದುಕೊಳ್ಳಬೇಕಾ, ಯಾವಾಗ ಈಕ್ವಿಟಿಯಿಂದ ಸಾಲಪತ್ರಗಳ ಕಡೆ ಹಣ ವರ್ಗಾಯಿಸಬೇಕು ಎಂಬ ಗೊಂದಲಗಳು ಹೂಡಿಕೆದಾರರನ್ನು ಕಾಡುತ್ತವೆ. ಸಾಮಾನ್ಯ ಜನರ ಈ ಗೊಂದಲಗಳಿಗೆ ಉತ್ತರವಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಈಗ 'ಲೈಫ್ ಸೈಕಲ್ ಮ್ಯೂಚುವಲ್ ಫಂಡ್' ಎಂಬ ಯೋಜನೆಯನ್ನು ತಂದಿದೆ.

ಸರಳವಾಗಿ ಹೇಳುವುದಾದರೆ, ಇದು ನಿಮ್ಮ ಜೀವನದ ವಿವಿಧ ಹಂತಗಳಿಗೆ ಅನುಗುಣವಾಗಿ ತನ್ನ ಹೂಡಿಕೆ ತಂತ್ರವನ್ನು ತಾನಾಗಿಯೇ ಬದಲಿಸಿಕೊಳ್ಳುವ ಒಂದು 'ಬುದ್ಧಿವಂತ' ಫಂಡ್. ಸಾಮಾನ್ಯವಾಗಿ ಒಬ್ಬ ಹೂಡಿಕೆದಾರ ತಾನು ಚಿಕ್ಕವನಿದ್ದಾಗ ಹೆಚ್ಚು ರಿಸ್ಕ್ ತೆಗೆದುಕೊಳ್ಳಬಹುದು ಮತ್ತು ವಯಸ್ಸಾದಂತೆ ಸುರಕ್ಷತೆಗೆ ಆದ್ಯತೆ ನೀಡಬೇಕು ಎನ್ನುವುದು ಹೂಡಿಕೆಯ ಮೂಲ ನಿಯಮ. ಸಾಮಾನ್ಯ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆದಾರ ತನ್ನ ಪೋರ್ಟ್‌ಫೋಲಿಯೊವನ್ನು ಯಾವಾಗ ಬದಲಿಸಬೇಕು ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಆದರೆ ಲೈಫ್ ಸೈಕಲ್ ಫಂಡ್‌ಗಳಲ್ಲಿ ಈ ಜವಾಬ್ದಾರಿಯನ್ನು ನಿಧಿ ನಿರ್ವಾಹಕ ಮತ್ತು ಅದರ 'ಸ್ವಯಂಚಾಲಿತ ವ್ಯವಸ್ಥೆ' (ಆಟೊಮ್ಯಾಟಿಕ್ ಸಿಸ್ಟಮ್) ನಿರ್ವಹಿಸುತ್ತದೆ.

ಇದು ಹೇಗೆ ಕೆಲಸ ಮಾಡುತ್ತದೆ?: ಲೈಫ್ ಸೈಕಲ್ ಫಂಡ್‌ನ ಪ್ರಮುಖ ಆಕರ್ಷಣೆ ಅದರ 'ಗ್ಲೈಡ್ ಪಾತ್' ಕಾರ್ಯವಿಧಾನ. ಅಂದರೆ, ನೀವು ಹೂಡಿಕೆಯ ಗುರಿಯಿಂದ ಎಷ್ಟು ದೂರದಲ್ಲಿದ್ದೀರಿ ಎನ್ನುವುದರ ಆಧಾರದ ಮೇಲೆ ಹೂಡಿಕೆ ಹಣದ ಹಂಚಿಕೆಯಾಗುತ್ತದೆ.

• **ಆರಂಭಿಕ ಹಂತ (ಯೌವನದ ಸಾಹಸ):** ನಿಮ್ಮ ವಯಸ್ಸು 25ರಿಂದ 35ರ ಆಸುಪಾಸಿನಲ್ಲಿದ್ದಾಗ, ಹೂಡಿಕೆಯ ಗುರಿ (ಉದಾಹರಣೆಗೆ ನಿವೃತ್ತಿ) ತಲುಪಲು 20-30 ವರ್ಷಗಳ ಕಾಲಾವಕಾಶವಿರುತ್ತದೆ. ಈ ಹಂತದಲ್ಲಿ ಫಂಡ್ ನಿಮ್ಮ ಹಣದ ಶೇ 65ರಿಂದ ಶೇ 95ರಷ್ಟು ಭಾಗವನ್ನು ಈಕ್ವಿಟಿ ಫಂಡ್‌ಗಳಲ್ಲಿ (ಷೇರು ಮಾರುಕಟ್ಟೆ) ಹೂಡಿಕೆ ಮಾಡುತ್ತದೆ. ಇದು ದೀರ್ಘಕಾಲದಲ್ಲಿ ನಿಮ್ಮ ಹಣವನ್ನು ವೇಗವಾಗಿ ಬೆಳೆಸಲು ನೆರವಾಗುತ್ತದೆ.

• **ಪರಿವರ್ತನಾ ಹಂತ (ಸಮತೋಲನ):** ನೀವು 40-45ರ ಹರೆಯಕ್ಕೆ ಬಂದಾಗ ಅಥವಾ ಗುರಿ ತಲುಪಲು 10 ವರ್ಷ ಬಾಕಿ ಇರುವಾಗ, ವ್ಯವಸ್ಥೆಯು ತಾನಾಗಿಯೇ ರಿಸ್ಕ್ ಕಡಿಮೆ ಮಾಡುತ್ತದೆ. ಷೇರು ಮಾರುಕಟ್ಟೆಯ ಹೂಡಿಕೆಯನ್ನು ಹಂತ ಹಂತವಾಗಿ ಕಡಿಮೆ ಮಾಡಿ, ಸುರಕ್ಷಿತವಾದ ಡೆಟ್ ಫಂಡ್‌ಗಳಿಗೆ ವರ್ಗಾಯಿಸುತ್ತದೆ.

• **ರಕ್ಷಣಾತ್ಮಕ ಹಂತ (ಭದ್ರತೆ):** ನಿಮ್ಮ ಗುರಿ ತಲುಪಲು 1-3 ವರ್ಷ ಬಾಕಿ ಇರುವಾಗ, ಗಳಿಸಿದ ಲಾಭಕ್ಕೆ ಯಾವುದೇ ಧಕ್ಕೆ ಬರಬಾರದು ಎನ್ನುವುದು ಮುಖ್ಯವಾಗುತ್ತದೆ. ಆಗ ಈ ಫಂಡ್ ಬಹುಪಾಲು ಹಣವನ್ನು (ಶೇ 65ರವರೆಗೆ) ಡೆಟ್ ಅಥವಾ ಸುರಕ್ಷಿತ ಹೂಡಿಕೆಗಳಲ್ಲಿ ಇರಿಸುತ್ತದೆ. ಇದರಿಂದ ಮಾರುಕಟ್ಟೆ ಕುಸಿದರೂ ನಿಮ್ಮ ಅಸಲು ಮತ್ತು ಗಳಿಸಿದ ಲಾಭ ಸುರಕ್ಷಿತವಾಗಿರುತ್ತದೆ. (ಪಟ್ಟಿ ಗಮನಿಸಿ)

ಪ್ರಮುಖ ಲಕ್ಷಣಗಳು ಮತ್ತು ನಿಯಮಗಳು: ಈ ಹೂಡಿಕೆ ಯೋಜನೆಯು ಅತ್ಯಂತ ಪಾರದರ್ಶಕವಾಗಿದ್ದು, ಫಂಡ್ ಮುಕ್ತಾಯವಾಗುವ ವರ್ಷವನ್ನು ಅದರ ಹೆಸರಿನಲ್ಲೇ ನಮೂದಿಸಲಾಗುತ್ತದೆ (ಉದಾಹರಣೆಗೆ: ಲೈಫ್ ಸೈಕಲ್ ಫಂಡ್ 2050). ಹೂಡಿಕೆದಾರರು ತಮ್ಮ ಅನುಕೂಲಕ್ಕೆ ಅನುಗುಣವಾಗಿ 5ರಿಂದ 30 ವರ್ಷಗಳವರೆಗಿನ ವಿವಿಧ ಅವಧಿಯ ಫ್ಲಾನ್‌ಗಳನ್ನು ಆರಿಸಿಕೊಳ್ಳುವ ಅವಕಾಶವಿದೆ. ಹೂಡಿಕೆಯಲ್ಲಿ ಶಿಸ್ತನ್ನು ಕಾಪಾಡಲು ಸೆಬಿ ಇಲ್ಲಿ ಕಟ್ಟುನಿಟ್ಟಾದ ಎಕ್ಸಿಟ್ ಲೋಡ್ ನಿಯಮಗಳನ್ನು ಜಾರಿಗೆ ತಂದಿದೆ. ಒಂದು ವೇಳೆ ನಿಗದಿತ ಅವಧಿಗಿಂತ ಮುಂಚಿತವಾಗಿ ಹಣ ಹಿಂಪಡೆದರೆ, ಅಂದರೆ ಮೊದಲ 1 ವರ್ಷದೊಳಗೆ ಶೇ 3, 2 ವರ್ಷದೊಳಗೆ ಶೇ 2 ಮತ್ತು 3 ವರ್ಷದೊಳಗೆ ಶೇ 1ರಷ್ಟು ದಂಡವನ್ನು ಪಾವತಿಸಬೇಕಾಗುತ್ತದೆ.

ಈ ಫಂಡ್‌ನಿಂದ ಹೂಡಿಕೆದಾರರಿಗಾಗುವ ಲಾಭಗಳು: ಲೈಫ್ ಸೈಕಲ್ ಫಂಡ್‌ನ ದೊಡ್ಡ ಅನುಕೂಲವೆಂದರೆ ಇದರ 'ಸೆಟ್ ಆ್ಯಂಡ್ ಫರ್ಗೆಟ್' ವ್ಯವಸ್ಥೆ. ಹೂಡಿಕೆದಾರರು ಒಮ್ಮೆ ಹಣ ತೊಡಗಿಸಿದರೆ ಸಾಕು, ಮಾರುಕಟ್ಟೆಯ ಏರಿಳಿತಕ್ಕೆ ತಕ್ಕಂತೆ ಪೋರ್ಟ್‌ಫೋಲಿಯೊವನ್ನು ಮರು ಸಮತೋಲನ ಮಾಡುವ ಜವಾಬ್ದಾರಿಯನ್ನು ಫಂಡ್ ಹೌಸ್ ನಿರ್ವಹಿಸುತ್ತದೆ. ಅಲ್ಲದೆ, ಫಂಡ್‌ನ ಒಳಗಡೆ ನಡೆಯುವ ಆಂತರಿಕ ವರ್ಗಾವಣೆಗಳಿಗೆ ತೆರಿಗೆ ಹೊರೆ ಇರುವುದಿಲ್ಲ. ಇದು ಹೂಡಿಕೆದಾರರಿಗೆ ತೆರಿಗೆ ಉಳಿತಾಯ ಮಾಡಲು ನೆರವಾಗುತ್ತದೆ. ಷೇರು ಮಾರುಕಟ್ಟೆಯಷ್ಟೇ ಅಲ್ಲದೆ ಸರ್ಕಾರಿ ಸಾಲಪತ್ರಗಳು, ಚಿನ್ನ, ಬೆಳ್ಳಿ ಮತ್ತು ರಿಯಲ್ ಎಸ್ಟೇಟ್‌ನಂತಹ ವಿವಿಧ ಕ್ಷೇತ್ರಗಳಲ್ಲಿ ಹಣ ಹಂಚಿಕೆಯಾಗುವುದರಿಂದ ಹೂಡಿಕೆಯು ಹೆಚ್ಚು ಸುರಕ್ಷಿತವಾಗಿ ಮತ್ತು ಲಾಭದಾಯಕವಾಗಿ ಇರುತ್ತದೆ.

ಲೈಫ್ ಸೈಕಲ್ ಮ್ಯೂಚುವಲ್ ಫಂಡ್ ಭಾರತದ ಸಾಮಾನ್ಯ ಹೂಡಿಕೆದಾರರಿಗೆ ಸಿಕ್ಕ ದೊಡ್ಡ ಕೊಡುಗೆ. ನಿವೃತ್ತಿ ಜೀವನದ ನಿಧಿ ಅಥವಾ ಮಕ್ಕಳ ಉನ್ನತ ಶಿಕ್ಷಣದಂತಹ ದೊಡ್ಡ ಕನಸುಗಳನ್ನು ಹೊಂದಿರುವವರು ಈ ಹಾದಿಯನ್ನು ಧೈರ್ಯವಾಗಿ ಆರಿಸಿಕೊಳ್ಳಬಹುದು. ಮಾರುಕಟ್ಟೆಯ ಗೊಂದಲವಿಲ್ಲದ, ಶಿಸ್ತುಬದ್ಧವಾಗಿ ಹಣ ಬೆಳೆಸಲು ಇದು ಅತ್ಯುತ್ತಮ ಮಾರ್ಗ. ಸದ್ಯದಲ್ಲೇ ವಿವಿಧ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಗಳು (ಹೂಡಿಕೆ ನಿರ್ವಹಣಾ ಕಂಪನಿಗಳು) ಈ ಫಂಡ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿವೆ. ಹೂಡಿಕೆ ಮಾಡುವ ಮುನ್ನ ನಿಮ್ಮ ಹಣಕಾಸು ಗುರಿಯನ್ನು ಸ್ಪಷ್ಟಪಡಿಸಿಕೊಳ್ಳಿ ಮತ್ತು ಸರಿಯಾದ 'ಟಾರ್ಗೆಟ್ ಡೇಟ್' ಇರುವ ಫಂಡ್ ಆರಿಸಿಕೊಳ್ಳಿ.

ನೌಕರರ ವಜಾ: ಉತ್ತರದಾಯಿತ್ವಕ್ಕೆ ಆಗ್ರಹ

ಉದ್ಯೋಗಿಗಳಿಗೆ ಹೊಸ ಕೌಶಲ ತರಬೇತಿ ನೀಡುವಂತೆ ಕಂಪನಿಗಳಿಗೆ ಎನ್‌ಐಟಿಇಎಸ್ ಮನವಿ

ನವದೆಹಲಿ (ಪಿಟಿಐ): ನೌಕರರನ್ನು ಕೆಲಸದಿಂದ ತೆಗೆಯುವ ಬದಲು, ಅವರಿಗೆ ಹೊಸದಾಗಿ ಕೌಶಲ ತರಬೇತಿ ನೀಡುವುದನ್ನು ಆದ್ಯತೆ ಆಗಿಸಿಕೊಳ್ಳಬೇಕು ಎಂದು ಐಟಿ ವಲಯದ ನೌಕರರ ಸಂಘಟನೆ ಎನ್‌ಐಟಿಇಎಸ್, ಕಂಪನಿಗಳಿಗೆ ಮನವಿ ಮಾಡಿದೆ.

ತಂತ್ರಜ್ಞಾನ ವಲಯದ ಕಂಪನಿಗಳ ಲಾಭದ ಪ್ರಮಾಣ ಚೆನ್ನಾಗಿಯೇ ಇದ್ದರೂ, ಉದ್ಯೋಗದ ಭದ್ರತೆ ದುರ್ಬಲಗೊಳ್ಳುತ್ತಿರುವುದು ಕಾರ್ಪೊರೇಟ್ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಸಂಘಟನೆ ಹೇಳಿದೆ.

'ಕಂಪನಿಗಳು ಎಐ (ಕೃತಕ ಬುದ್ಧಿಮತ್ತೆ) ಮೇಲೆ ಹೂಡಿಕೆ ಮಾಡುತ್ತಿವೆ ಎಂದಾದರೆ ಅವು ತಮ್ಮ ನೌಕರರಿಗೆ ಹೊಸ ಕೌಶಲ ಕಲಿಸುವುದರ ಮೇಲೆಯೂ ಹೂಡಿಕೆ ಮಾಡಬೇಕು' ಎಂದು ಸಂಘಟನೆಯ ಅಧ್ಯಕ್ಷ ಹರ್‌ಪ್ರೀತ್ ಸಿಂಗ್ ಸಲೂಜಾ ಒತ್ತಾಯಿಸಿದ್ದಾರೆ.



ಕೆಲಸದಿಂದ ತೆಗೆಯುವುದು ಕಡೆಯ ಆಯ್ಕೆಯಾಗಿರಬೇಕು, ಅದು ಮೊದಲ ಆಯ್ಕೆ ಆಗಬಾರದು. ನೀತಿ ನಿರೂಪಕರು ನೌಕರರ ರಕ್ಷಣೆಗೆ ಈ ವಿಚಾರದಲ್ಲಿ ಮಧ್ಯಪ್ರವೇಶಿಸಬೇಕು. ಕೆಲಸದಿಂದ ನೌಕರರನ್ನು ತೆಗೆಯುವುದಕ್ಕೆ ಸ್ಪಷ್ಟವಾದ ನಿಯಮಗಳು ಇರಬೇಕು, ನ್ಯಾಯಸಮ್ಮತವಾದ ಪರಿಹಾರ ಮೊತ್ತವನ್ನು ನೌಕರರಿಗೆ ನೀಡಬೇಕು, ಉದ್ಯೋಗದಾತರು ಉತ್ತರದಾಯಿತ್ವ ಪ್ರದರ್ಶಿಸಬೇಕು ಎಂದು ಹೇಳಿದ್ದಾರೆ.

'ನೌಕರರನ್ನು ಸಾಮೂಹಿಕವಾಗಿ ಕೆಲಸದಿಂದ ತೆಗೆಯುವಾಗ ಉತ್ತರದಾಯಿತ್ವ ಇರಬೇಕು. ನೌಕರರು ತಮ್ಮ ಹಕ್ಕುಗಳ ಬಗ್ಗೆ ಅರಿತುಕೊಳ್ಳಬೇಕು, ತಮ್ಮ ಕೌಶಲವನ್ನು ನಿರಂತರವಾಗಿ ಹೆಚ್ಚು ಮಾಡಿಕೊಳ್ಳುತ್ತ ಇರಬೇಕು' ಎಂದು ಅವರು ಕಿವಿಮಾತು ಹೇಳಿದ್ದಾರೆ.

'ನ್ಯಾಯಸಮ್ಮತವಲ್ಲದ ಬಗೆಯಲ್ಲಿ ನೌಕರರನ್ನು ಕೆಲಸದಿಂದ ತೆಗೆಯುವ ವಿಚಾರವನ್ನು, ಒತ್ತಾಯದಿಂದ ಸಾಮೂಹಿಕವಾಗಿ ರಾಜೀನಾಮೆ ಪಡೆಯುವುದನ್ನು, ಕಾನೂನು ಪ್ರಕ್ರಿಯೆ ಪಾಲನೆ ಆಗದೆ ಇರುವುದನ್ನು ನಾವು ಸರ್ಕಾರಿ ಅಧಿಕಾರಿಗಳ ಮುಂದೆ ಪ್ರಸ್ತಾಪಿಸುತ್ತಲೇ ಇದ್ದೇವೆ. ಇನ್ನು ಮುಂದೆ ನಾವು ನಿಯಮಗಳಲ್ಲಿ ಬದಲಾವಣೆ, ನಿಯಮಗಳ ಕಟ್ಟುನಿಟ್ಟಿನ ಜಾರಿಗೆ, ನೌಕರರನ್ನು ರಕ್ಷಿಸುವುದಕ್ಕೆ ವ್ಯವಸ್ಥೆ ಚೌಕಟ್ಟು ರೂಪುಗೊಳ್ಳಬೇಕು ಎಂಬುದರ ಬಗ್ಗೆ ಕೆಲಸ ಮಾಡಲಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಒರ್ಯಾಕಲ್, ಗೂಗಲ್, ಮೆಟಾ ತಮ್ಮಲ್ಲಿನ ಉದ್ಯೋಗಗಳ ಸಂಖ್ಯೆ ತಗ್ಗಿಸಿವೆ. ಈಚೆಗೆ ಒರ್ಯಾಕಲ್ ಕಂಪನಿ ಭಾರತದಲ್ಲಿ 12 ಸಾವಿರ ನೌಕರರನ್ನು ಕೆಲಸದಿಂದ ತೆಗೆದಿದೆ ಎಂದು ವರದಿಯಾಗಿದೆ.

ಕಳೆದ ಕೆಲವು ತಿಂಗಳುಗಳಿಂದ ತಂತ್ರಜ್ಞಾನ ವಲಯದ ಉದ್ದಿಮೆಗಳು ನೌಕರರ ಸಂಖ್ಯೆ ಕಡಿಮೆ ಮಾಡುತ್ತಿವೆ.

ಉದ್ಯೋಗ ಖೋತಾ: ತಜ್ಞರು ಹೇಳುವುದೇನು?

- ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ತಂತ್ರಜ್ಞಾನ ವಲಯದ ಕಂಪನಿಗಳು ಅತಿಯಾಗಿ ನೇಮಕಾತಿ ನಡೆಸಿದವು. ಅದನ್ನು ಸರಿಪಡಿಸಿಕೊಳ್ಳಲು ಅವು ಈಗ ಮುಂದಾಗಿವೆ. ಜೊತೆಯಲ್ಲಿ ಎಐ ಕೂಡ ನೌಕರರ ಸಂಖ್ಯೆ ತಗ್ಗಿಸುವುದಕ್ಕೆ ಕಾರಣವಾಗಿದೆ ಎಂಬುದು ತಜ್ಞರ ಅಭಿಪ್ರಾಯ
- ಎಐ ಕಾರಣದಿಂದ ನೌಕರರನ್ನು ಕೆಲಸದಿಂದ ತೆಗೆಯಲಾಗುತ್ತಿದೆ ಎಂದು ಕಂಪನಿಗಳು ಹೇಳುತ್ತವೆಯಾದರೂ ಸತ್ಯವು ಹೆಚ್ಚು ಸಂಕೀರ್ಣವಾಗಿರಬಹುದು ಎಂದು ತಜ್ಞರು ಹೇಳುತ್ತಾರೆ
- ಎಐ ಮೂಲಸೌಕರ್ಯ ನಿರ್ಮಾಣಕ್ಕೆ ಭಾರಿ ಮೊತ್ತ ಹೂಡಿಕೆ ಮಾಡಲಾಗುತ್ತಿದೆ. ವೆಚ್ಚ ಕಡಿತಕ್ಕೆ, ಹೂಡಿಕೆದಾರರಿಂದ ಬರುವ ಒತ್ತಡದ ಕಾರಣಕ್ಕೆ ನೌಕರರನ್ನು ಕೆಲಸದಿಂದ ತೆಗೆಯಲಾಗುತ್ತಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ
- ಜಗತ್ತಿನ 70ಕ್ಕೂ ಹೆಚ್ಚು ಕಂಪನಿಗಳು ಈ ವರ್ಷದಲ್ಲಿ 40 ಸಾವಿರಕ್ಕೂ ಹೆಚ್ಚು ಮಂದಿಯನ್ನು ಕೆಲಸದಿಂದ ತೆಗೆದಿವೆ ಎಂಬ ಮಾಹಿತಿ Layoffs.fyi ವೆಬ್‌ಸೈಟ್‌ನಲ್ಲಿದೆ

ಎಲ್‌ಪಿಜಿಗಾಗಿ ಸರದಿ

ಪಿಟಿಐ ಚಿತ್ರ



ಚಿಕ್ಕಮಗಳೂರಿನಲ್ಲಿ ಭಾನುವಾರ ಎಲ್‌ಪಿಜಿ ಭರ್ತಿ ಮಾಡಿಕೊಳ್ಳಲು ಸರದಿಗಾಗಿ ಕಾಯುತ್ತಿದ್ದ ಆಟೊ ಚಾಲಕರು

ಕಾರ್ಗಿಲ್: ಒಗ್ಗಟ್ಟಿಗೆ ವಾಂಗ್ಚುಕ್ ಕರೆ

ಕಾರ್ಗಿಲ್ (ಪಿಟಿಐ): ಪರಿಸರ ಹೋರಾಟಗಾರ ಸೋನಂ ವಾಂಗ್ಚುಕ್ ಅವರನ್ನು ಕಾರ್ಗಿಲ್‌ನಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು.



ಸೋನಂ ವಾಂಗ್ಚುಕ್

ಕಾರಾಗೃಹದಿಂದ ಬಿಡುಗಡೆಯಾದ ಬಳಿಕ ವಾಂಗ್ಚುಕ್ ಅವರು ಇದೇ ಮೊದಲ ಬಾರಿಗೆ ಕಾರ್ಗಿಲ್‌ಗೆ ಭಾನುವಾರ ಭೇಟಿ ನೀಡಿದರು.

ಇಲ್ಲಿ ಮಾತನಾಡಿದ ವಾಂಗ್ಚುಕ್ ಅವರು, ಕೇಂದ್ರಾಡಳಿತ ಪ್ರದೇಶ ಲಡಾಖ್‌ಗೆ ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ಒದಗಿಸುವ ಬೇಡಿಕೆಯನ್ನು ಪುನರುಚ್ಚರಿಸಿದರು. ತಮ್ಮ ಬಂಧನದ ಸಮಯದಲ್ಲಿ ಬೆಂಬಲ ನೀಡಿದ್ದಕ್ಕಾಗಿ ನಾಗರಿಕರು ಹಾಗೂ ಸಂಘಟನೆಗಳಿಗೆ ಧನ್ಯವಾದ ತಿಳಿಸಿದರು. ಲಡಾಖ್ ಮತ್ತು ದೇಶದಾದ್ಯಂತ ಒಗ್ಗಟ್ಟಿಗೆ ಕರೆ ನೀಡಿದರು.

'ಜನರು ಎಲ್ಲಾ ಭೇದಗಳನ್ನು ಮೀರಿ, ಉತ್ತಮ ಭವಿಷ್ಯಕ್ಕಾಗಿ ಸಾಮೂಹಿಕವಾಗಿ ಕೆಲಸ ಮಾಡಬೇಕು. ಮಾನವೀಯತೆ ಮತ್ತು ಭಾರತೀಯತೆಯ ಭಾವನೆಯಿಂದ ನಾವು ಒಗ್ಗೂಡಬೇಕು. ನಾವು ಶಾಂತಿಪ್ರಿಯರು. ನಮ್ಮ ಪ್ರತಿಭಟನೆಯನ್ನು ಯಾವಾಗಲೂ ಶಾಂತಿ ಮತ್ತು ಘನತೆಯಿಂದ ವ್ಯಕ್ತಪಡಿಸುತ್ತೇವೆ. ಆದರೆ ನಮ್ಮ ತಾಳ್ಮೆಯನ್ನು ಪರೀಕ್ಷಿಸಬಾರದು' ಎಂದರು.

ಲಡಾಖ್‌ಗೆ ರಾಜ್ಯ ಸ್ಥಾನಮಾನವನ್ನು ನೀಡುವಂತೆ ಒತ್ತಾಯಿಸಿ ಆಂದೋಲನವನ್ನು ಮುನ್ನಡೆಸುತ್ತಿರುವ ಕಾರ್ಗಿಲ್ ಡೆಮಾಕ್ರಟಿಕ್ ಅಲಯನ್ಸ್ (ಕೆಡಿಎ) ಮತ್ತು ಲೇಹ್ ಅಪೆಕ್ಸ್ ನಿಯೋಗ (ಎಲ್‌ಎಬಿ) ನಾಯಕರನ್ನು ವಾಂಗ್ಚುಕ್ ಭೇಟಿಯಾದರು.

ಹೊರ್ಮುಜ್ ಮುಕ್ತ ಕುರಿತು ಇರಾನ್ –ಒಮಾನ್ ಮಾತುಕತೆ

ಮಸ್ಕತ್ (ಎಎಫ್‌ಪಿ): ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಕುರಿತು ಇರಾನ್ ಮತ್ತು ಒಮಾನ್ ಮಾತುಕತೆ ನಡೆಸಿವೆ ಎಂದು ಒಮಾನ್‌ನ ಸರ್ಕಾರಿ ಒಡೆತನದ ಸುದ್ದಿ ಸಂಸ್ಥೆ ಭಾನುವಾರ ವರದಿ ಮಾಡಿದೆ.

ಉಭಯ ದೇಶಗಳ ವಿದೇಶಾಂಗ ಸಚಿವಾಲಯಗಳ ಉಪ ಸಚಿವರ ಮಟ್ಟದಲ್ಲಿ ಸಭೆ ನಡೆಸಲಾಗಿದೆ. ಈ ವೇಳೆ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವ ಕುರಿತು ಚರ್ಚಿಸಲಾಯಿತು' ಎಂದು ಸುದ್ದಿಸಂಸ್ಥೆಯು ತಿಳಿಸಿದೆ.

ಅಮೆರಿಕ ಯುದ್ಧ ವಿಮಾನದ ಮೇಲೆ ಇರಾನ್ ದಾಳಿ; ಸಿನಿಮೀಯ ರೀತಿಯ ರಕ್ಷಣಾ ಕಾರ್ಯಾಚರಣೆ

ಪೈಲಟ್ ರಕ್ಷಣೆ: ಟ್ರಂಪ್ ಘೋಷಣೆ


ವಾಷಿಂಗ್ಟನ್ (ಎಪಿ): 'ಅಮೆರಿಕದ ಯುದ್ಧ ವಿಮಾನವನ್ನು ಇರಾನ್ ಹೊಡೆದುರುಳಿಸಿದ ಬಳಿಕ ನಾಪತ್ತೆಯಾಗಿದ್ದ ಪೈಲಟ್ ಅನ್ನು ಸುರಕ್ಷಿತವಾಗಿ ರಕ್ಷಣೆ ಮಾಡಲಾಗಿದೆ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಟ್ರುತ್ ಸೋಷಿಯಲ್'ನಲ್ಲಿ ತಿಳಿಸಿದ್ದಾರೆ.

'ಎಫ್–15 ಈಗಲ್' ಪತನಗೊಳ್ಳುತ್ತಿದ್ದಂತೆಯೇ, ಅಮೆರಿಕವು ದೊಡ್ಡ ಪ್ರಮಾಣದಲ್ಲಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿತು. ಶತ್ರುದೇಶದ ಪ್ರದೇಶ ಒಳಗೆ ಹುಡುಕಾಟ ನಡೆಸಲು ಅಮೆರಿಕದ ಪಡೆಗಳು ಬೃಹತ್ ಪ್ರಮಾಣದ ಕಾರ್ಯಾಚರಣೆ ನಡೆಸಿದವು' ಎಂದು ಇರಾನ್ ಘೋಷಿಸಿತ್ತು.

ಯುದ್ಧ ಆರಂಭವಾದ ಬಳಿಕ ಇರಾನ್‌ನ ವಾಯುಪ್ರದೇಶದಲ್ಲಿ ಅಮೆರಿಕವು ತನ್ನ ವಿಮಾನವನ್ನು ಕಳೆದುಕೊಂಡಿದ್ದು ಇದೇ ಮೊದಲು. ವಿಮಾನದಲ್ಲಿದ್ದ ಇಬ್ಬರು ಪೈಲಟ್‌ಗಳು ಕೆಳಕ್ಕೆ ಜಿಗಿದಿದ್ದರು. ಒಬ್ಬರನ್ನು ರಕ್ಷಿಸಿದ್ದರೆ, ಮತ್ತೊಬ್ಬರು ನಾಪತ್ತೆಯಾಗಿದ್ದರು.

'ಧೈರ್ಯಶಾಲಿ ಯೋಧ ಶತ್ರುರಾಷ್ಟ್ರ ಇರಾನ್‌ನ ಅಪಾಯಕಾರಿ ಪರ್ವತಗಳಲ್ಲಿ ಸಿಲುಕಿದ್ದರು. ಶತ್ರುಗಳಿಗೆ ತೀರಾ ಸಮೀಪದಲ್ಲಿ ಇದ್ದರು. ಆದರೂ ಬದುಕುಳಿದು ಹೋರಾಟ ಮುಂದುವರಿಸಿದ್ದರು. ಯೋಧ ಗಾಯಗೊಂಡಿದ್ದರೂ, ಸುರಕ್ಷಿತವಾಗಿದ್ದಾರೆ' ಎಂದು ಟ್ರಂಪ್ ಬರೆದುಕೊಂಡಿದ್ದಾರೆ.

ಸಿನಿಮೀಯ ಕಾರ್ಯಾಚರಣೆ: ಪೈಲಟ್ ನಾಪತ್ತೆಯಾದಂದಿನಿಂದ ಹುಡುಕಾಟ ನಡೆಸುತ್ತಿದ್ದ ಅಮೆರಿಕ ರಕ್ಷಣಾ ಪಡೆಗೂ ಪ್ರತಿರೋಧವಾಗಿತ್ತು. ಇರಾನ್‌ನ



ಲೆಬನಾನ್‌ನ ಬೈರೂತ್ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದ ಬಳಿಕ ದಟ್ಟ ಹೊಗೆ ಆವರಿಸಿತ್ತು –ಎಎಫ್‌ಪಿ ಚಿತ್ರ

ವಾಯುಪ್ರದೇಶದ ಒಳಗೆ ನುಗ್ಗಿ, ತೀವ್ರ ಕ್ಷಿಪಣಿ ದಾಳಿಯ ನಡುವೆಯೂ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿರುವುದು 'ಪವಾಡ' ಎಂದು ಟ್ರಂಪ್ ಬಣ್ಣಿಸಿದ್ದಾರೆ.

ಶೋಧ ನಡೆದಿದ್ದು ಹೇಗೆ?: 'ವಿಮಾನದಿಂದ ಹಾರಿದ 24 ಗಂಟೆಗಳಲ್ಲಿಯೇ ಪೈಲಟ್ ಇರುವ ಸ್ಥಳವನ್ನು ಅಮೆರಿಕ ಸೇನೆ ಪತ್ತೆಹಚ್ಚಿತ್ತು. ಅವರ ಹತ್ತಿರ ಸುಳಿಯದಂತೆ, 'ಇರಾನ್ ಪಡೆಗಳನ್ನು ಗುರಿಯಾಗಿಸಿ ಎಫ್–35 ಯುದ್ಧ ವಿಮಾನ, ಡ್ರೋನ್‌ಗಳ ಮೂಲಕ ದೊಡ್ಡ ಪ್ರಮಾಣದ ಬಾಂಬ್ ದಾಳಿ ನಡೆಸಿತು. ವಿಶೇಷ ರಕ್ಷಣಾ ಕಾರ್ಯಾಚರಣೆ ಯೋಧರು 'ಎಚ್‌ಎಚ್-60 ಜಾಲಿ ಗ್ರೀನ್'

ಸರಣಿಯ ಹೆಲಿಕಾಪ್ಟರ್ ಬಳಸಿಕೊಂಡು ಪೈಲಟ್ ಇದ್ದ ಜಾಗಕ್ಕೆ ತೆರಳಿ ರಕ್ಷಣೆ ಮಾಡಿದ್ದಾರೆ. 'ಎ-10 ವಾರ್ತ್‌ಹಾಗ್' ಜೆಟ್‌ಗಳು ರಕ್ಷಣಾ ತಂಡಗಳಿಗೆ ಅಗತ್ಯ ಭದ್ರತೆ ಒದಗಿಸಿದೆ' ಎಂದು 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

'ವಿಮಾನದಿಂದ ಹಾರಿದ್ದ ಪೈಲಟ್, ಶತ್ರುಗಳಿಂದ ತಪ್ಪಿಸಿಕೊಳ್ಳಲು ಗಾಯದ ನಡುವೆಯೇ ಹ್ಯಾಂಡ್‌ಗನ್ ಹಿಡಿದುಕೊಂಡು 7 ಸಾವಿರ ಅಡಿ ಎತ್ತರದ ಬೆಟ್ಟ ಏರಿದ್ದರು' ಎಂದು ತಿಳಿಸಿದೆ.

ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ನೇತೃತ್ವದಲ್ಲಿ ಪೆಂಟಗಾನ್‌ನೊಂದಿಗೆ ನಿರಂತರ ಸಂಪರ್ಕ ಸಾಧಿಸಿ, ಯಶಸ್ವಿ ಕಾರ್ಯಾಚರಣೆ ನಡೆಸಿದೆ. ಯುದ್ಧಭೂಮಿಯಲ್ಲಿ ಇತ್ತೀಚಿನ ದಶಕಗಳಲ್ಲಿ ನಡೆದ ಅತ್ಯಂತ ಯಶಸ್ವಿ ರಕ್ಷಣಾ ಕಾರ್ಯಾಚರಣೆ ಇದಾಗಿದೆ ಎಂದು ರಕ್ಷಣಾ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ರಕ್ಷಣಾ ಕಾರ್ಯಾಚರಣೆಯಲ್ಲಿ ಅಮೆರಿಕ ಸೇನೆಯು ಐದು ಸರಕು ಯುದ್ಧ ವಿಮಾನಗಳನ್ನು ಬಳಸಿಕೊಳ್ಳಲಾಗಿತ್ತು. ಈ ಪೈಕಿ ಎರಡು ವಿಮಾನಗಳು ಇರಾನ್‌ನಿಂದ ಹಾರಲು ಸಾಧ್ಯವಾಗಲಿಲ್ಲ. ಅವುಗಳು ಇರಾನ್ ಕೈಗೆ ಸಿಗದಂತೆ ತಡೆಯುವ ನಿಟ್ಟಿನಲ್ಲಿ ಅಮೆರಿಕ ಸೈನಿಕರೇ ಅವನ್ನು ನಾಶಪಡಿಸಿದ್ದಾರೆ' ಎಂದು 'ಸಿಬಿಎಸ್ ನ್ಯೂಸ್' ವರದಿ ಮಾಡಿದೆ.

ನಾಶಪಡಿಸಿದ ಸರಕು ವಿಮಾನಗಳ ಬೆಲೆ ತಲಾ 100 ಮಿಲಿಯನ್ ಡಾಲರ್ (₹800 ಕೋಟಿ) ಎಂದು ಹೇಳಲಾಗಿದೆ.

'ಅಮೆರಿಕ ಸೇನೆಯ ಪಾಲಿಗೆ ನಿಜವಾಗಿಯೂ ಇದೊಂದು ಸತ್ವ ಪರೀಕ್ಷೆಯಾಗಿತ್ತು. ದೇಶದ ಯಾವುದೇ ಸೈನಿಕನನ್ನು ಶತ್ರುರಾಷ್ಟ್ರದ ವಶಕ್ಕೆ ಒಪ್ಪಿಸಲು ಅದು ಸಿದ್ಧವಿರಲಿಲ್ಲ' ಎಂದು ಅಸ್ಟ್ರೇಲಿಯಾ ರಾಷ್ಟ್ರೀಯ ವಿಶ್ವವಿದ್ಯಾಲಯದ ಪಶ್ಚಿಮ ಏಷ್ಯಾ-ಮಧ್ಯ ಏಷ್ಯಾ ಅಧ್ಯಯನಗಳ ವಿಭಾಗದ ಪ್ರಾಧ್ಯಾಪಕ ಅಮೀನ್ ಸೈಕಲ್ 'ಅಲ್ ಜಜೀರಾ' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಈ ರಕ್ಷಣಾ ಕಾರ್ಯಾಚರಣೆಯು ಟ್ರಂಪ್ ಅವರಿಗೆ ಯೋಜಿತವಾಗಿರುವುದು ಜಾರಿಗೊಳಿಸುವ ಹಾದಿಯನ್ನು ಮುಕ್ತಗೊಳಿಸಿದೆ' ಎಂದು ಅವರು ಇದೇ ವೇಳೆ ತಿಳಿಸಿದರು.

ಕೊಲ್ಲಿ ರಾಷ್ಟ್ರಗಳ ಮೂಲಸೌಕರ್ಯದ ಮೇಲೆ ದಾಳಿ

ಕೊಲ್ಲಿ ರಾಷ್ಟ್ರಗಳನ್ನು ಗುರಿಯಾಗಿರಿಸಿಕೊಂಡು ಇರಾನ್ ಭಾನುವಾರ ನಡೆಸಿದ ಡ್ರೋನ್ ದಾಳಿಯಿಂದ ಕುವೈತ್‌ನ ಎರಡು ವಿದ್ಯುತ್ ಘಟಕ ಹಾಗೂ ನಿರ್ಲವಣೀಕರಣ ಘಟಕವು ಸಂಪೂರ್ಣವಾಗಿ ಹಾನಿಯಾಗಿದೆ ಎಂದು ಕುವೈತ್‌ನ ಇಂಧನ ಸಚಿವಾಲಯ ತಿಳಿಸಿದೆ. ದಾಳಿಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ತಿಳಿಸಿದೆ.

ಬಹರೇನ್‌ನ ರಾಷ್ಟ್ರೀಯ ತೈಲ ಕಂಪನಿಯ ಸಂಗ್ರಹಣಾ ಕೇಂದ್ರದ ಮೇಲೂ ಡ್ರೋನ್ ದಾಳಿ ನಡೆದಿದೆ. ನಷ್ಟದ ಅಂದಾಜು ಇನ್ನೂ ಲೆಕ್ಕ ಹಾಕಲಾಗುತ್ತಿದ್ದು, ಯಾವುದೇ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಬುಧಾಬಿ ರಾಷ್ಟ್ರೀಯ ತೈಲ ಕಂಪನಿ ಹಾಗೂ ಆಸ್ಟ್ರಿಯಾದ ಬೊರಿಲಿಸ್ ಸಂಸ್ಥೆಯ ಜಂಟಿ ಸಹಭಾಗಿತ್ವದ ಬೊರೂಜ್ ಪೆಟ್ರೋಕೆಮಿಕಲ್ ಘಟಕದ ಮೇಲೂ ಇರಾನ್ ಹಲವು ಕ್ಷಿಪಣಿ ದಾಳಿ ನಡೆಸಿತು. ವಾಯುರಕ್ಷಣಾ ವ್ಯವಸ್ಥೆಯು ಯಶಸ್ವಿಯಾಗಿ ತಡೆಯುವಲ್ಲಿ, ಅವಶೇಷಗಳಿಂದ ಸಣ್ಣ ಪ್ರಮಾಣದ ಬೆಂಕಿ ಹೊತ್ತಿಕೊಂಡಿತ್ತು. ಮುಂಜಾಗ್ರತಾ ಕ್ರಮವಾಗಿ ಉತ್ಪಾದನಾ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

ಮತ್ತೊಂದು ಜಲಸಂಧಿ ಮೇಲೂ ಇರಾನ್ ಕಣ್ಣು

ಹೊರ್ಮುಜ್ ಜಲಸಂಧಿಯ ಮೇಲೆ ಹಿಡಿತ ಸಾಧಿಸಿರುವ ಇರಾನ್ ಇದೀಗ ಮತ್ತೊಂದು ಪ್ರಮುಖ ಜಲಮಾರ್ಗ ಸ್ಥಗಿತಗೊಳಿಸುವ ಬೆದರಿಕೆ ಹಾಕಿದೆ.

'ಬಾಬ್-ಎಲ್-ಮಂಡೆಬ್ ಜಲಸಂಧಿಯ ಮೂಲಕ ಸರಕು ಸಾಗಣೆಗೆ ತಡೆಯೊಡ್ಡಲಾಗುವುದು' ಎಂದು ಇರಾನ್‌ನ ಸ್ಪೀಕರ್ ಮೊಹಮ್ಮದ್ ಬಘೇರ್ ಖಾಲಿಬಾಫ್ ಎಚ್ಚರಿಕೆ ನೀಡಿದ್ದಾರೆ. 'ಯಾವ ದೇಶದ ಯಾವ ಕಂಪನಿಗಳ ಸರಕುಗಳು ಈ ಜಲಸಂಧಿಯ ಮೂಲಕ ಸಾಗುತ್ತವೆ' ಎಂದು ಪ್ರಶ್ನಿಸಿದ್ದಾರೆ.

ಈ ಜಲಸಂಧಿಯು 32 ಕಿ.ಮೀ. ಅಗಲ ಇದ್ದು, ಕೆಂಪುಸಮುದ್ರ ಮತ್ತು ಏಡನ್ ಕೊಲ್ಲಿ ಹಾಗೂ ಹಿಂದೂ ಮಹಾಸಾಗರಕ್ಕೆ ಸಂಪರ್ಕ ಕಲ್ಪಿಸುತ್ತದೆ.

ಇರಾನ್ ವಿರುದ್ಧ ಟ್ರಂಪ್ ಅಶ್ಲೀಲ ವಾಗ್ದಾಳಿ

ಒಂದೇ ಪುಟದಿಂದ...

ವಿದ್ಯುತ್ ಸ್ಥಾವರಗಳು, ನಿರ್ಲವಣೀಕರಣ ಘಟಕಗಳ ಮೇಲೆ ಎರಡೂ ಪಡೆಗಳವರು ನಡೆಸಿರುವ ದಾಳಿಗಳಿಂದಾಗಿ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಸಂಘರ್ಷವು ಯುದ್ಧಾಪರಾಧದ ಸ್ವರೂಪ ಪಡೆಯುತ್ತಿರುವುದಕ್ಕೆ ಈ ಬೆಳವಣಿಗೆಗಳು ಸೂಚಕವಾಗಿವೆ.

'ವಿದ್ಯುತ್ ಸ್ಥಾವರಗಳು, ಸೇತುವೆಗಳ ಮೇಲೆ ದಾಳಿ ನಡೆದರೆ ಮೊದಲಿಗೆ ಅದರ ಬಿಸಿ ತಟ್ಟುವುದು ಇರಾನ್‌ನ ನಾಗರಿಕರಿಗೆ. ಟ್ರಂಪ್ ಎಚ್ಚರಿಕೆಯು ಆ ದೇಶದ ಜನರನ್ನು ಕಳೆದುಕೊಂಡಿದ್ದು, ಭಯಬೀಳಿಸುವುದಕ್ಕೆ ಸಾಕ್ಷಿಯಂತಿದೆ' ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ಮುಖ್ಯಸ್ಥ ಆಗ್ನೆಸ್ ಕಲಾಮಾರ್ಡ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿದ್ದಾರೆ.

‘ಡಕಾಯಿತ್’ ಟ್ರೇಲರ್‌ಗೆ ತಾರೆಯರ ಮೆಚ್ಚುಗೆ


ಮೃಣಾಲ್ ಠಾಕೂರ್

ಅಡವಿ ಶೇಷ್, ಮೃಣಾಲ್ ಠಾಕೂರ್, ಅನುರಾಗ್ ಕಶ್ಯಪ್ ನಟನೆಯ ತೆಲುಗಿನ ‘ಡಕಾಯಿತ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಜೂನಿಯರ್ ಎನ್‌ಟಿಆರ್, ರಶ್ಮಿಕಾ ಮಂದಣ್ಣ, ರಾಣಾ ದಗ್ಗುಬಾಟಿ ಸೇರಿದಂತೆ ಅನೇಕ ಸಿನಿತಾರೆಯರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಚಿತ್ರದ ಟ್ರೇಲರ್ ಹಂಚಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶನ್ನೆಲ್ ಡಿಯೋ ನಿರ್ದೇಶನದ ಚಿತ್ರ ಏ.10ರಂದು ತೆರೆಗೆ ಬರಲಿದೆ. ಥ್ರಿಲ್ಲರ್ ಜಾನರ್‌ನ ಸಿನಿಮಾದಲ್ಲಿ ಗಟ್ಟಿಯಾದ ಕಥೆಯಿದೆ. ಒಂದು ಭಾವುಕ ಪ್ರೇಮಪಯಣವಿದೆ. ತಾನು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುವ ಕೈದಿಯೊಬ್ಬ ಸಾಮಾನ್ಯ ಬದುಕಿಗೆ ಮರಳಿ, ದ್ವೇಷ ತೀರಿಸಿಕೊಳ್ಳುವ ಕಥೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಕಥಾನಾಯಕ ಹರಿ ಆಗಿ ಅಡವಿ ಶೇಷ್ ಕಾಣಿಸಿಕೊಂಡಿದ್ದಾರೆ. ಆತನ ಪ್ರೇಯಸಿಯಾಗಿ ಮೃಣಾಲ್ ಠಾಕೂರ್ ನಟಿಸಿದ್ದು, ಅನುರಾಗ್ ಕಶ್ಯಪ್ ಇನ್‌ಸ್ಪೆಕ್ಟರ್ ಸ್ವಾಮಿಯಾಗಿ ಕಥೆಯಲ್ಲಿ ಖಳನಾಯಕನಾಗಿದ್ದಾರೆ.

‘ತುಂಬ ಬಿಗಿಯಾದ ಮತ್ತು ಅತ್ಯುತ್ತಮ ನಿರೂಪಣೆಯ ಕಥೆ. ಚಿತ್ರದ ಟ್ರೇಲರ್ ಬಹಳ ಇಷ್ಟವಾಯ್ತು’ ಎಂದು ಜೂನಿಯರ್ ಎನ್‌ಟಿಆರ್ ಹೇಳಿದ್ದಾರೆ. ಅನುಷ್ಕಾ ಶೆಟ್ಟಿ, ಶ್ರೀಲೀಲಾ ಕೂಡ ಟ್ರೇಲರ್ ಹಂಚಿಕೊಂಡು ತಂಡಕ್ಕೆ ಶುಭ ಕೋರಿದ್ದಾರೆ.

‘NH 66’ನಲ್ಲಿ ಶ್ರುತಿ ಹರಿಹರನ್


ಪ್ರಮೋದ್ ಶೆಟ್ಟಿ, ಶ್ರುತಿ ಹರಿಹರನ್

ಪ್ರಮೋದ್ ಶೆಟ್ಟಿ, ಶ್ರುತಿ ಹರಿಹರನ್ ಜೋಡಿಯಾಗಿ ನಟಿಸುತ್ತಿರುವ ‘NH 66’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಮಂಜುನಾಥ್ ಟಿ.ಆರ್ ನಿರ್ಮಾಣ ಹಾಗೂ ನಿರ್ದೇಶನದ ಚಿತ್ರವಿದು.

‘ನಾನು ನಿರ್ದೇಶಕ ಭಾರ್ಗವ ಅವರ ಬಳಿ ಕೆಲಸ ಮಾಡಿದ್ದೆ. ಬಳಿಕ ವಿದೇಶಕ್ಕೆ ತೆರಳಿ ಸ್ಕ್ರಿಪ್ಟ್ ರಚನೆ, ಚಿತ್ರಕಥೆ ಬಗ್ಗೆ ಅಧ್ಯಯನ ನಡೆಸಿದೆ. ಈಗ ತಾಯ್ನಾಡಿಗೆ ಮರಳಿ ನನ್ನ ಮೊದಲ ನಿರ್ದೇಶನದ ಚಿತ್ರವನ್ನು ಆರಂಭಿಸಿದ್ದೇನೆ. ರಾಯ ಫಿಲ್ಮ್ಸ್ ಎಂಬ ಸಂಸ್ಥೆಯ ಮೂಲಕ ಈ ಚಿತ್ರವನ್ನು ನಿರ್ಮಾಣ ಕೂಡ ಮಾಡುತ್ತಿದ್ದೇನೆ. ಶೀರ್ಷಿಕೆ ಹೇಳುವಂತೆ ಇದೊಂದು ರಸ್ತೆ ಮೇಲಿನ ಪಯಣದ ಕಥೆ. ಥ್ರಿಲ್ಲರ್ ಜಾನರ್‌ನ ಚಿತ್ರವೂ ಹೌದು. ಮಂಗಳೂರಿನಿಂದ ಗೋವಾಕ್ಕೆ ಹೋಗುವ ಹಾದಿಯಲ್ಲಿ ಎರಡು ರಾತ್ರಿಗಳಲ್ಲಿ ನಡೆಯುವ ಕಥೆಯಾಗಿದ್ದು, ನಾಲ್ಕು ಪಾತ್ರಗಳ ಸುತ್ತ ಸುತ್ತುತ್ತದೆ. ಇದೇ ತಿಂಗಳಿನಿಂದ ಮಂಗಳೂರಿನಲ್ಲಿ ಚಿತ್ರೀಕರಣ ಆರಂಭವಾಗಲಿದೆ’ ಎಂದರು ನಿರ್ದೇಶಕ.

ರಾಜೇಶ್ ನಟರಂಗ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಸುನೀತ್ ಹಲಗೇರಿ ಛಾಯಾಚಿತ್ರಗ್ರಹಣ ಹಾಗೂ ಸ್ವಾಮಿನಾಥನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

‘ನಾನು ಕಾರು ಚಾಲಕನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಕಥೆ ಬಹಳ ಸೊಗಸಾಗಿದೆ’ ಎಂದು ಪ್ರಮೋದ್ ಶೆಟ್ಟಿ ಹೇಳಿದರು.

‘ಇತ್ತೀಚೆಗೆ ನನಗೆ ಒಳ್ಳೆಯ ಪಾತ್ರಗಳು ಸಿಗುತ್ತಿವೆ. ಈಗಾಗಲೇ ಸಾಕಷ್ಟು ಪಾತ್ರಗಳಲ್ಲಿ ನಟಿಸಿದ್ದೇನೆ. ಆದರೆ ಈ ಚಿತ್ರದಲ್ಲಿನ ಪಾತ್ರ ಅವೆಲ್ಲಕ್ಕಿಂತ ಭಿನ್ನವಾಗಿದೆ’ ಎಂದು ಶ್ರುತಿ ತಮ್ಮ ಪಾತ್ರ ಪರಿಚಯಿಸಿಕೊಂಡರು.


ಅಭಿಜಿತ್

ಶಿಲ್ಪಾ ಶ್ರೀನಿವಾಸ ತೆರೆಗೆ ಬರಲು ಸಿದ್ಧ

‘**ಶಿಲ್ಪಾ ಶ್ರೀನಿವಾಸ**’ ಚಿತ್ರದ ವಿಶೇಷ ಹಾಡೊಂದರಲ್ಲಿ ನಟ ಅಭಿಜಿತ್ ಹೆಜ್ಜೆ ಹಾಕುತ್ತಿರುವ ಕುರಿತು ಚಿತ್ರತಂಡ ಈ ಹಿಂದೆ ಹೇಳಿತ್ತು. ಆ ಹಾಡಿನ ಚಿತ್ರೀಕರಣದೊಂದಿಗೆ ಚಿತ್ರ ಪೂರ್ಣಗೊಂಡಿದೆ. ಹಾರರ್, ಸಸ್ಪೆನ್ಸ್ , ಥ್ರಿಲ್ಲರ್ ಜಾನರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ರಾಜೀವ್ ಕೃಷ್ಣ ನಿರ್ದೇಶನವಿದೆ.

‘ಬಂಗಾರಪೇಟೆ ತಾಲ್ಲೂಕಿನ ಶ್ರೀ ಶಿವಶನೈಶ್ವರ ದೇವಾಲಯದಲ್ಲಿ ಅಭಿಜಿತ್ ಅಭಿನಯದ ‘ದೇವರು ಸೃಷ್ಟಿಸೋ ಸಿನಿಮಾದಲ್ಲಿ ನಾವೆಲ್ಲಾ ಪಾತ್ರಧಾರಿಗಳು’ ಎಂಬ ಹಾಡಿನ ಚಿತ್ರೀಕರಣ ಮುಗಿಸಿ, ಕುಂಬಳಕಾಯಿ ಒಡೆಯಲಾಯಿತು. ಪೋಸ್ಟ್ ಪ್ರೊಡಕ್ಷನ್ ಕೂಡ ಮುಗಿಸಿ ಸೆನ್ಸಾರ್ ಹಂತದಲ್ಲಿರುವ ಚಿತ್ರ ಮೇ ತಿಂಗಳಲ್ಲಿ ತೆರೆ ಕಾಣಲಿದೆ’ ಎಂದರು ನಿರ್ದೇಶಕ.

ಸ್ನೇಹಾಲಯಂ ಕ್ರಿಯೇಷನ್ಸ್ ಬ್ಯಾನರ್ ಅಡಿ ಸಿನಿಮಾ ನಿರ್ಮಾಣಗೊಂಡಿದೆ. ಶಿಲ್ಪಾ ಶ್ರೀನಿವಾಸ್, ಶೋಭರಾಜ್, ನಾಗೇಂದ್ರ ಅರಸ್, ಕಿಶೋರ್ ಕಾಸರಗೋಡು, ಸ್ವಾತಿ ಲಿಂಗರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಪ್ರಮೋದ್ ಛಾಯಾಚಿತ್ರಗ್ರಹಣ, ಅನಿರುದ್ಧ ಶಾಸ್ತ್ರಿ ಅವರ ಸಂಗೀತ, ಡಿ. ಮಲ್ಲಿ ಸಂಕಲನವಿದೆ.

‘ಎಲ್‌ಪಿಜಿ ಸಿಲಿಂಡರ್: ಇ–ಕೆವೈಸಿ ಕಡ್ಡಾಯ’



ಭುವನೇಶ್ವರ (ಪಿಟಿಐ): ಒಡಿಶಾ ಸರ್ಕಾರವು ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಪಡೆಯಲು ಇ–ಕೆವೈಸಿಯನ್ನು ಕಡ್ಡಾಯಗೊಳಿಸಿದೆ ಎಂದು ಆಹಾರ ಸರಬರಾಜು ಮತ್ತು ಗ್ರಾಹಕ ಕಲ್ಯಾಣ ಸಚಿವ ಕೆ.ಸಿ. ಪಾತ್ರಾ ಅವರು ಭಾನುವಾರ ತಿಳಿಸಿದರು.

‘ನಿಜವಾದ ಗ್ರಾಹಕರಿಗೆ ಎಲ್‌ಪಿಜಿ ಸಿಲಿಂಡರ್ ಸಿಗುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಪ್ರತಿಪಾದಿಸಿದರು.

‘ಇ–ಕೆವೈಸಿ ಪೂರ್ಣಗೊಳಿಸಿರುವ ಬಳಕೆದಾರರಿಗೆ ಮಾತ್ರ ಸಿಲಿಂಡರ್ ವಿತರಿಸುವಂತೆ ಎಲ್‌ಪಿಜಿ ವಿತರಕರಿಗೆ ಸೂಚಿಸಿದ್ದೇವೆ. ಮಾರುಕಟ್ಟೆಯಲ್ಲಿ 1ಕೆ.ಜಿ. ಅಥವಾ 5 ಕೆ.ಜಿ. ಎಲ್‌ಪಿಜಿ ಸಿಲಿಂಡರ್ ಅಕ್ರಮ ಮಾರಾಟವನ್ನು ನಿಲ್ಲಿಸಿದ್ದೇವೆ. ಅಕ್ರಮವಾಗಿ ಸಿಲಿಂಡರ್ ಮಾರಾಟ ಮಾಡುವವರ ವಿರುದ್ಧ ಕ್ರಮಕೈಗೊಳ್ಳಲಾಗುವುದು’ ಎಂದು ಅವರು ಹೇಳಿದರು.

‘ಢೆಂಕನಾಲ್ ಜಿಲ್ಲೆಯಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ 27 ಎಲ್‌ಪಿಜಿ ಸಿಲಿಂಡರ್‌ಗಳನ್ನು ಭಾನುವಾರ ವಶಪಡಿಸಿಕೊಳ್ಳಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕರ್ನಾಟಕಕ್ಕೆ ಬಿಜೆಪಿ ಹಾನಿಕಾರಕ–ಸುರ್ಜೇವಾಲಾ

ಬೆಂಗಳೂರು: ‘ಕನ್ನಡಿಗರ ಹಕ್ಕು ಮತ್ತು ಹಿತಾಸಕ್ತಿಗಳ ವಿಷಯದಲ್ಲಿ ಕೇಂದ್ರದ ಮೋದಿ ಸರ್ಕಾರದ ತಾರತಮ್ಯ ಧೋರಣೆಯನ್ನು ಪ್ರಶ್ನಿಸದ ಬಿಜೆಪಿ ನಾಯಕರು ಕರ್ನಾಟಕಕ್ಕೆ ದ್ರೋಹ ಮಾಡುತ್ತಿದ್ದಾರೆ’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಟೀಕಿಸಿದರು.


ಸುರ್ಜೇವಾಲಾ

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಕರ್ನಾಟಕಕ್ಕೆ ಬಿಜೆಪಿ ಹಾನಿಕಾರಕ. ಆ ಪಕ್ಷದವರಿಗೆ ಕನ್ನಡಿಗರ ಮತ ಪಡೆಯುವ ಅರ್ಹತೆ ಇಲ್ಲ’ ಎಂದು ವಾಗ್ದಾಳಿ ನಡೆಸಿದರು.

‘14ನೇ ಮತ್ತು 15ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಬರಬೇಕಿದ್ದ ₹ 79,770 ಕೋಟಿಯನ್ನು ಕೇಂದ್ರ ನೀಡಿಲ್ಲ. ಜಿಎಸ್‌ಟಿ ಅವೈಜ್ಞಾನಿಕ ಜಾರಿಯಿಂದ ₹59,274, ಹೊಸ ಜಿಎಸ್‌ಟಿ ಪರಿಷ್ಕರಣೆಯಿಂದ ₹9 ಸಾವಿರ ಕೋಟಿ ಕರ್ನಾಟಕಕ್ಕೆ ನಷ್ಟವಾಗಿದೆ. ಜಲಜೀವನ್ ಮಿಷನ್ ಅಡಿಯಲ್ಲಿ ₹10,889 ಕೋಟಿ ಅನುದಾನವನ್ನು ಬಿಡುಗಡೆ ಮಾಡಿಲ್ಲ’ ಎಂದೂ ಆರೋಪಿಸಿದರು.

ಎಂಪಾಕ್ಸ್ ಸೋಂಕಿಗೆ 4 ಬಲಿ

ಕರಾಚಿ (ಪಿಟಿಐ): ಆಗ್ನೇಯ ಪಾಕಿಸ್ತಾನದಲ್ಲಿ ಏಳು ಶಿಶುಗಳು ಮೃತಪಟ್ಟಿದ್ದು, ಆ ಪೈಕಿ ನಾಲ್ಕು ಶಿಶುಗಳಲ್ಲಿ ಎಂಪಾಕ್ಸ್ (ಮಂಕಿ ಪಾಕ್ಸ್) ಸೋಂಕು ಪತ್ತೆಯಾಗಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಸಿಂಧ್ ಪ್ರಾಂತ್ಯದ ಖೈರಪುರ ನಗರದಲ್ಲಿ ಎಂಪಾಕ್ಸ್ ಪ್ರಕರಣ ವರದಿಯಾಗಿದೆ. ಕರಾಚಿಯಲ್ಲಿ ಏಳು ಶಿಶುಗಳ ರಕ್ತ ಪರೀಕ್ಷೆ ಮಾಡಲಾಗಿದ್ದು, ನಾಲ್ಕು ಶಿಶುಗಳಲ್ಲಿ ಎಂಪಾಕ್ಸ್ ಸೋಂಕು ಇರುವುದು ಪ್ರಾಥಮಿಕ ವರದಿಯಲ್ಲಿ ಪತ್ತೆಯಾಗಿದೆ ಎಂದರು.

ಆರೋಗ್ಯ ಇಲಾಖೆ ಶನಿವಾರ ಹೊರಡಿಸಿದ್ದ ಪ್ರಕಟಣೆಯಲ್ಲಿ, ‘ಶಿಶುಗಳ ಸಾವಿಗೆ ಎಂಪಾಕ್ಸ್ ನೇರ ಕಾರಣವಲ್ಲ. ಮೃತಪಟ್ಟ ಎಲ್ಲಾ ಶಿಶುಗಳು ಅವಧಿಪೂರ್ವ ಜನನ, ಕಡಿಮೆ ತೂಕ ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿದ್ದವು’ ಎಂದು ತಿಳಿಸಿತ್ತು.

ವಿಚ್ಛೇದಿತ ಪುತ್ರಿಗೆ ‘ಸಂಭ್ರಮ’ದ ಸ್ವಾಗತ

‘ವಿಚ್ಛೇದನ’ ಕಳಂಕವಲ್ಲ ಎಂದು ಸಾರಿದ ಮೀರಠ್‌ನ ನಿವೃತ್ತ ನ್ಯಾಯಾಧೀಶ

ಮೀರಠ್ (ಉತ್ತರ ಪ್ರದೇಶ)(ಪಿಟಿಐ): ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಪಡೆದ ತಮ್ಮ ಮಗಳನ್ನು ನಿವೃತ್ತ ನ್ಯಾಯಾಧೀಶರೊಬ್ಬರು ಬಾಜಾ ಭಜಂತ್ರಿಯೊಂದಿಗೆ ಬರಮಾಡಿಕೊಂಡಿದ್ದಾರೆ.

ವಿವಾಹ ವಿಚ್ಛೇದನ ಎನ್ನುವುದು ಸಾಮಾಜಿಕ ಕಳಂಕವಲ್ಲ ಎಂಬ ಸಂದೇಶವನ್ನು ಈ ಸಂಭ್ರಮಾಚರಣೆಯಿಂದ ಅವರು ಸಮಾಜಕ್ಕೆ ರವಾನಿಸಿದ್ದಾರೆ.

ಈ ಘಟನೆ ನಡೆದಿರುವುದು ಮೀರಠ್ ನಗರದಲ್ಲಿ. ನಗರದ ನಿವೃತ್ತ ನ್ಯಾಯಾಧೀಶ ಜ್ಞಾನೇಂದ್ರ ಕುಮಾರ್ ಶರ್ಮ ಅವರ ಪುತ್ರಿ ಪ್ರಣೀತಾ ವಸಿಷ್ಠ ಅವರು ಕೌಟುಂಬಿಕ ನ್ಯಾಯಾಲಯದಿಂದ ಶನಿವಾರ ವಿಚ್ಛೇದನ ಪಡೆದುಕೊಂಡರು. ಅನಂತರ ಜ್ಞಾನೇಂದ್ರ ಅವರು ಮಗಳನ್ನು ಬಾಜಾ ಭಜಂತ್ರಿ ಮತ್ತು ಸಿಹಿತಿಂಡಿಗಳೊಂದಿಗೆ ಮನೆಗೆ ಬರಮಾಡಿಕೊಂಡರು.

ವಿಚ್ಛೇದನ ಸಲಹೆಗಾರರಾದ ರಾಜೀವ್ ಗಿರಿ ಮತ್ತು ನಸೀಬ್ ಸೈಫಿ ಅವರು ಪ್ರಕರಣದ ವಿವರ ನೀಡಿರುವುದು ಹೀಗೆ: ‘ಪ್ರಣೀತಾ ಅವರು ಡಿಸೆಂಬರ್ 19, 2018ರಂದು ಶಹಾಜಹಾನ್‌ಪುರದ ಸೇನಾ ಮೇಜರ್ ಅವರನ್ನು ವಿವಾಹವಾದರು. ಅನಂತರ ಮಾನಸಿಕ, ದೈಹಿಕ ಮತ್ತು ಭಾವನಾತ್ಮಕ ತೊಂದರೆಗಳು ಅವರಿಗೆ ಎದುರಾದವು. ದಾಂಪತ್ಯದಲ್ಲಿ ಬಿರುಕು ಮೂಡಿತು. ಅಷ್ಟರಲ್ಲಿ ದಂಪತಿ ಗಂಡು ಮಗುವಿಗೆ ತಂದೆ–ತಾಯಿಯಾದರು. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಇದರಿಂದಾಗಿ ಪ್ರಣೀತಾ ಅವರು ಮೀರಠ್‌ನಲ್ಲಿರುವ ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದರು. ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಶಕ್ತಿಪುತ್ರ ತೋಮರ್ ಶನಿವಾರ ವಿಚ್ಛೇದನ ಮಂಜೂರು ಮಾಡಿದರು.

ಜ್ಞಾನೇಶ್ವರ ಅವರ ಕುಟುಂಬದವರು ಈ ಸಂದರ್ಭವನ್ನು ಮಹಿಳೆಯೊಬ್ಬರ ಜೀವನದ ‘ಹೊಸ ಆರಂಭ’ದ ಆಚರಣೆಯಾಗಿ ಪರಿವರ್ತಿಸಿದರು. ನ್ಯಾಯಾಲಯದ ಆವರಣದಿಂದ ಪ್ರಣೀತಾ ಹೊರಬರುತ್ತಿದ್ದಂತೆ, ಸಂಬಂಧಿಕರು ಡೋಲು, ಡ್ರಮ್‌ಗಳನ್ನು ಬಾರಿಸುತ್ತಾ, ಅವುಗಳ ತಾಳಕ್ಕೆ ತಕ್ಕಂತೆ ಕುಣಿದರು. ಹಬ್ಬದ ಮೆರವಣಿಗೆ ರೀತಿಯಲ್ಲಿ ಪ್ರಣೀತಾ ಅವರನ್ನು ಮನೆಗೆ ಕರೆದೊಯ್ದರು. ಕುಟುಂಬದ ಸದಸ್ಯರೆಲ್ಲ ‘ನಾನು ನನ್ನ ಮಗಳನ್ನು ಪ್ರೀತಿಸುತ್ತೇನೆ’ ಎಂಬ ಸಂದೇಶವಿರುವ ಟೀ–ಶರ್ಟ್‌ಗಳನ್ನು ಧರಿಸಿದ್ದರು.

‘ನನ್ನ ಮಗಳು ಮದುವೆಯ ನಂತರ ಸಂತೋಷವಾಗಿರಲಿಲ್ಲ. ಅಂತಹ ವಾತಾವರಣದಿಂದ ಅವಳನ್ನು ಹೊರಗೆ ತರುವುದು ನನ್ನ ಕರ್ತವ್ಯವಾಗಿತ್ತು. ಈ ವೇಳೆ ನಾವು ಜೀವನಾಂಶ ಅಥವಾ ಬೇರೇನನ್ನೂ ಬಯಸಲಿಲ್ಲ. ನಾನು ನನ್ನ ಮಗಳನ್ನು ಮರಳಿ ಕರೆತಂದೆ’ ಎಂದು ಶರ್ಮಾ ಪಿಟಿಐಗೆ ತಿಳಿಸಿದರು.



ವಿವಾಹ ವಿಚ್ಛೇದನ ಪಡೆದ ಪ್ರಣೀತಾ ವಸಿಷ್ಠ ಅವರನ್ನು ಬಾಜಾ ಭಜಂತ್ರಿಯೊಂದಿಗೆ ಬರಮಾಡಲಾಯಿತು

ಆರ್‌ಟಿಐ ಅರ್ಜಿದಾರರು ಕೇಳಿದ ಮಾಹಿತಿ ನಿರಾಕರಿಸಿದ ಪ್ರಕರಣ

ಐಆರ್‌ಸಿಟಿಸಿ ತರಾಟೆಗೆ ತೆಗೆದುಕೊಂಡ ಸಿಐಸಿ

ರೈಲ್ ನೀರ್ ಹಗರಣ

ನವದೆಹಲಿ (ಪಿಟಿಐ): 2015ರಲ್ಲಿ ನಡೆದ ‘ರೈಲ್ ನೀರ್’ ಹಗರಣ ಕುರಿತು ಸಿಬಿಐ ಮತ್ತು ಇ.ಡಿ ನಡೆಸಿರುವ ತನಿಖೆಯ ವಿವರವನ್ನು ಆರ್‌ಟಿಐ ಅರ್ಜಿದಾರರಿಗೆ ನೀಡಲು ನಿರಾಕರಿಸಿದಕ್ಕಾಗಿ ಕೇಂದ್ರ ಮಾಹಿತಿ ಆಯೋಗ, ಭಾರತೀಯ ರೈಲ್ವೆ ಆಹಾರ ಸರಬರಾಜು ಮತ್ತು ಪ್ರವಾಸೋದ್ಯಮವನ್ನು (ಐಆರ್‌ಸಿಟಿಸಿ) ತರಾಟೆಗೆ ತೆಗೆದುಕೊಂಡಿದೆ.

‘ರೈಲ್ ನೀರ್’ ಹಗರಣದಲ್ಲಿ ತಾವು ಶಾಮೀಲಾಗಿರುವುದು ಸತ್ಯವೋ ಅಲ್ಲವೋ ಎಂದು ಸಿಬಿಐ ಮತ್ತು ಇ.ಡಿ. ಎದುರು ಬಿಡ್ಡರ್‌ಗಳು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆಯೇ?’ ಎಂದು ಕೋರಿ ಆರ್‌ಟಿಐ ಅರ್ಜಿದಾರರು ಐಆರ್‌ಸಿಟಿಸಿಯಿಂದ ಮಾಹಿತಿ ಕೇಳಿದ್ದರು.

ಐಆರ್‌ಸಿಟಿಸಿಯು ಈ ದತ್ತಾಂಶಗಳನ್ನು ನೀಡಲು ನಿರಾಕರಿಸಿದ್ದಲ್ಲದೇ, ‘ಆರ್‌ಟಿಐ , 2005ರ ಸೆಕ್ಷನ್ 8 (ಡಿ) ಪ್ರಕಾರ, ಅರ್ಜಿದಾರರು ಕೋರಿದ ಮಾಹಿತಿಯನ್ನು ಬಹಿರಂಗಪಡಿಸಲಾಗದು’ ಎಂದಿದೆ.

2025ರ ಆರ್‌ಟಿಐ ಕಾಯ್ದೆಯ ಸೆಕ್ಷನ್ 8(1)(ಡಿ) ಪ್ರಕಾರ, ವಾಣಿಜ್ಯ ವಹಿವಾಟಿನ ಗೋಪ್ಯತೆ, ವ್ಯಾಪಾರ ರಹಸ್ಯಗಳು ಅಥವಾ ಬೌದ್ಧಿಕ ಆಸ್ತಿಯನ್ನು ಒಳಗೊಂಡಿರುವ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ವಿನಾಯಿತಿ ನೀಡುತ್ತದೆ. ‘ಇದನ್ನು ಬಹಿರಂಗಪಡಿಸುವುದರಿಂದ ಥರ್ಡ್ ಪಾರ್ಟಿಯ ಸ್ಪರ್ಧಾತ್ಮಕ ಸ್ಥಾನಕ್ಕೆ ಹಾನಿಯಾಗುತ್ತದೆ’ ಎಂದು ಐಆರ್‌ಸಿಟಿಸಿ ಹೇಳಿದೆ.

ಐಆರ್‌ಸಿಟಿಸಿ ನೀಡಿರುವ ಉತ್ತರವನ್ನು ದೋಷಪೂರಿತ ಎಂದು ಪರಿಗಣಿಸಿದ ಸಿಐಸಿ, ‘ಈ ಉತ್ತರಗಳು ಆರ್‌ಟಿಐ ಕಾಯ್ದೆಯ ನಿಬಂಧನೆಗಳಿಗೆ ಹೊಂದಿಕೆ ಆಗುವುದಿಲ್ಲ’ ಎಂದು ಹೇಳಿದೆ. ಆರ್‌ಟಿಐ ಅರ್ಜಿಯನ್ನು ಮರುಪರಿಶೀಲಿಸಲು ಮತ್ತು ‘ಹೊಸ, ತಾರ್ಕಿಕ ಉತ್ತರ’ ವನ್ನು ನೀಡಲು ಐಆರ್‌ಸಿಟಿಸಿಗೆ ನಿರ್ದೇಶನ ನೀಡಿದೆ.

ಎಸ್‌ಸಿ/ಎಸ್‌ಟಿ, ಒಬಿಸಿ ವಿದ್ಯಾರ್ಥಿಗಳ ಮೀಸಲಾತಿ ಹೆಚ್ಚಳ

ಭುವನೇಶ್ವರ: ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮೀಸಲಾತಿಯನ್ನು ಹೆಚ್ಚಿಸಿರುವ ಒಡಿಶಾ ಸರ್ಕಾರ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಎಸ್‌ಇಬಿಸಿ) ಮೀಸಲಾತಿಯನ್ನು ಪರಿಚಯಿಸಿದೆ.

ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

‘ಎಸ್.ಟಿ. ವಿದ್ಯಾರ್ಥಿಗಳ ಮೀಸಲಾತಿಯನ್ನು ಶೇ 12ರಿಂದ 22.50ಕ್ಕೆ ಹೆಚ್ಚಿಸಲಾಗಿದ್ದು, ಎಸ್.ಸಿ.ಗಳಿಗೆ ಶೇ 8ರಿಂದ ಶೇ 16.25ಕ್ಕೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರವು ಒಡಿಶಾದಲ್ಲಿ ಎಸ್‌ಇಬಿಸಿ ಎಂದು ಕರೆಯಲ್ಪಡುವ ಒಬಿಸಿ ವಿದ್ಯಾರ್ಥಿಗಳಿಗೆ ಶೇ 11.25 ಮೀಸಲಾತಿಯನ್ನು ಪರಿಚಯಿಸಿದೆ’ ಎಂದು ಸಭೆಯ ನಂತರ ಮುಖ್ಯಮಂತ್ರಿ ತಿಳಿಸಿದ್ದಾರೆ.

‘ರಾಜ್ಯದಲ್ಲಿ ಎಸ್‌ಟಿ ಸಮುದಾಯಗಳ ಜನಸಂಖ್ಯೆಯು ಶೇ 22ಕ್ಕಿಂತ ಹೆಚ್ಚಿದ್ದರೂ, ಹಿಂದಿನಿಂದಲೂ ತಾಂತ್ರಿಕ ವೃತ್ತಿಪರ ಮತ್ತು ವೈದ್ಯಕೀಯ ಮತ್ತು ಸಂಬಂಧಿತ ಕೋರ್ಸ್‌ಗಳಲ್ಲಿ ಅವರಿಗೆ ಮೀಸಲಾತಿ ಕೇವಲ ಶೇ 12ರಷ್ಟು ಮಾತ್ರವಿತ್ತು. ಆದ್ದರಿಂದ ಜನಸಂಖ್ಯೆಯಲ್ಲಿ ಅವರ ಅನುಪಾತಕ್ಕೆ ಅನುಗುಣವಾಗಿ ನಾವು ಮೀಸಲಾತಿ ಹೆಚ್ಚಿಸಿದ್ದೇವೆ’ ಎಂದು ಮುಖ್ಯಮಂತ್ರಿ ಚರಣ್ ಮಾಝಿ ಹೇಳಿದ್ದಾರೆ.

ಕೇರಳದಲ್ಲಿ ಸುಸ್ಥಿರ ಬದಲಾವಣೆ: ಖರ್ಗೆ


ಮಲ್ಲಿಕಾರ್ಜುನ ಖರ್ಗೆ

ಕೊಟ್ಟಾರಕರ (ಕೇರಳ): ‘ಈ ಬಾರಿಯ ವಿಧಾನಸಭೆ ಚುನಾವಣೆಯು ಕೇರಳದಲ್ಲಿ ಅಧಿಕಾರ ಬದಲಾವಣೆ ಕಾರಣಕ್ಕೆ ಮಾತ್ರವಲ್ಲ, ಕೇರಳದ ಸುಸ್ಥಿರ ಭವಿಷ್ಯದ ದೃಷ್ಟಿಯಿಂದಲೂ ಮಹತ್ವದ್ದು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಇಲ್ಲಿ ಭಾನುವಾರ ನಡೆದ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಕೇಂದ್ರದಲ್ಲಿ ಮೋದಿ ಮತ್ತು ಕೇರಳದಲ್ಲಿ ಪಿಣರಾಯಿ ವಿಜಯನ್ ಅವರು ಕಳೆದೊಂದು ದಶಕದಲ್ಲಿ ‘ಅಧಿಕಾರ ಕೇಂದ್ರೀಕರಣದ ಅಪಾಯಕಾರಿ ಮಾದರಿ’ಗೆ ಸಾಕ್ಷಿಯಾಗಿದ್ದಾರೆ. ಇವರಿಬ್ಬರೂ ಪ್ರತಿನಿಧಿಸುವ ಪಕ್ಷದ ಧ್ವಜ ಬೇರೆ ಇರಬಹುದು, ಆದರೆ, ಇಬ್ಬರ ರಾಜಕೀಯ ನಿರಂಕುಶ ಶೈಲಿ ಒಂದೇ’ ಎಂದು ವಾಗ್ದಾಳಿ ನಡೆಸಿದರು.

‘ಕೇರಳದ ಎಲ್‌ಡಿಎಫ್ ಸರ್ಕಾರ ಪೊಲೀಸರ ಮೂಲಕ ಜನರ ಧ್ವನಿಯನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಪ್ರಜಾಪ್ರಭುತ್ವದ ಬದಲು ರಾಜಕೀಯ ನಿಯಂತ್ರಿತ ಆಡಳಿತ ವ್ಯವಸ್ಥೆ ಇದೆ. ಆಡಳಿತ ಮಾತ್ರವಲ್ಲ ಆರ್ಥಿಕತೆಯೂ ಕುಸಿದಿದೆ. ಕೊಟ್ಟಾರಕರ ಕ್ಷೇತ್ರದ ಶಾಸಕರೂ ಆಗಿರುವ ಕೇರಳದ ಹಣಕಾಸು ಸಚಿವ ಕೆ.ಎನ್ ಬಾಲಗೋಪಾಲ್ ಹೊಣೆ ಹೊತ್ತುಕೊಳ್ಳುವರೇ’ ಎಂದು ಖರ್ಗೆ ಪ್ರಶ್ನಿಸಿದರು.

ಪ್ರಜಾಮತ ಜನತಂತ್ರದ ಹಬ್ಬ

‘ಕೇರಳದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿಲ್ಲ, ಮೂಲಸೌಕರ್ಯ ಅಭಿವೃದ್ಧಿ ಕಾಣುತ್ತಿಲ್ಲ, ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಚಿನ್ನವನ್ನು ಕದ್ದವರು ಯಾರು, ಯಾಕೆ ಆರೋಪಿಗಳನ್ನು ಬಂಧಿಸಲಾಗಿಲ್ಲ’ ಎಂದು ಪ್ರಶ್ನಿಸಿದ ಖರ್ಗೆ, ‘ಎಲ್‌ಡಿಎಫ್ ದುರಾಡಳಿತದಲ್ಲಿ ದೇವರ ಸ್ವಂತ ನಾಡಿನ ಜನರು ನಲುಗಿದ್ದಾರೆ’ ಎಂದರು.

ಗ್ಯಾರಂಟಿ ಯೋಜನೆ ಜಾರಿಗೆ ಯುಡಿಎಫ್ ನಿಮ್ಮ ಬೆಂಬಲ ಕೋರುತ್ತಿದೆ’ ಎಂದು ಖರ್ಗೆ ಮನವಿ ಮಾಡಿದರು.

ಬಿಜೆಪಿ ಖಂಡನೆ

ನವದೆಹಲಿ (ಪಿಟಿಐ): ‘ಕೇರಳದ ಇಡುಕ್ಕಿಯಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಗುಜರಾತ್ ಮತ್ತು ಉತ್ತರ ಭಾರತದ ಜನರನ್ನು ಅನಕ್ಷರಸ್ಥರು ಎಂದು ಹೇಳಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

‘ಕೇರಳದ ಜನರು ವಿದ್ಯಾವಂತರು ಮತ್ತು ಬುದ್ಧಿವಂತರು. ಗುಜರಾತ್ ಮತ್ತು ಉತ್ತರ ಭಾರತದಲ್ಲಿ ಅನಕ್ಷರಸ್ಥರನ್ನು ಮೂರ್ಖರನ್ನಾಗಿ ಮಾಡಿದಂತೆ ಕೇರಳದ ಜನರನ್ನು ಮೋಸಗೊಳಿಸಲು ಸಾಧ್ಯವಿಲ್ಲ. ಮೋದೀಜಿ ಮತ್ತು ವಿಜಯ್ (ಪಿಣರಾಯಿ ವಿಜಯನ್) ಇದನ್ನು ನೆನಪಿಟ್ಟುಕೊಳ್ಳಿ’ ಎಂದು ಖರ್ಗೆ ಅವರು ಹೇಳಿದ್ದರು.

ಐವರ ಅಮಾನತಿಗೆ ಶಿಫಾರಸು

ಚಂಡೀಗಢ (ಪಿಟಿಐ): ಕಳೆದ ತಿಂಗಳು ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿದ ಐವರು ಶಾಸಕರನ್ನು ಅಮಾನತುಗೊಳಿಸುವಂತೆ ಹರಿಯಾಣ ಕಾಂಗ್ರೆಸ್ ಶಿಸ್ತು ಸಮಿತಿ (ಡಿಎಸಿ) ಶಿಫಾರಸು ಮಾಡಿದೆ.

ಬಿಜೆಪಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಸತೀಶ್ ನಂದಾಲ್ ಪರವಾಗಿ ಪಕ್ಷದ ಐವರು ಶಾಸಕರು ಅಡ್ಡಮತದಾನ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಮಿತಿಯು ಹೈಕಮಾಂಡ್‌ಗೆ ತನ್ನ ವರದಿಯನ್ನು ಸಲ್ಲಿಸಲಿದೆ ಎಂದು ಧರ್ಮಪಾಲ್ ಮಲಿಕ್ ಅವರು ಮಾಧ್ಯಮಗಳಿಗೆ ಶುಕ್ರವಾರ ಸಂಜೆ ತಿಳಿಸಿದ್ದರು.

ಷೋಕಾಸ್ ನೋಟಿಸ್‌ಗಳಿಗೆ ಶಾಸಕರು ನೀಡಿದ ಪ್ರತಿಕ್ರಿಯೆಗಳನ್ನು ಪರಿಶೀಲಿಸಿದ ಬಳಿಕ, ಅಡ್ಡಮತದಾನ ಮಾಡಿದವರನ್ನು ಅಮಾನತುಗೊಳಿಸಲು ಶಿಸ್ತು ಸಮಿತಿಯು ಶಿಫಾರಸು ಮಾಡಿದೆ ಎಂದು ಪಕ್ಷದ ಮೂಲಗಳು ಭಾನುವಾರ ತಿಳಿಸಿವೆ.

ಶಾಸಕರಾದ ಶಾಲಿ ಚೌಧರಿ, ರೇಣು ಬಾಲಾ, ಮೊಹಮ್ಮದ್ ಇಲ್ಯಾಸ್, ಮೊಹಮ್ಮದ್ ಇಸ್ರೇಲ್ ಹಾಗೂ ಜರ್ನೈಲ್ ಸಿಂಗ್ ಅವರು ಅಡ್ಡಮತದಾನ ಮಾಡಿದ್ದಾರೆ ಎಂದು ಶಂಕಿಸಲಾಗಿದೆ.

ಆಕ್ರಂದನ...

ಪಿಟಿಐ ಚಿತ್ರ


ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯಲ್ಲಿ ಭಾನುವಾರ ಕಳ್ಳಭಟ್ಟಿ ದುರಂತದಲ್ಲಿ ಮೃತಪಟ್ಟವರ ಸಂಬಂಧಿಕರು ರೋದಿಸಿದರು. ತುರ್ಕೌಲಿಯಾ ಮತ್ತು ರಘುನಾಥಪುರ ಸೇರಿದಂತೆ ಪ್ರದೇಶಗಳಲ್ಲಿ ನಕಲಿ ಮದ್ಯ ಸೇವಿಸಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ

ಸುಸ್ತಿದಾರನಲ್ಲದಿದ್ದರೂ ಬ್ಯಾಂಕ್‌ನಿಂದಲೇ ಲೋಪ

ಋಣಾತ್ಮಕ ಕ್ರೆಡಿಟ್ ಅಂಕ: ನೆರವಿಗೆ ಬಂದ ‘ಸುಪ್ರೀಂ’

ನವದೆಹಲಿ (ಪಿಟಿಐ): ಯಾವುದೇ ಸಾಲ ಬಾಕಿ ಇರದಿದ್ದರೂ ‘ಋಣಾತ್ಮಕ ಕ್ರೆಡಿಟ್ ಅಂಕ’ದ ಸಮಸ್ಯೆ ಎದುರಿಸುತ್ತಿದ್ದ ವ್ಯಕ್ತಿಗೆ ಸುಪ್ರೀಂ ಕೋರ್ಟ್ ಸಹಾಯಹಸ್ತ ಚಾಚಿದೆ.

ಉತ್ತರಾಖಂಡ ನಿವಾಸಿ ರಾಜೇಂದ್ರ ಸಿಂಗ್ ಪನ್ವಾರ್ ಅವರು ಯಾವುದೇ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರಲಿಲ್ಲ. ಹೀಗಿದ್ದರೂ 2020ರಿಂದಲೂ ಆರ್ಥಿಕ ದಾಖಲೆಗಳಲ್ಲಿ ‘ಋಣಾತ್ಮಕ ಕ್ರೆಡಿಟ್ ಅಂಕ’ವೇ ಕಾಣುತ್ತಿತ್ತು. ಪನ್ವಾರ್ ಹೆಸರಿನ ಇನ್ನಿಬ್ಬರು ವ್ಯಕ್ತಿಗಳು ಸಾಲ ಪಡೆದು ಸುಸ್ತಿದಾರರಾದ ಕಾರಣ, ಈ ಸಮಸ್ಯೆ ಉಂಟಾಗಿತ್ತು. ನಂತರ ಹೊಸತಾಗಿ ಪಾನ್ ಕಾರ್ಡ್ ಪಡೆದುಕೊಂಡರೂ, ಹಳೆಯ ಪಾನ್ ಕಾರ್ಡ್‌ನ ಮಾಹಿತಿಯನ್ನು ಸಂಪರ್ಕಿಸಿದ ಕಾರಣ ಸಮಸ್ಯೆ ಮುಂದುವರಿಯಿತು. ಅವರಿಗೆ ಸಾಲ ಪಡೆಯಲು ಸಾಧ್ಯವಾಗಿರಲಿಲ್ಲ. ಇದರಿಂದ ಬೇಸತ್ತಿದ್ದ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಸಂಸ್ಥೆಯು ಸಾಲಗಾರರಿಗೆ ‘ಕ್ರೆಡಿಟ್ ಅಂಕ’ಗಳನ್ನು ನೀಡುತ್ತದೆ. ಆಡುಮಾತಿನಲ್ಲಿ ‘ಕ್ರೆಡಿಟ್ ಅಂಕ’ ಎನ್ನುವುದು ತಾಂತ್ರಿಕವಾಗಿ ‘ಸಿಬಿಲ್ ಸ್ಕೋರ್’.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆಬಿ ಪಾರ್ದೀವಾಲಾ, ಕೆ.ವಿ.ವಿಶ್ವನಾಥನ್ ನೇತೃತ್ವದ ನ್ಯಾಯಪೀಠ, ಪನ್ವಾರ್ ಅವರು ಸಾಲ ಪಡೆದು ಸುಸ್ತಿದಾರರಾಗಿದ್ದಾರೆಯೇ ಎಂಬುದರ ಕುರಿತು ಮಾಹಿತಿ ನೀಡುವಂತೆ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ (ಎಸ್‌ಬಿಐ) ನೋಟಿಸ್ ನೀಡಿತ್ತು.

ಈ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಿರುವ ಪಿಎನ್‌ಬಿ ಬ್ಯಾಂಕ್‌ನ ಅಧಿಕಾರಿಗಳು, ‘ಪನ್ವಾರ್ ಯಾವುದೇ ಸಾಲ ಪಡೆದಿಲ್ಲ, ಸುಸ್ತಿದಾರರಾಗಿಲ್ಲ’ ಎಂದು ಮಾಹಿತಿ ನೀಡಿದ್ದಾರೆ.

‘ಪರಿಷ್ಕೃತ ಪ್ಯಾನ್ ಮಾಹಿತಿ ಪಡೆದುಕೊಂಡು ಅರ್ಜಿದಾರರ ಕ್ರೆಡಿಟ್ ಅಂಕವನ್ನು ಸರಿಪಡಿಸಲಾಗುವುದು’ ಎಂದು ಎಸ್‌ಬಿಐ ನ್ಯಾಯಾಲಯಕ್ಕೆ ಉತ್ತರಿಸಿದೆ.

ಇದರ ಬೆನ್ನಲ್ಲೇ ನ್ಯಾಯಾಲಯಕ್ಕೆ ಉತ್ತರಿಸಿದ ಸಿಬಿಲ್ ಸಂಸ್ಥೆ, ‘ಪನ್ವಾರ್ ಅವರ ಹೆಸರಿನಿಂದ ಸೃಷ್ಟಿಯಾದ ಗೊಂದಲಗಳನ್ನು ಬಗೆಹರಿಸಲಾಗಿದ್ದು, ಯಾವುದೇ ಸಮಸ್ಯೆಯಿಲ್ಲ’ ಎಂದು ತಿಳಿಸಿದೆ.

ಈ ಮೂಲಕ ಕಳೆದ 6 ವರ್ಷಗಳಿಂದ ಸಂಕಷ್ಟಕ್ಕೆ ಸಿಲುಕಿದ್ದ ರಾಜೇಂದ್ರ ನ್ಯಾಯಾಲಯದ ಮಧ್ಯಪ್ರವೇಶದಿಂದ ಸಮಸ್ಯೆಯಿಂದ ಪಾರಾಗಿದ್ದಾರೆ.

‘ನ್ಯಾಯಾಂಗ ಮೂಲಸೌಕಾರ್ಯ ಐಚ್ಛಿಕವಲ್ಲ, ಅತ್ಯಗತ್ಯ’


ಸೂರ್ಯಕಾಂತ್

ಹೈದರಾಬಾದ್ (ಪಿಟಿಐ): ‘ನ್ಯಾಯಾಂಗದ ಮೂಲಸೌಕರ್ಯ ಬಲಪಡಿಸುವುದು ಐಚ್ಛಿಕವಲ್ಲ, ಬದಲಾಗಿ ಅದೊಂದು ಅತ್ಯಗತ್ಯ ಕೆಲಸ ಎಂಬುದು ಎಲ್ಲ ರಾಜ್ಯ ಸರ್ಕಾರಗಳಿಗೂ ಮನವರಿಕೆಯಾಗಿದೆ. ಅಧಿಕಾರದಲ್ಲಿರುವ ರಾಜಕೀಯ ಪಕ್ಷ ಯಾವುದೇ ಆದರೂ ಸರ್ಕಾರಗಳ ಈ ಗ್ರಹಿಕೆಯಲ್ಲಿ ವ್ಯತ್ಯಾಸವಿಲ್ಲ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಭಾನುವಾರ ಅಭಿಪ್ರಾಯಪಟ್ಟರು.

ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಮೂರ್ತಿಗಳ ವಸತಿ ಕಟ್ಟಡಗಳನ್ನು ಒಳಗೊಂಡಿರುವ ತೆಲಂಗಾಣ ಹೈಕೋರ್ಟ್ ವಲಯ–2ರ ಶಂಕುಸ್ಥಾಪನೆಯ ಬಳಿಕ ಮಾತನಾಡಿದ ಸೂರ್ಯಕಾಂತ್ ಅವರು, ‘ನ್ಯಾಯಾಂಗ ಮತ್ತು ಕಾರ್ಯಾಂಗ ಒಟ್ಟಾಗಿ ಸಾಮರಸ್ಯದಿಂದ ಕೆಲಸ ಮಾಡಿದಾಗ ಮಾತ್ರ ಸಂವಿಧಾನ ನಿಜವಾಗಿಯೂ ಜೀವಂತವಾಗಿರುತ್ತದೆ’ ಎಂದರು.

ನೀಲನಕ್ಷೆ ಮತ್ತು ಮಾದರಿಗಳನ್ನು ವೀಕ್ಷಿಸಿದ ಅವರು, ‘100 ಎಕರೆಯ ಈ ಹೈಕೋರ್ಟ್ ಸಂಕೀರ್ಣದ ಪ್ರಸ್ತಾವವು ದೇಶದಲ್ಲೇ ಅತ್ಯುತ್ತಮವಾದದ್ದು. ಸಂಪೂರ್ಣ ಹೈಕೋರ್ಟ್ ಸಂಕೀರ್ಣವನ್ನು ಇನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರು ಭರವಸೆ ನೀಡಿದ್ದಾರೆ’ ಎಂದು ಸೂರ್ಯಕಾಂತ್ ತಿಳಿಸಿದರು.

‘ಕಳೆದ ಕೆಲವು ತಿಂಗಳುಗಳಲ್ಲಿಯೇ ಉತ್ತರ ಪ್ರದೇಶ, ಹಿಮಾಚಲ ಪ್ರದೇಶ, ಆಂಧ್ರ ಪ್ರದೇಶ, ಅಸ್ಸಾಂ ಮತ್ತು ಈಗ ತೆಲಂಗಾಣದಲ್ಲಿ ನ್ಯಾಯಾಲಯ ಸಂಕೀರ್ಣಗಳಿಗೆ ಶಂಕುಸ್ಥಾಪನೆ ಮಾಡುವ ಭಾಗ್ಯ ನನಗೆ ದೊರೆತಿದೆ’ ಎಂದು ಹೇಳಿದರು.

ಇಲ್ಲ ಖಾತರಿ ಕೂಲಿ, ಊರು ಖಾಲಿ

ಒಂದನೇ ಪುಟದಿಂದ...

ಆರ್ಥಿಕ ವರ್ಷದ ಮಧ್ಯೆ ಡಿಸೆಂಬರ್‌ನಲ್ಲಿಯೇ ವಿಬಿ ಜಿರಾಮ್‌ಜಿ ಜಾರಿಯಾದ ಕಾರಣ, 2025–26ನೇ ಸಾಲಿಗೆ (2026ರ ಮಾರ್ಚ್ ಅಂತ್ಯದವರೆಗೆ) ನೀಡಲಾಗಿದ್ದ ಉದ್ಯೋಗ ಸೃಜನೆ ಗುರಿಯನ್ನೂ ಮುಟ್ಟಲಾಗಿಲ್ಲ. ಉದಾಹರಣೆಗೆ ಬಾಗಲಕೋಟೆ ಜಿಲ್ಲೆಗೆ 32 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಯ ಗುರಿ ನೀಡಲಾಗಿತ್ತು. ಜನವರಿಯಿಂದ ಹೊಸ ಕಾಮಗಾರಿಗಳನ್ನು ಆರಂಭಿಸದ ಕಾರಣ ಆರ್ಥಿಕ ವರ್ಷದ ಅಂತ್ಯದ ವೇಳೆಗೆ 29 ಲಕ್ಷ ಮಾನವ ದಿನಗಳಷ್ಟು ಗುರಿ ಮಾತ್ರ ಸಾಧಿಸಲಾಗಿದೆ. ಬಹುತೇಕ ಜಿಲ್ಲೆಗಳ ಸ್ಥಿತಿ ಇದೇ ರೀತಿ ಇದೆ.

ಸಾಮಾನ್ಯವಾಗಿ ಫೆಬ್ರುವರಿ, ಮಾರ್ಚ್ ನಂತರದ ದಿನಗಳಲ್ಲಿ ನರೇಗಾ ಅಡಿ ಉದ್ಯೋಗಕ್ಕೆ ಬೇಡಿಕೆ ಹೆಚ್ಚಾಗುತ್ತದೆ. ಈ ಬಾರಿಯೂ ಏಪ್ರಿಲ್ ಮೊದಲ ವಾರದಲ್ಲೇ ಲಕ್ಷಾಂತರ ಉದ್ಯೋಗ ಚೀಟಿದಾರರು ಕೆಲಸ ಕೇಳಿಕೊಂಡು ಗ್ರಾಮ ಪಂಚಾಯಿತಿ ಕಚೇರಿಗಳ ಬಾಗಿಲು ಬಡಿಯುತ್ತಿದ್ದಾರೆ. ಆದರೆ, ಕೇಂದ್ರ ಸರ್ಕಾರದ ಅನುಮೋದನೆ ಮತ್ತು ರಾಜ್ಯ ಸರ್ಕಾರದ ಸ್ಪಷ್ಟ ನಿರ್ದೇಶನ ಇಲ್ಲದ ಕಾರಣ ಗ್ರಾಮ ಪಂಚಾಯಿತಿಗಳು ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ. ಉದ್ಯೋಗ ಸಿಗುವ ಭರವಸೆ ಇಲ್ಲದ ಕಾರಣ ಜನರು ಗುಳೆ ಹೋಗುವ ಸ್ಥಿತಿ ಎದುರಾಗಿದೆ.

ಕೆಲವು ಜಿಲ್ಲೆಗಳ ಜನರು ಗೋವಾಕ್ಕೆ ಗುಳೆಹೋಗುತ್ತಿದ್ದರೆ, ತೋಟಗಳಲ್ಲಿ ಕೆಲಸ ಅರಸಿ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ತುಮಕೂರು, ಹಾಸನ, ದಕ್ಷಿಣ ಕನ್ನಡ ಜಿಲ್ಲೆಗಳತ್ತ ಸಾವಿರಾರು ಕುಟುಂಬಗಳು ಹೊರಟಿವೆ. ಕೆಲವರು ಪುಣೆ, ಬೆಂಗಳೂರು, ಮುಂಬೈ, ಹೈದರಾಬಾದ್‌ನ ಹಾದಿ ಹಿಡಿದಿದ್ದಾರೆ. ಬಾಕಿಯಾಗಿರುವ ಕಾಮಗಾರಿಗಳು ಮುಗಿದರೆ, ಗುಳೆ ಪ್ರಮಾಣ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.



ಬೆಂಗಳೂರು ಭರಾಟೆಗೆ ಬಸವಳಿದ ಚೆನ್ನೈ

ಚಿನ್ನಸ್ವಾಮಿ ಅಂಗಳದಲ್ಲಿ ರನ್ ಹೊಳೆ ಹರಿಸಿದ ಪಡಿಕ್ಕಲ್, ಟಿಮ್ ಡೇವಿಡ್ • ಜೇಕಬ್ ಡಫಿ, ಭುವನೇಶ್ವರ್ ಮಿಂಚು

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಅಭಿಮಾನಿಗಳಿಗೆ ಗೆಲುವಿನ ಕಾಣಿಕೆ ನೀಡಿತು.

ಚಾಂಪಿಯನ್ ತಂಡಕ್ಕೆ ತಕ್ಕಂತೆ ಆಡಿದ ಆತಿಥೇಯರು 43 ರನ್‌ಗಳಿಂದ ಜಯಭೇರಿ ಬಾರಿಸಿತು. ಆದರೆ ಋತುರಾಜ್ ಗಾಯಕವಾಡ್ ಬಳಗವು ಒಂದು ವಾರದ ಅಂತರದಲ್ಲಿ ಸತತ ಮೂರನೇ ಸೋಲಿನ ಕಹಿ ಉಂಡಿತು. ತನ್ನ ಬೆಂಬಲಿಗರನ್ನು ನಿರಾಶೆಗೊಳಿಸಿತು.

ಟಾಸ್ ಗೆದ್ದ ಚೆನ್ನೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ಬೌಲರ್‌ಗಳು ಮೊದಲ ಹತ್ತು ಓವರ್‌ಗಳಲ್ಲಿ (1 ವಿಕೆಟ್‌ಗೆ 91) ಒಂದಿಷ್ಟು ಹಿಡಿತ ಸಾಧಿಸಿದ್ದರು. ಆದರೆ ನಂತರದ ಎಲ್ಲ ಹಂತಗಳಲ್ಲಿಯೂ ಆರ್‌ಸಿಬಿ ಮೇಲುಗೈ ಸಾಧಿಸಿತು. ಅದಕ್ಕೆ ಕಾರಣವಾಗಿದ್ದು 'ಸ್ಥಳೀಯ ಹೀರೊ' ದೇವದತ್ತ ಪಡಿಕ್ಕಲ್ (50; 29ಎ, 4X5, 6X1), ನಾಯಕ ರಜತ್ ಪಾಟೀದಾರ್ (ಔಟಾಗದೇ 48; 19ಎ, 4X1, 6X6) ಹಾಗೂ ಟಿಮ್ ಡೇವಿಡ್ (ಔಟಾಗದೇ 70; 25ಎ, 4X3, 6X8) ಅವರ ಸ್ಫೋಟಕ ಬ್ಯಾಟಿಂಗ್. ಅವರ ಆಟದಿಂದಾಗಿ ಆತಿಥೇಯ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 250 ರನ್ ಗಳಿಸಿತು. ಆರ್‌ಸಿಬಿಯು ಐಪಿಎಲ್‌ನಲ್ಲಿ ಗಳಿಸಿದ ಮೂರನೇ ಅತಿದೊಡ್ಡ ಮೊತ್ತ ಇದು.

ಗುರಿ ಬೆನ್ನಟ್ಟಿದ ಚೆನ್ನೈ ತಂಡಕ್ಕೆ ಆರ್‌ಸಿಬಿಯ ವೇಗದ ಜೋಡಿ ಜೇಕಬ್ ಡಫಿ (50ಕ್ಕೆ2) ಮತ್ತು ಭುವನೇಶ್ವರ್ ಕುಮಾರ್ (41ಕ್ಕೆ3) ಬಲವಾದ ಪೆಟ್ಟುಕೊಟ್ಟರು. ಇದರಿಂದಾಗಿ ತಂಡವು 87 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಅರ್ಧಶತಕ ಗಳಿಸಿದ ಸರ್ಫರಾಜ್ ಖಾನ್ (50; 25ಎ) ದಿಟ್ಟತನ ತೋರಿದರು. ಪ್ರಶಾಂತ್ ವೀರ್ (43 ರನ್) ಮತ್ತು ಜೇಮಿ ಓವರ್ಟನ್ (37 ರನ್) ಅವರ ಆಟಕ್ಕೆ ಗೆಲುವು ಒಲಿಯಲಿಲ್ಲ. ತಂಡವು 19.4 ಓವರ್‌ಗಳಲ್ಲಿ 207 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಅನುಭವಿ ಸಂಜು ಸ್ಯಾಮ್ಸನ್, ನಾಯಕ ಋತುರಾಜ್ ಮತ್ತು ಕಳೆದ ಪಂದ್ಯದಲ್ಲಿ ಮಿಂಚಿದ್ದ ಯುವತಾರೆ ಆಯುಷ್ ಮಾತ್ರೆ ಅವರು ಇಲ್ಲಿ ವೈಫಲ್ಯ ಅನುಭವಿಸಿದರು.

10 ಓವರ್ 159 ರನ್: ಚೆನ್ನೈ ಬೌಲರ್‌ಗಳು ಆರಂಭದಲ್ಲಿ ಬಿಗಿ ದಾಳಿ ನಡೆಸಿದರು. ಇದರಿಂದಾಗಿ ಪವರ್‌ಪ್ಲೇ ಹಂತದಲ್ಲಿ ಬೆಂಗಳೂರು ತಂಡವು 1 ವಿಕೆಟ್‌ಗೆ 51 ರನ್ ಮಾತ್ರ ಕಲೆಹಾಕಿತು. ಹತ್ತು ಓವರ್ ಮುಗಿದಾಗಲೂ ತಂಡದ ಮೊತ್ತ ಮೂರಂಕಿ ಮುಟ್ಟರಲಿಲ್ಲ. ಆದರೆ ನಂತರದ ಹತ್ತು ಓವರ್‌ಗಳಲ್ಲಿ ಆರ್‌ಸಿಬಿ ಖಾತೆಗೆ 159 ರನ್‌ಗಳು ಹರಿದುಬಂದವು. ಅದಕ್ಕೆ ಕಾರಣವಾಗಿದ್ದು ಎರಡು ಜೊತೆಯಾಟಗಳು.

ದೇವದತ್ತ ಹಾಗೂ ನಾಯಕ ರಜತ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 21 ಎಸೆತಗಳಲ್ಲಿ 58 ರನ್ ಸೂರೆ ಮಾಡಿದರು. ಅದರಲ್ಲಿ ದೇವದತ್ತ ಕಾಣಿಕೆ 33 ರನ್‌ಗಳಾಗಿದ್ದವು. ಇದಕ್ಕೂ ಮುನ್ನ ದೇವದತ್ತ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ಫಿಲ್ ಸಾಲ್ಟ್ ಅವರೊಂದಿಗೂ 56 ರನ್ ಸೇರಿಸಿದ್ದರು. ಬೆಂಗಳೂರಿನ ಎಡಗೈ ಬ್ಯಾಟರ್ ದೇವದತ್ತ ಅವರ ಫ್ಲಿಕ್, ಪುಲ್ ಮತ್ತು ಡ್ರೈವ್‌ಗಳ ಚಿತ್ತಾರ ನೋಡುಗರ ಮನ ಗೆದ್ದಿತ್ತು. ಇನ್ನೊಂದೆಡೆ ಸಾಲ್ಟ್ (46; 30ಎ) ಅರ್ಧಶತಕದ ಅಂಚಿನಲ್ಲಿ ಎಡವಿದರು.

ದೇವದತ್ತ ಟೂರ್ನಿಯಲ್ಲಿ ಸತತ ಎರಡನೇ ಅರ್ಧಶತಕ ದಾಖಲಿಸಿದರು. ಆದರೆ 15ನೇ ಓವರ್‌ನಲ್ಲಿ ಓವರ್ಟನ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು.

ಕ್ರೀಸ್‌ಗೆ ಬಂದ 'ಅಜಾನುಬಾಹು' ಬ್ಯಾಟರ್ ಟಿಮ್ ಡೇವಿಡ್ ಬೀಸಾಟ ಆರಂಭಿಸಿದರು. ರಜತ್ ಅವರಿಗಿಂತಲೂ ವೇಗವಾಗಿ ರನ್ ಗಳಿಸಿದರು. ಮುರಿಯದ ನಾಲ್ಕನೇ ವಿಕೆಟ್ ಜತೆಯಾಟದಲ್ಲಿ 99 ರನ್ ಸೇರಿಸಿದರು. ಬೌಲರ್‌ಗಳು ಇನಿಂಗ್ಸ್‌ನ ಆರಂಭದಲ್ಲಿ ಮಾಡಿದ್ದ ಶ್ರಮವೆಲ್ಲವೂ ಮಣ್ಣುಪಾಲಾಯಿತು. ಡೇವಿಡ್ ಹೊಡೆದ ಎಂಟು ಸಿಕ್ಸರ್‌ಗಳಲ್ಲಿ ಒಂದು ಬಾರಿ ಚೆಂಡು ಮೈದಾನದ ಹೊರಗೆ ಹೋಗಿಬಿತ್ತು. ಅನ್ಶುಲ್ ಹಾಕಿದ 18ನೇ ಓವರ್‌ನಲ್ಲಿ ಡೇವಿಡ್ ಕ್ಲೀನ್ ಬೌಲ್ಡ್ ಆದರು. ಆದರೆ, ಅದು ನೋಬಾಲ್ ಆಗಿತ್ತು. ಇನ್ನೊಂದೆಡೆ ರಜತ್ ಅರ್ಧಡಜನ್ ಸಿಕ್ಸರ್ ಸಿಡಿಸಿದರು.

3 ಓವರ್‌ನಲ್ಲಿ ಬೌಂಡರಿಯಿಲ್ಲ: ಆರ್‌ಸಿಬಿಯ ಇನಿಂಗ್ಸ್‌ನ ಮೊದಲ ಮೂರು ಓವರ್‌ಗಳಲ್ಲಿ ಒಂದೂ ಬೌಂಡರಿ ದಾಖಲಾಗಲಿಲ್ಲ. ಈ ಹಂತ ದಲ್ಲಿ ಫೀಲ್ಡರ್‌ಗಳು ಚುರುಕಾಗಿದ್ದರು. ಔಟ್‌ಫೀಲ್ಡ್ ಕೂಡ ನಿಧಾನವಾಗಿತ್ತು. ಚೆಂಡು ವೇಗವಾಗಿ ಉರುಳಲಿಲ್ಲ. ಖಲೀಲ್ ಹಾಕಿದ ಮೂರನೇ ಓವರ್ ನಲ್ಲಿ ವಿರಾಟ್ ಕೊಹ್ಲಿಯ ಕ್ಯಾಚ್ ಅನ್ನು ಶಿವಂ ದುಬೆ ಕೈಚೆಲ್ಲಿದರು. ಓವರ್ಟನ್ ಹಾಕಿದ ನಂತರದ ಓವರ್‌ನಲ್ಲಿ ವಿರಾಟ್ ಇನಿಂಗ್ಸ್‌ನ ಮೊದಲ ಸಿಕ್ಸರ್ ಹೊಡೆದರು. ಅದೇ ಓವರ್‌ನಲ್ಲಿ ಒಂದು ಬೌಂಡರಿ ಹೊಡೆದರು.

ಅದರೆ ನಂತರದ ಓವರ್‌ನಲ್ಲಿ ಅನ್ಶುಲ್ ಕಂಬೋಜ್ ಎಸೆತವನ್ನು ಹೊಡೆದ ಕೊಹ್ಲಿಯ ಕ್ಯಾಚ್ ಪಡೆಯುವಲ್ಲಿ ಶಿವಂ ದುಬೆ ತಪ್ಪು ಮಾಡಲಿಲ್ಲ.



ಟಿಮ್ ಡೇವಿಡ್
ರನ್ 70*
ಎಸೆತ 25
ಬೌಂಡರಿ 3
ಸಿಕ್ಸರ್ 8



ಚೆಂಡನ್ನು ಬೌಂಡರಿಗೆ ಅಟ್ಟಿದ ದೇವದತ್ತ ಪಡಿಕ್ಕಲ್

ಪ್ರಜಾವಾಣಿ ಚಿತ್ರಗಳು: ರಂಜು ಪಿ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 3ಕ್ಕೆ 250 (20 ಓವರ್‌ಗಳಲ್ಲಿ)

ಸಾಲ್ಟ್ ಸಿ ನೂರ್ ಬಿ ದುಬೆ 46 (30ಎ, 4x3, 6x2)
ವಿರಾಟ್ ಸಿ ದುಬೆ ಬಿ ಕಂಬೋಜ್ 28 (18ಎ, 4x2, 6x1)
ಪಡಿಕ್ಕಲ್ ಬಿ ಓವರ್ಟನ್ 50 (29ಎ, 4x5, 6x2)
ರಜತ್ ಪಾಟೀದಾರ್ ಔಟಾಗದೇ 48 (19ಎ, 4x1, 6x6)
ಟಿಮ್ ಡೇವಿಡ್ ಔಟಾಗದೇ 70 (25ಎ, 4x3, 6x8)

ಇತರೆ: 8 (ಬೈ 1, ಲೆಗ್‌ಬೈ 3, ನೋಬಾಲ್ 1, ವೈಡ್ 3)

ವಿಕೆಟ್ ಪತನ: 1-37 (ವಿರಾಟ್ ಕೊಹ್ಲಿ, 4.3), 2-93 (ಫಿಲ್ ಸಾಲ್ಟ್, 10.4), 3-151 (ದೇವದತ್ತ ಪಡಿಕ್ಕಲ್, 14.1)

ಬೌಲಿಂಗ್: ಖಲೀಲ್ ಅಹಮ್ಮದ್ 4-0-37-0, ಮ್ಯಾಟ್ ಹೆನ್ರಿ 3-0-36-0, ಅನ್ಶುಲ್ ಕಂಬೋಜ್ 4-0-52-1, ನೂರ್ ಅಹಮ್ಮದ್ 4-0-49-0, ಜೇಮಿ ಓವರ್ಟನ್ 3-0-42-1, ಶಿವಂ ದುಬೆ 2-0-30-1

ಚೆನ್ನೈ ಸೂಪರ್ ಕಿಂಗ್ಸ್: 207 (19.4 ಓವರ್‌ಗಳಲ್ಲಿ)

ಸಂಜು ಸಿ ಪಡಿಕ್ಕಲ್ ಬಿ ಡಫಿ 9 (5ಎ, 6x1)
ಗಾಯಕವಾಡ್ ಸಿ ಪಡಿಕ್ಕಲ್ ಬಿ ಡಫಿ 7 (3ಎ, 6x1)
ಆಯುಷ್ ಸಿ ಪಾಟೀದಾರ್ ಬಿ ಭುವನೇಶ್ವರ್ 1 (3ಎ)
ಸರ್ಫರಾಜ್ ಸ್ಟಂಪ್ ಜಿತೇಶ್ ಬಿ ಪಾಂಡ್ಯ 50 (25ಎ, 4x8, 6x2)
ಕಾರ್ತಿಕ್ ಸಿ ಅಭಿನಂದನ್ ಬಿ ಪಾಂಡ್ಯ 6 (3ಎ, 6x1)
ಶಿವಂ ಸಿ ಜಿತೇಶ್ ಬಿ ಅಭಿನಂದನ್ 18 (13ಎ, 4x2, 6x1)
ಪ್ರಶಾಂತ್ ಸಿ ಪಾಟೀದಾರ್ ಬಿ ಭುವನೇಶ್ವರ್ 43 (29ಎ, 4x6, 6x1)
ಓವರ್ಟನ್ ಸಿ ಸಬ್ (ಬೆಥೆಲ್) ಬಿ ಸುಯಶ್ 37 (16ಎ, 4x4, 6x2)
ಕಂಬೋಜ್ ಔಟಾಗದೇ 19 (12ಎ, 4x1, 6x1)
ನೂರ್ ಸಿ ಕೊಹ್ಲಿ ಬಿ ಭುವನೇಶ್ವರ್ 8 (8ಎ, 6x1)
ಹೆನ್ರಿ ಸಿ ಸಾಲ್ಟ್ ಬಿ ಅಭಿನಂದನ್ 2 (3ಎ)

ಇತರೆ: 7 (ಲೆಗ್‌ಬೈ 2, ನೋಬಾಲ್ 2, ವೈಡ್ 3)

ವಿಕೆಟ್ ಪತನ: 1-9 (ಋತುರಾಜ್ ಗಾಯಕವಾಡ್, 0.5), 2-10 (ಆಯುಷ್ ಮಾತ್ರೆ, 1.2), 3-30 (ಸಂಜು ಸ್ಯಾಮ್ಸನ್, 2.5), 4-77 (ಸರ್ಫರಾಜ್ ಖಾನ್, 6.1), 5-84 (ಕಾರ್ತಿಕ್ ಶರ್ಮಾ, 6.5), 6-108 (ಶಿವಂ ದುಬೆ, 9.5), 7-165 (ಪ್ರಶಾಂತ್ ವೀರ್, 15.1), 8-178 (ಜೇಮಿ ಓವರ್ಟನ್, 16.1), 9-190 (ನೂರ್ ಅಹಮ್ಮದ್, 17.6), 10-207 (ಮ್ಯಾಟ್ ಹೆನ್ರಿ, 19.4).

ಬೌಲಿಂಗ್: ಜೇಕಬ್ ಡಫಿ 4-0-58-2, ಭುವನೇಶ್ವರ್ ಕುಮಾರ್ 4-0-41-3, ಅಭಿನಂದನ್ ಸಿಂಗ್ 3.4-0-30-2, ಕೃಣಾಲ್ ಪಾಂಡ್ಯ 3-0-36-2, ಸುಯಶ್ ಶರ್ಮಾ 4-0-21-1, ರೊಮಾರಿಯೊ ಶೆಫರ್ಡ್ 1-0-19-0

ಪಂದ್ಯದ ಆಟಗಾರ: ಟಿಮ್ ಡೇವಿಡ್

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 43 ರನ್‌ಗಳ ಗೆಲುವು

ನಾಮಕರಣ

ಪ್ರಜಾವಾಣಿ ಚಿತ್ರ: ರಂಜು ಪಿ



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ 'ಅನಿಲ್ ಕುಂಬ್ಳೆ ಎಂಡ್' ಮತ್ತು 'ರಾಹುಲ್ ದ್ರಾವಿಡ್ ಎಂಡ್' ಅನ್ನು ಉದ್ಘಾಟಿಸಲಾಯಿತು. ಈ ವೇಳೆ ದಿಗ್ಗಜ ಕ್ರಿಕೆಟಿಗರಾದ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ಸಂತೋಷ್ ಮೆನನ್ ಉಪಸ್ಥಿತರಿದ್ದರು

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಟೈ	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	2	2	0	0	4	2.501
ಆರ್‌ಆರ್	2	2	0	0	4	2.233
ಡಿಸಿ	2	2	0	0	4	1.170
ಪಿಬಿಕೆಎಸ್	2	2	0	0	4	0.637
ಎಸ್‌ಆರ್‌ಎಚ್	3	1	2	0	2	0.275
ಎಂಐ	2	1	1	0	2	-0.206
ಎಲ್‌ಎಸ್‌ಜಿ	2	1	1	0	2	- 0.542
ಜಿಟಿ	2	0	2	0	0	-0.424
ಕೆಕೆಆರ್	2	0	2	0	0	-1.964
ಸಿಎಸ್‌ಕೆ	3	0	3	0	0	-2.517

ಆರೆಂಜ್ ಕ್ಯಾಪ್–ಸಮೀರ್ ರಿಜ್ವಿ, ಡಿಸಿ (160 ರನ್)
ಪರ್ಪಲ್ ಕ್ಯಾಪ್–ರವಿ ಬಿಷ್ಣೋಯಿ, ಆರ್‌ಆರ್ (5 ವಿಕೆಟ್)



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಅಭಿಮಾನಿಗಳ ಸಂಭ್ರಮ...

ಜಯದ ಖಾತೆ ತೆರೆದ ಲಖನೌ • ತವರಿನಲ್ಲಿ ಸನ್‌ರೈಸರ್ಸ್‌ಗೆ ಸೋಲು

ಶಮಿ ಬಿಗಿದಾಳಿ; ಪಂತ್ ಅಜೇಯ ಆಟ

ಹೈದರಾಬಾದ್ (ಪಿಟಿಐ): ದೀರ್ಘ ಕಾಲದ ನಂತರ ರಿಷಭ್ ಪಂತ್ ಅವರು ಹೊಣೆಯಿಂದ ಆಡಿ ತಂಡದ ಗೆಲುವನ್ನು ಪೂರೈಸಿದರು. ಅವರ ಅಜೇಯ ಅರ್ಧ ಶತಕದ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ತಂಡ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಮೇಲೆ 5 ವಿಕೆಟ್‌ಗಳ ರೋಚಕ ಜಯ ಪಡೆಯಿತು.

ಆದರೆ ಲಖನೌ ವಿಜಯದಲ್ಲಿ ಪಂತ್ ಅವರಷ್ಟೇ ಮಿಂಚಿದವರು ವೇಗದ ಬೌಲರ್ ಮೊಹಮ್ಮದ್ ಶಮಿ. ಪಂದ್ಯದ ಆರಂಭದಲ್ಲಿ ಅಮೋಘ ಬೌಲಿಂಗ್ ಪ್ರದರ್ಶಿಸಿ ಅವರು ಹೈದರಾಬಾದ್ ಬ್ಯಾಟರ್‌ಗಳನ್ನು ಕಂಗೆಡಿಸಿದರು; ಅಷ್ಟೇ ಅಲ್ಲ, ರಾಷ್ಟ್ರೀಯ ಆಯ್ಕೆಗಾರರಿಗೂ ತಮ್ಮ ಸಾಮರ್ಥ್ಯ ಕುಂದಿಲ್ಲ ಎಂಬ ಸಂದೇಶ ರವಾನಿಸಿದರು.

ಸಮಯೋಚಿತವಾಗಿ ಆಡಿದ ಪಂತ್ 50 ಎಸೆತಗಳಲ್ಲಿ 9 ಬೌಂಡರಿಗಳಿದ್ದ ಅಜೇಯ 68 ರನ್ ಹೊಡೆದರು. 157 ರನ್‌ಗಳ ಗುರಿ ಎದುರಿಸಿದ್ದ ಲಖನೌ ತಂಡ ಒಂದು ಎಸೆತ ಉಳಿದಿರುವಂತೆ 5 ವಿಕೆಟ್‌ಗೆ 160 ರನ್ ಹೊಡೆದು ಮೊದಲ ಗೆಲುವಿನ ಸಂಭ್ರಮ ಆಚರಿಸಿತು.

ಕೌಶಲ ಮತ್ತು ಗುಣಮಟ್ಟದ ದಾಳಿ ಪ್ರದರ್ಶಿಸಿದ ಶಮಿ (4-0-9-2) ಮೊದಲ ಓವರಿನಲ್ಲೇ ಸ್ಫೋಟಕ ಆಟಗಾರ ಅಭಿಷೇಕ್ ಶರ್ಮಾ (0) ಮತ್ತು ಎರಡನೇ ಓವರಿನಲ್ಲಿ ಟ್ರಾವಿಸ್ ಹೆಡ್ (7) ಅವರ ವಿಕೆಟ್‌ಗಳನ್ನು ಪಡೆದರು. 18 ಡಾಟ್ ಬಾಲ್‌ಗಳನ್ನು ಮಾಡಿದರು. ಸನ್‌ರೈಸರ್ಸ್ ಅಂತಿಮವಾಗಿ 9 ವಿಕೆಟ್‌ಗೆ 156 ರನ್ ಗಳಿಸಲಷ್ಟೇ ಶಕ್ತವಾಯಿತು.

ಲಖನೌ ತಂಡಕ್ಕೆ ಮರ್ಕರಂ (45, 27ಎ, 4x6, 6x2) ಮತ್ತು ರಿಷಭ್ ಪಂತ್ ಎರಡನೇ ವಿಕೆಟ್‌ಗೆ 40 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಮರ್ಕರಂ ನಿರ್ಗಮಿಸಿದ ಮೇಲೆ ಒಂದು ಕಡೆ ನಿಯಮಿತವಾಗಿ ವಿಕೆಟ್‌ಗಳು ಉರುಳಿದವು. ಆದರೆ ಇನ್ನೊಂದು ಕಡೆ ಪಂತ್ ಹೊಣೆಯರಿತು ಆಟವಾಡಿದರು. ದೀರ್ಘಕಾಲದ ನಂತರ ತಂಡವನ್ನು ಗೆಲ್ಲಿಸಿದರು. ಜಯದೇವ್ ಉನದ್ಕತ್ ಮಾಡಿದ ಅಂತಿಮ ಓವರಿನಲ್ಲಿ ಲಖನೌ ಗೆಲುವಿಗೆ 9 ರನ್‌ಗಳು ಬೇಕಿದ್ದವು. ಎರಡು ನೇರ ಬೌಂಡರಿಗಳು ಸ್ಕೋರ್ ಸಮಮಾಡಿದವು. ಮಿಡ್‌ಆಫ್ ಮೇಲೆ ಚೆಂಡನ್ನು ಲಾಫ್ಟ್ ಮಾಡಿ ಮತ್ತೊಂದು ಬೌಂಡರಿಯೊಡನೆ ಪಂತ್ ಗೆಲುವನ್ನು ಭರ್ಜರಿಯಾಗಿಯೇ ಪೂರೈಸಿದರು.

ಇದಕ್ಕೆ ಮೊದಲು ಶಮಿ ಅವರ ಉರಿದಾಳಿಗೆ ಆರಂಭದ ಕುಸಿತ ಕಂಡ ಸನ್‌ರೈಸರ್ಸ್ ಸಂಕಷ್ಟದಲ್ಲಿತ್ತು. ಪ್ರಿನ್ಸ್ ಯಾದವ್ ಬೌಲಿಂಗ್‌ನಲ್ಲಿ ಡ್ರೈವ್‌ಗೆ ಮುಂದಾದ ನಾಯಕ ಇಶಾನ್ ಕಿಶನ್ (1) ಆಫ್‌ಸ್ಟಂಪ್ ಉರುಳಿತು. ಸ್ಪಿನ್ನರ್ ದಿಗ್ವೇಶ್ ರಾಠಿ ಅವರು ಲಿಯಾಮ್ ಲಿವಿಂಗ್‌ಸ್ಟೋನ್ (14) ವಿಕೆಟ್ ಪಡೆದಾಗ ಸನ್‌ರೈಸರ್ಸ್ 26 ರನ್ನಿಗೆ 4 (7.1 ಓವರ್) ವಿಕೆಟ್ ಕಳೆದುಕೊಂಡಿತ್ತು. ಕ್ರೀಡಾಂಗಣ ಮೌನವಾಯಿತು.

ಆದರೆ ಒತ್ತಡದ ಸನ್ನಿವೇಶದಲ್ಲೂ ಬೀಸಾಟವಾಡಿದ ಹೆನ್ರಿಚ್ ಕ್ಲಾಸೆನ್ (62, 41ಎ, 4x5, 6x2) ಮತ್ತು ಲಯದಲ್ಲಿರುವ ನಿತೀಶ್ ಕುಮಾರ್ ರೆಡ್ಡಿ (56, 33ಎ, 4x3, 6x5) ಅವರು ಅರ್ಧಶತಕಗಳನ್ನು ಬಾರಿಸಿದರಷ್ಟೇ ಅಲ್ಲ, ಐದನೇ ವಿಕೆಟ್‌ಗೆ 116 ರನ್ ಸೇರಿಸಿ ತಂಡಕ್ಕೆ ಬಲ ನೀಡಿದರು. ಆದರೆ ಇಬ್ಬರೂ ಅಲ್ಪ ಅಲ್ಪಅಂತರದಲ್ಲಿ ನಿರ್ಗಮಿಸಿದ ಮೇಲೆ ಲಖನೌ, ಎದುರಾಳಿ ತಂಡವನ್ನು 160ರ ಒಳಗೆ ಕಟ್ಟಿಹಾಕಿತು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರುಗಳಲ್ಲಿ 9 ವಿಕೆಟ್‌ಗೆ 156 (ಹೆನ್ರಿಚ್ ಕ್ಲಾಸೆನ್ 62, ನಿತೀಶ್ ಕುಮಾರ್ ರೆಡ್ಡಿ 56; ಮೊಹಮ್ಮದ್ ಶಮಿ 9ಕ್ಕೆ2, ಪ್ರಿನ್ಸ್ ಯಾದವ್ 34ಕ್ಕೆ2, ಆವೇಶ್ ಖಾನ್ 36ಕ್ಕೆ2); ಲಖನೌ ಸೂಪರ್ ಕಿಂಗ್ಸ್: 19.5 ಓವರುಗಳಲ್ಲಿ 5 ವಿಕೆಟ್‌ಗೆ 160 (ಏಡನ್ ಮರ್ಕರಂ 45, ರಿಷಭ್ ಪಂತ್ ಔಟಾಗದೇ 68; ಹರ್ಷ ದುಬೆ 18ಕ್ಕೆ2); ಪಂದ್ಯದ ಆಟಗಾರ: ಮೊಹಮ್ಮದ್ ಶಮಿ.



ವಿಕೆಟ್ ಗಳಿಸಿದ ಮೊಹಮ್ಮದ್ ಶಮಿ ಅವರಿಗೆ ಸಹ ಆಟಗಾರರ ಅಭಿನಂದನೆ...

ಎಎಫ್‌ಪಿ ಚಿತ್ರ

ಕೋಲ್ಕತ್ತಕ್ಕೆ ಶ್ರೇಯಸ್ ಬಳಗದ ಸವಾಲು

ಮೊದಲ ಗೆಲುವಿನ ತವಕದಲ್ಲಿ ರಹಾನೆ ಬಳಗ: ಹ್ಯಾಟ್ರಿಕ್ ಮೇಲೆ ಕಿಂಗ್ಸ್ ಕಣ್ಣು

ಕೋಲ್ಕತ್ತ (ಪಿಟಿಐ): ಸತತ ಎರಡು ಸೋಲುಗಳಿಂದ ಕಂಗೆಟ್ಟಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಸೋಮವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಮೂರು ಬಾರಿಯ ಚಾಂಪಿಯನ್ ಕೋಲ್ಕತ್ತ ತಂಡಕ್ಕೆ ಪ್ರಮುಖ ವೇಗಿಗಳಾದ ಹರ್ಷಿತ್ ರಾಣಾ, ಆಕಾಶ್ ದೀಪ್ ಮತ್ತು ಮಥೀಶ ಪಥಿರಾಣ ಅವರು ಅಲಭ್ಯರಾಗಿರುವುದು ದೊಡ್ಡ ಹಿನ್ನಡೆಯಾಗಿದೆ. ಬಳಗದಲ್ಲಿ ಲಭ್ಯ ಇರುವ ಆಟಗಾರರನ್ನು ಸೂಕ್ತವಾಗಿ ನಿಯೋಜನೆ ಮಾಡುವಲ್ಲಿ ಎಡವಿದ್ದು ಕೂಡ ಸೋಲುಗಳಿಗೆ ಕಾರಣವಾಗಿದೆ. ಇದರಿಂದಾಗಿ ಮೂರನೇ ಪಂದ್ಯದಲ್ಲಿಯೂ ಅಜಿಂಕ್ಯ ರಹಾನೆ ನಾಯಕತ್ವದ ಬಳಗಕ್ಕೆ ಜಯದ ಹಾದಿ ಕಠಿಣವಾಗಿರುವುದನ್ನು ಅಲ್ಲಗಳೆಯಲಾಗದು.

ಕೋಲ್ಕತ್ತ ತಂಡವು 2024ರಲ್ಲಿ ಪ್ರಶಸ್ತಿ ಜಯಿಸಿದಾಗ ನಾಯಕರಾಗಿದ್ದ ಶ್ರೇಯಸ್ ಅಯ್ಯರ್ ಅವರನ್ನು ಹೋದ ವರ್ಷದ ಹರಾಜಿನಲ್ಲಿ ಉಳಿಸಿ ಕೊಳ್ಳಲಿಲ್ಲ. ಅದರಿಂದಾಗಿ ಅವರು ಪಂಜಾಬ್ ಕಿಂಗ್ಸ್ ತಂಡದಿಂದ ದೊಡ್ಡ ಮೌಲ್ಯ ಪಡೆದು ಸೇರ್ಪಡೆಗೊಂಡರು. ಅವರ ನಾಯಕತ್ವದಲ್ಲಿ ಪಂಜಾಬ್ ತಂಡವು ಹೋದ ಸಲ ಫೈನಲ್ ಪ್ರವೇಶಿಸಿತ್ತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೋತಿತ್ತು. ಶ್ರೇಯಸ್ 2020ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನೂ ಫೈನಲ್ ಪ್ರವೇಶಿಸುವಂತೆ ಮಾಡಿದ್ದ ನಾಯಕ.

ಹೋದ ಸಲ ಕೋಲ್ಕತ್ತ ತಂಡವು ಎಂಟನೇ ಸ್ಥಾನ ಪಡೆದಿತ್ತು. ಈ ಸಲವೂ ಉತ್ತಮ ಆರಂಭ ಸಿಕ್ಕಿಲ್ಲ. ನ್ಯೂಜಿಲೆಂಡ್‌ನ ಅಗ್ರಕ್ರಮಾಂಕದ ಬ್ಯಾಟರ್‌ಗಳಾದ ಫಿನ್ ಅಲೆನ್, ಟಿಮ್ ಸೀಫರ್ಟ್ ಮತ್ತು ರಚಿನ್ ರವೀಂದ್ರ ಅವರು ಇದ್ದರೂ ಕೋಲ್ಕತ್ತ ತಂಡವು ಸೋಲಿನ ಕಹಿ ಅನುಭವಿಸುತ್ತಿದೆ.

ಅಲ್ಲದೇ ಅನುಭವಿ ಆಲ್‌ರೌಂಡರ್ ಸುನಿಲ್ ನಾರಾಯಣ್ ಮತ್ತು ಸ್ಪಿನ್ ಮೋಡಿಗಾರ ವರುಣ್ ಚಕ್ರವರ್ತಿ ಅವರ ಕೈಚಳಕವೂ ನಡೆಯುತ್ತಿಲ್ಲ. ಇದು ತಂಡದ ಹಿನ್ನಡೆಗೆ ಪ್ರಮುಖ ಕಾರಣವಾಗಿದೆ. ಟಿ20 ಪರಿಣತ ರೋವ್ಮನ್ ಪೊವೆಲ್ ಅವರಿಗೆ ಹನ್ನೊಂದರ ಬಳಗದಲ್ಲಿ ಕಣಕ್ಕಿಳಿಯುವ ಅವಕಾಶ ನೀಡಿಲ್ಲ. ಇದು ತಂಡದ ಆಯ್ಕೆ ಪ್ರಕ್ರಿಯೆಯು ಟೀಕೆಗೊಳಗಾಗಲು ಕಾರಣವಾಗಿದೆ.

ನೆರವು ಸಿಬ್ಬಂದಿಯಲ್ಲಿ ಶೇನ್ ವಾಟ್ಸನ್, ಡ್ವೇನ್ ಬ್ರಾವೊ ಮತ್ತು ಆ್ಯಂಡ್ರೆ ರಸೆಲ್ ಅವರಂತಹ ದಿಗ್ಗಜರು ಇದ್ದಾರೆ. ಆದರೂ 11 ಬಳಗದ ಆಯ್ಕೆಯಲ್ಲಿ ಸ್ಪಷ್ಟತೆ ಕಾಣುತ್ತಿಲ್ಲ. ನಾಯಕ ರಹಾನೆ ಅವರು ಆರಂಭಿಕ ಬ್ಯಾಟರ್ ಆಗಿ ಕಣಕ್ಕಿಳಿಯುತ್ತಿರುವುದು ಒಂದಿಷ್ಟು ಫಲ ನೀಡಿದೆ. ಆದರೆ ಐದನೇ ಕ್ರಮಾಂಕದ ನಂತರ ಬ್ಯಾಟಿಂಗ್ ದುರ್ಬಲವಾಗುತ್ತಿರುವುದು ಕೂಡ ಸುಳ್ಳಲ್ಲ. ರಮಣದೀಪ್ ಸಿಂಗ್ ಮತ್ತು ಅನುಕೂಲ್ ರಾಯ್ ಅವರು ಬೀಸಾಟವಾಡಿದಿರುವುದು ಚಿಂತೆಗೆ ಕಾರಣವಾಗಿದೆ.

ಆದರೆ ಪಂಜಾಬ್ ತಂಡವು ಸಮತೋಲನದಿಂದ ಕೂಡಿದೆ. ಆಡಿರುವ ಎರಡೂ ಪಂದ್ಯಗಳಲ್ಲಿ ಜಯಸಾಧಿಸಿದೆ. ಕೂಪರ್ ಕೊನೊಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಯಶಸ್ವಿಯಾಗಿದ್ದಾರೆ. ಎರಡೂ ಪಂದ್ಯಗಳಲ್ಲಿ ಸೇರಿ ಒಟ್ಟು 108 ರನ್ ಗಳಿಸಿದ್ದಾರೆ. ಪ್ರಿಯಾಂಶ್ ಆರ್ಯ ಮತ್ತು ಪ್ರಭಸಿಮ್ರನ್ ಸಿಂಗ್ ಅವರು ಮಿಂಚಿನ ಆರಂಭ ನೀಡುತ್ತಿದ್ದಾರೆ.

ಕಿಂಗ್ಸ್ ತಂಡದ ಬೌಲರ್‌ಗಳೂ ಅಮೋಘ ಲಯದಲ್ಲಿ-ದ್ದಾರೆ. ಮಾರ್ಕೊ ಯಾನ್ಸೆನ್, ವೈಶಾಖ ವಿಜಯಕುಮಾರ್ ಮತ್ತು ಅರ್ಷದೀಪ್ ಸಿಂಗ್ ಬ್ಯಾಟರ್‌ಗಳಿಗೆ ಸವಾಲೊಡ್ಡುತ್ತಿದ್ದಾರೆ. ಲೆಗ್‌ಸ್ಪಿನ್ನರ್ ಯುಜುವೇಂದ್ರ ಚಾಹಲ್ ಅವರು ತಮ್ಮ ಅನುಭವಕ್ಕೆ ತಕ್ಕಂತೆ ಬೌಲಿಂಗ್ ಮಾಡುತ್ತಿದ್ದಾರೆ. ಅದರಿಂದಾಗಿ ಪಂಜಾಬ್ ತಂಡವು ಆತಿಥೇಯರಿಗೆ ಕಠಿಣ ಸವಾಲೊಡ್ಡುವ ಎಲ್ಲ ಸಾಧ್ಯತೆಗಳೂ ಇವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್



ಅಜಿಂಕ್ಯ ರಹಾನೆ



ಪಂಜಾಬ್ ತಂಡದ ನಾಯಕ ಶ್ರೇಯಸ್ ಅಯ್ಯರ್

ಕೊಡವ ಕೌಟುಂಬಿಕ ಹಾಕಿಗೆ ಚಾಲನೆ

ಮಡಿಕೇರಿ: ತಾಲ್ಲೂಕಿನ ನಾಪೋಕ್ಲು ಪಟ್ಟಣದಲ್ಲಿ ಹಸಿರನ್ನೇ ಹೊದ್ದ ಬೆಟ್ಟಗಳ ನಡುವೆ 26ನೇ ಆವೃತ್ತಿಯ 'ಚೇನಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿ ಭಾನುವಾರ ಆರಂಭಗೊಂಡಿತು.

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಹಾಗೂ ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರು ಬೆಳ್ಳಿಯ ಚೆಂಡನ್ನು ಹೊಡೆಯುವ ಮೂಲಕ ಚಾಲನೆ ನೀಡಿದರು. 383 ತಂಡಗಳು ಪೈಪೋಟಿ ನೀಡಲಿವೆ.

ಸಾಂಪ್ರದಾಯಿಕ ಧಿರಿಸು ಧರಿಸಿದ ಕೊಡವರು ಪಟ್ಟಣದಲ್ಲಿ ಮೆರವಣಿಗೆಯಲ್ಲಿ ಮೈದಾನಕ್ಕೆ ಬಂದರು.

ಪ್ರದರ್ಶನ ಪಂದ್ಯಗಳ ನಂತರ ನಡೆದ ಪಂದ್ಯಗಳಲ್ಲಿ ಓಡಿಯಂಡ 7-0 ಅಂತರದಿಂದ ಚೋಳಪಂಡ ತಂಡವನ್ನು, ಚೆರಿಯಂಡ 5-0 ಅಂತರದಿಂದ ಪಾಸುರ ತಂಡವನ್ನು, ಮಳವಂಡ 3-0 ಅಂತರದಿಂದ ಪೂದ್ರಿಮಾಡ ತಂಡವನ್ನು, ಬೊಳಿಯಾಡಿರ 4-0 ಅಂತರದಿಂದ ಉದ್ದಪಂಡ ತಂಡವನ್ನು, ಕಾಲೆಂಗಡ 3-0 ಅಂತರದಿಂದ ಪಟ್ಟಮಾಡ ತಂಡವನ್ನು, ಅಪ್ಪಚೆಟ್ಟೋಳಂಡ 1-0 ಅಂತರದಿಂದ ಗುಮ್ಮಟಿರ ತಂಡವನ್ನು ಮಣಿಸಿದವು.

ಕಂಗಿರ 3-2 ಅಂತರದಿಂದ ಟೈ ಬ್ರೇಕರ್‌ನಲ್ಲಿ ಅಜ್ಜಿಕುಟ್ಟಿರ ತಂಡವನ್ನು ಮಣಿಸಿತು.

ಮತ್ತೆ ಡ್ರಾ ಪಂದ್ಯದಲ್ಲಿ ಪ್ರಜ್ಞಾನಂದ ಸಿಂದರೋವ್ ಮುನ್ನಡೆ ಅಬಾಧಿತ

ಪಾಫೋಸ್ (ಪಿಟಿಐ): ವಿಶ್ವಕಪ್ ವಿಜೇತ ಜಾವೊಖಿರ್ ಸಿಂದರೋರ್ ಅವರು ಗೆಲುವಿಗಾಗಿ ಇನ್ನಿಲ್ಲದ ಯತ್ನ ನಡೆಸಿದರೂ, ಡಚ್ ಗ್ರ್ಯಾಂಡ್ ಮಾಸ್ಟರ್ ಅನಿಶ್ ಗಿರಿ ರಕ್ಷಣೆಯ ಆಟದೆದುರು ಎದುರು ಅಂತಿಮವಾಗಿ ಡ್ರಾಕ್ಕೆ ಒಪ್ಪಬೇಕಾಯಿತು. ಆದರೆ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಏಳನೇ ಸುತ್ತಿನ ನಂತರವೂ ಅವರು ಒಂದೂವರೆ ಪಾಯಿಂಟ್ ಅಂತರದಿಂದ ಅಗ್ರಸ್ಥಾನ ಕಾಪಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ಭಾನುವಾರ ಇವರಿಬ್ಬರ ನಡುವಣ ಏಳನೇ ಸುತ್ತಿನ ಪಂದ್ಯ 85 ದೀರ್ಘ ನಡೆಗಳ ನಂತರ ಡ್ರಾ ಆಯಿತು. ಉಜ್ಬೇಕ್ ಆಟಗಾರ ಏಳು ಸುತ್ತುಗಳಿಂದ ಆರು ಅಂಕಗಳನ್ನು ಗಳಿಸಿದ್ದಾರೆ. ದಿನದ ನಾಲ್ಕು ಪಂದ್ಯಗಳಲ್ಲಿ ಇದೂ ಸೇರಿ ಮೂರು ಪಂದ್ಯಗಳು ಡ್ರಾ ಆದವು. ಕಣದಲ್ಲಿರುವ ಭಾರತದ ಏಕೈಕ ಆಟಗಾರ ಪ್ರಜ್ಞಾನಂದ ಅವರು ಅಮೆರಿಕದ ಫ್ಯಾಬಿಯಾನೊ ಕರುವಾನ ಜೊತೆ 38 ನಡೆಗಳಲ್ಲಿ ಡ್ರಾ ಮಾಡಿಕೊಂಡರು.

ಅಮೆರಿಕದ ಹಿಕಾರು ನಕಾಮುರ ಅವರು ಜರ್ಮನಿಯ ಮಥಾಯಸ್ ಬ್ಲೂಬಮ್ ಜೊತೆ ಅಂಕ ಹಂಚಿಕೊಂಡರು. ನಿರ್ಣಾಯಕ ಫಲಿತಾಂಶ ಕಂಡ ಏಕೈಕ ಪಂದ್ಯದಲ್ಲಿ ಚೀನಾದ ವೀ ಯಿ, ರಷ್ಯಾದ ಆ್ಯಂಡ್ರಿ ಇಸಿಪೆಂಕೊ (2) ಅವರನ್ನು ಮಣಿಸಿದರು.

14 ಸುತ್ತುಗಳಿರುವ, ಎಂಟು ಆಟಗಾರರ ಕಣದಲ್ಲಿ ಸದ್ಯ ಫ್ಯಾಬಿಯಾನೊ ಕರುವಾನ (4.5) ಎರಡನೇ ಸ್ಥಾನ ಉಳಿಸಿಕೊಂಡಿದ್ದಾರೆ. ಪ್ರಜ್ಞಾನಂದ ಮತ್ತು ಅನಿಶ್ ಗಿರಿ ತಲಾ 3.5 ಅಂಕ ಸಂಗ್ರಹಿಸಿದ್ದಾರೆ. ವೀ ಯಿ ಮತ್ತು ಮಥಾಯಸ್ ಬ್ಲೂಬಮ್ ತಲಾ 3 ಅಂಕ ಗಳಿಸಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಅನ್ನಾ ಮುಝಿಚುಕ್ (4.5) ಏಳನೇ ಸುತ್ತಿನ ನಂತರ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಅವರು ಕಜಾಕಸ್ತಾನದ ಬಿಬಿಸಾರಾ ಅಸುನ್ಬಯೇವಾ (3) ಜೊತೆ ಡ್ರಾ ಮಾಡಿಕೊಂಡರು.

ಭಾರತದ ವೈಶಾಲಿ ರಮೇಶಬಾಬು ಅವರು ಚೀನಾದ ತಾನ್ ಝೊಂಗ್‌ಇ (2.5) ಅವರನ್ನು ಸೋಲಿಸುವ ಮೂಲಕ ನಾಲ್ಕು ಪಾಯಿಂಟ್‌ಗಳೊಡನೆ ಎರಡನೇ ಸ್ಥಾನಕ್ಕೇರಿದರು. ಭಾರತದ ದಿವ್ಯಾ ದೇಶಮುಖ್ ಮತ್ತು ರಷ್ಯಾದ ಕ್ಯಾತರಿನಾ ಲಾಗ್ನೊ ನಡುವಣ ಪಂದ್ಯ ಪ್ರಗತಿಯಲ್ಲಿತ್ತು.



ಜಾವೊಖಿರ್ ಸಿಂದರೋವ್

ಆಸ್ಟ್ರೇಲಿಯಾಕ್ಕೆ ಮಣಿದ ಭಾರತ

ಪಥಮ್ ಥಾನಿ (ಥಾಯ್ಲೆಂಡ್) (ಪಿಟಿಐ): ಎಎಫ್‌ಸಿ 20 ವರ್ಷದೊಳಗಿನ ಮಹಿಳಾ ಏಷ್ಯನ್ ಕಪ್ ಟೂರ್ನಿಯಲ್ಲಿ ಭಾರತ ಫುಟ್‌ಬಾಲ್ ತಂಡದ ನಿರಾಶಾದಾಯಕ ಪ್ರದರ್ಶನ ಮುಂದುವರಿಸಿದೆ. ಭಾರತದ ವನಿತೆಯರು ಭಾನುವಾರ 0-5 ಅಂತರದಿಂದ ಆಸ್ಟ್ರೇಲಿಯಾ ತಂಡಕ್ಕೆ ಸೋತರು.

ಆಸ್ಟ್ರೇಲಿಯಾ ಪರ ಸ್ಕೈ ಹಾಲ್ಮರಿಕ್ (38ನೇ, 39ನೇ, 48ನೇ) ಹ್ಯಾಟ್ರಿಕ್ ಗೋಲು ದಾಖಲಿಸಿದರು. ಡ್ಯಾನೆಲ್ಲಾ ಬ್ರೂಟಸ್ (54') ಮತ್ತು ಡೈಸಿ ಬ್ರೌನ್ (90 + 4') ಆಸ್ಟ್ರೇಲಿಯಾ ಪರ ಇನ್ನೆರಡು ಗೋಲುಗಳನ್ನು ಸೇರಿಸಿದರು.

ಸಿ ಗುಂಪಿನಲ್ಲಿರುವ ಭಾರತಕ್ಕೆ ಇದು ಸತತ ಎರಡನೇ ಸೋಲು. ಇದಕ್ಕೂ ಮುನ್ನ ಜಪಾನ್ ವಿರುದ್ಧ 0-6ರಿಂದ ಮುಗ್ಗರಿಸಿತ್ತು. ನಾಲ್ಕು ತಂಡಗಳ ಅಂಕಪಟ್ಟಿಯಲ್ಲಿ ಭಾರತ ಕೊನೆಯ ಸ್ಥಾನದಲ್ಲಿದೆ. ಮೊದಲೆರಡು ಸ್ಥಾನದಲ್ಲಿರುವ ಆಸ್ಟ್ರೇಲಿಯಾ (6 ಅಂಕ) ಮತ್ತು ಜಪಾನ್ (3) ನಾಕೌಟ್‌ಗೆ ಈಗಾಗಲೇ ಅರ್ಹತೆ ಪಡೆದಿದೆ. ಬುಧವಾರ ಭಾರತ ತಂಡವು ತನ್ನ ಗುಂಪಿನ ಕೊನೆಯ ಪಂದ್ಯವನ್ನು ತೈವಾನ್ ಎದುರು ಆಡಲಿದೆ.

ಗ್ರೆನೆಡಾ: ಭಾರತಕ್ಕೆ ಉತ್ತಮ ಸಾಧನೆಯ ವಿಶ್ವಾಸ

ಶೂಟಿಂಗ್ ವಿಶ್ವಕಪ್ ಇಂದಿನಿಂದ

ಗ್ರೆನೆಡಾ (ಸ್ಪೇನ್), (ಪಿಟಿಐ): ಭಾರತದ ಪಿಸ್ತೂಲ್ ಮತ್ತು ರೈಫಲ್ ಶೂಟರ್‌ಗಳು, ಸೋಮವಾರ ಇಲ್ಲಿ ಆರಂಭವಾಗುವ ಋತುವಿನ ಮೊದಲ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಟೂರ್ನಿಯಲ್ಲಿ, ಕಳೆದ ವರ್ಷ ಪ್ರದರ್ಶಿಸಿದ ಪ್ರಾಬಲ್ಯವನ್ನು ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ. ಹೋದ ವರ್ಷ ಭಾರತದ ಶೂಟರ್‌ಗಳು ಭಾಗವಹಿಸಿದ್ದ ಪ್ರತಿಯೊಂದು ವಿಶ್ವಕಪ್‌ನಲ್ಲಿ ಉತ್ತಮ ಸಾಧನೆಯೊಡನೆ ಕೆಲವು ಮೈಲಿಗಲ್ಲುಗಳನ್ನೂ ಸ್ಥಾಪಿಸಿದ್ದರು.

ಮೊರಕ್ಕೊದಲ್ಲಿ ನಡೆದ ವರ್ಷದ ಮೊದಲ ಶಾಟ್‌ಗನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ನಿರ್ವಹಣೆ ಕಳಪೆಯಾಗಿತ್ತು. ಭಾರತ ಒಂದೂ ಪದಕ ಗೆದ್ದಿರಲಿಲ್ಲ. ಆದರೆ ಸಾಂಪ್ರದಾಯಿಕವಾಗಿ ಪಿಸ್ತೂಲ್ ಮತ್ತು ರೈಫಲ್ ಶೂಟಿಂಗ್‌ನಲ್ಲಿ ಭಾರತ ಉತ್ತಮ ಸಾಧನೆ ತೋರಿದೆ. ಹೀಗಾಗಿ ಸ್ಪರ್ಧೆಗಳಲ್ಲಿ ಉಮೇದು ಇದೆ.

ತಂಡದಲ್ಲಿ ರಿದಂ ಸಾಂಗ್ವಾನ್, ಅಂಜುಮ್ ಮೌದ್ಗಿಲ್ ಮತ್ತು ಮೆಹುಲಿ ಘೋಷ್ ಅಂಥ ಒಲಿಂಪಿಯನ್‌ಗಳಿದ್ದಾರೆ. ಆದರೆ ಒಂದೇ ಒಲಿಂಪಿಕ್ಸ್‌ನಲ್ಲಿ ಅವಳಿ ಪದಕ ಗಳಿಸಿದ್ದ ಮನು ಭಾಕರ್ ತಂಡದಲ್ಲಿ ಸ್ಥಾನ ಪಡೆದಿಲ್ಲ.

ರಾಷ್ಟ್ರೀಯ ತಂಡದ ಎಲ್ಲರಿಗೂ ಅವಕಾಶ ಮಾಡಿಕೊಡಲು ರಾಷ್ಟ್ರೀಯ ಫೆಡರೇಷನ್ ಸರದಿ (ರೊಟೇಷನ್) ನೀತಿ ಅನುಸರಿಸುತ್ತಿದೆ. ಮನು, ಸುರುಚಿ ಇಂದರ್ ಸಿಂಗ್ ಮತ್ತು ಸಾಮ್ರಾಟ್ ಅವರು ಮ್ಯೂನಿಚ್‌ನಲ್ಲಿ ಮುಂದಿನ ತಿಂಗಳು ನಡೆಯುವ ವಿಶ್ವಕಪ್‌ನಲ್ಲಿ ಅವಕಾಶ ಪಡೆಯುವ ನಿರೀಕ್ಷೆಯಿದೆ.

ಮಹಿಳೆಯರ ವಿಭಾಗದಲ್ಲಿ ರಿದಂ ಅವರು ಏಷ್ಯನ್ ಗೇಮ್ಸ್ ಆಯ್ಕೆಗೆ ರೇಸ್‌ನಲ್ಲಿ ಉಳಿಯಬೇಕಾದರೆ ಇಲ್ಲಿ ಉತ್ತಮ ಪ್ರದರ್ಶನ ನೀಡಬೇಕಾಗಿದೆ. ಈ ಹಿಂದೆ ಅವರು ವಿಶ್ವಕಪ್‌ಗಳಲ್ಲಿ ಸ್ವಲ್ಪದರಲ್ಲೇ ಪದಕ ಕಳೆದುಕೊಂಡಿದ್ದರು. 2024ರ ಕೈರೊ ವಿಶ್ವಕಪ್‌ನ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. 2024ರ ದೆಹಲಿ ವಿಶ್ವಕಪ್ ಫೈನಲ್‌ನಲ್ಲೂ ನಾಲ್ಕನೇ ಸ್ಥಾನ ಪಡೆದಿದ್ದರು. ಕಳೆದ ವರ್ಷ ನಿಂಗ್ಬೊದಲ್ಲಿ ಐದನೇ ಸ್ಥಾನ ಪಡೆದಿದ್ದರು. ಹೀಗಾಗಿ ಅವರಿಗೆ ಈ ಕೂಟ ಪ್ರಮುಖವಾಗಿದೆ.

ಅಂಜುಂ ಮತ್ತು ಮೆಹುಲಿ ಕೂಡ ವರ್ಷದ ಮೊದಲ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡುವ ತವಕದಲ್ಲಿದ್ದಾರೆ. ಮೆಹುಲಿ 2023ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗಳಿಸಿದ್ದರು. ಅವರು 10 ಮೀ. ಏರ್ ರೈಫಲ್‌ನಲ್ಲಿ ಜಕಾರ್ತಾದಲ್ಲಿ (2024) ಮತ್ತು ಅಲ್ಮಾಟಿಯಲ್ಲಿ (2025) ನಾಲ್ಕನೇ ಸ್ಥಾನ ಗಳಿಸಿದ್ದರು.

ಮಹಿಳೆಯರ 50 ಮೀ. ರೈಫಲ್ ತ್ರಿ ಪೊಷಿಷನ್ ಸ್ಪರ್ಧೆಯಲ್ಲಿ ಅಂಜುಂ ಲಯಕ್ಕೆ ಮರಳುವ ನಿರೀಕ್ಷೆಯಲ್ಲಿದ್ದಾರೆ. ದೆಹಲಿಯಲ್ಲಿ ಈ ವರ್ಷದ ಆರಂಭದಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಪಡೆದಿದ್ದು ಅವರಲ್ಲಿ ವಿಶ್ವಾಸ ಮೂಡಿಸಿದೆ.

ವಾಕ್ ಮತ್ತು ಶ್ರವಣದೋಷ ಹೊಂದಿರುವ ರೈಫಲ್ ಶೂಟರ್ ಧನುಷ್ ಶ್ರೀಕಾಂತ್ ಸುಮಾರು ಮೂರು ವರ್ಷಗಳ ನಂತರ ತಂಡಕ್ಕೆ ಮರಳಿದ್ದಾರೆ. 23 ವರ್ಷ ವಯಸ್ಸಿನ ಈ ಶೂಟರ್ 2022ರಲ್ಲಿ ಬಾಕುವಿನಲ್ಲಿ (ಅಜರ್‌ಬೈಜಾನ್) ಕೊನೆಯ ಬಾರಿ ಸ್ಪರ್ಧಿಸಿದ್ದರು. ಕಳೆದ ವರ್ಷ ಟೋಕಿಯೊ ಡೆಫಿಲಿಂಪಿಕ್ಸ್‌ನಲ್ಲಿ ಅವರು 10 ಮೀ. ಏರ್ ರೈಫಲ್‌ನಲ್ಲಿ ವಿಶ್ವ ದಾಖಲೆಯ 252.2 ಸ್ಕೋರ್‌ನೊಡನೆ ಚಿನ್ನ ಗೆದಿದ್ದರು. ತಂಡದಲ್ಲಿ ಅರ್ಷದೀಪ್ ಸಿಂಗ್ (10 ಮೀ. ಏರ್ ರೈಫಲ್), ವಿಜಯವೀರ್ ಸಿಧು (25 ಮೀ. ರ್‍ಯಾಪಿಡ್‌ಫೈರ್) ಅಂಥ ಅನುಭವಿಗಳಿದ್ದಾರೆ.



ರಿದಂ ಸಾಂಗ್ವಾನ್

ಬಾಕ್ಸಿಂಗ್: ಮೀನಾಕ್ಷಿ, ಜೈಸ್ಮಿನ್ ಸೆಮಿಗೆ

ಉಲಾನ್ ಬಾತರ್ (ಮಂಗೋಲಿಯಾ) (ಪಿಟಿಐ): ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಮಹಿಳೆಯರ ಯಶಸ್ಸಿನ ಓಟವನ್ನು ಮುಂದುವರಿಸಿದೆ. ಹಾಲಿ ವಿಶ್ವ ಚಾಂಪಿಯನ್‌ಗಳಾದ ಮೀನಾಕ್ಷಿ ಹೂಡಾ ಮತ್ತು ಜೈಸ್ಮಿನ್ ಲಂಬೋರಿಯಾ ಅವರು ಭಾನುವಾರ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ.

ಪುರುಷರ ವಿಭಾಗದಲ್ಲಿ ಲೋಕೇಶ್, ಆಕಾಶ್ ಮತ್ತು ಹರ್ಷ್ ಚೌಧರಿ ಅವರೂ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಮಹಿಳೆಯರ 48 ಕೆ.ಜಿ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೀನಾಕ್ಷಿ 5-0 ಅಂತರದ ಸರ್ವಾನುಮತದ ತೀರ್ಪಿನಿಂದ ಜಪಾನ್‌ನ ಯುಕಾ ಸದಾಮಟ್ಸು ಅವರನ್ನು ಮಣಿಸಿದರು. 57 ಕೆ.ಜಿ ವಿಭಾಗದಲ್ಲಿ ಜೈಸ್ಮಿನ್ ಅವರೂ 5-0 ಅಂತರದಿಂದ ಚೀನಾದ ಜಿಯಿ ಚೆನ್ ಅವರನ್ನು ಹಿಮ್ಮೆಟ್ಟಿಸಿದರು.

ಪುರುಷರ 85 ಕೆಜಿ ವಿಭಾಗದಲ್ಲಿ ಕಣದಲ್ಲಿದ್ದ ಲೋಕೇಶ್ 5-0 ಅಂತರದಿಂದ ಕೊರಿಯಾದ ಗಿಚೇ ಕಿಮ್ ವಿರುದ್ಧ ಜಯ ಸಾಧಿಸಿದರು. 75 ಕೆಜಿ ವಿಭಾಗದಲ್ಲಿ ಆಕಾಶ್ ಅದೇ ಅಂತರದಿಂದ ತುರ್ಕಮೆನಿಸ್ತಾನದ ಯ್ಹಾಸ್ ಬಗ್ಯಾರೋವ್ ಅವರನ್ನು ಮಣಿಸಿದರು. 96 ಕೆಜಿ ವಿಭಾಗದಲ್ಲಿ ಹರ್ಷ್ ಅವರು ಕಿರ್ಗಿಸ್ತಾನದ ಟೈನಿಸ್ತಾನ್ ಅಲಿಬೇವ್ ಅವರನ್ನು ಸೋಲಿಸಿದರು.

ಪುರುಷರ ವಿಭಾಗದಲ್ಲಿ ಭಾರತದ ಆರು ಮಂದಿ ಸೆಮಿಫೈನಲ್ ಪ್ರವೇಶಿಸಿದಂತಾಗಿದೆ.